ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Wednesday 8th May 1974. Vaishaka 18, 1896 S. E.

The House met in the Assembly Chamber, Vidhana Soudha, at Nine of the Clock.

MADAM SPEAKER: (SMT. K. S. NAGARATHNAMMA) in the Chair.

BUDGET ESTIMATES FOR 1974-75
DEMANDS FOR GRANTS

Dmand Nos : 10, 19, 20, 35, 55, 57, 58, and 41—Debete Continued.

MADAM SPEAKER.—The Hon'ble Minister Sri S. B. Nagaral to reply on the Demands.

† ಶ್ರೀ ಎಸ್. ಬಿ. ನಗರಾಳ್ (ಸಣ್ಣ ನೀರಾವರಿ ಶಾಖೆಯ ರಾಜ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಮೊನ್ನೆಯಿಂದ ಹಿಡಿದು ನಿನ್ನೆಯವರೆಗೆ ಸಣ್ಣ ನೀರಾವರಿ ಬೇಡಿಕೆಗಳ ವಿಷಯವಾಗಿ ಈ ಸದನದ ಅನೇಕ ಸನ್ಮಾನ್ಯ ಸದಸ್ಯರು ಮಾತನಾಡಿ ಈ ದೇಶದಲ್ಲಿ ನೀರಾವರಿಯ ಬಗ್ಗೆ ಇಟ್ಟಿರತಕ್ಕ ಅನುಕಂಪ, ಅದರಲ್ಲಿರತಕ್ಕ ತೊಂದರೆ, ಮುಂದೆ ಇದರ ಬಗ್ಗೆ ತೆಗೆದುಕೊಳ್ಳಬೇಕಾದ ಕೆಲಸ ಕಾರ್ಯಗಳ ಬಗ್ಗೆ ತೀವ್ರ ಕಳಕಳಿಯಿಂದ ಈ ಸದನಕ್ಕೆ ಸಲಹೆಗಳನ್ನು ಕೊಟ್ಟಿದ್ದಾರೆ. ಆ ರೀತಿಯಾಗಿ ಸರ್ಕಾರದವರು ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೊಟ್ಟಿರುವ ಹಣದಲ್ಲಿ ಯಾವ್ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ನಿಗದಿಮಾಡಿ ಈಗಾಗಲೇ ಅನೇಕ ಕೆಲಸಗಳನ್ನು ತೆಗೆದುಕೊಂಡಿದ್ದಾಗಿದೆ. ಮಾನ್ಯ ಸದಸ್ಯರು ಬಡ್ಜೆಟ್ಟಿನಲ್ಲಿ ಈ ಬಾಬಿಗಾಗಿ ಕೊಟ್ಟಿರತಕ್ಕ ಹಣವನ್ನು ಸಹ ನೋಡಿದ್ದಾರೆ. ೧೯೭೪-೭೫ನೇ ಸಾಲಿನಲ್ಲಿ ೫ ಕೋಟಿ ೫೪ ಲಕ್ಷ ರೂಪಾಯಿಗಳನ್ನು ಪಂಚವಾರ್ಷಿಕ ಯೋಜನೆಯಲ್ಲಿ ಖರ್ಚುಮಾಡಿ ಅನೇಕ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುವ ವ್ಯವಸ್ಥೆ ಮಾಡಿದ್ದರೂ ಅದರಲ್ಲಿ ಸ್ಪಿಲ್ಓವರ್ ಆಗಿರತಕ್ಕ ೧೨೫೬ ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿದೆ. ಅದರ ಪೈಕಿ ೬೮೦ ಕೆಲಸಗಳನ್ನು ಈ ವರ್ಷವೇ ಮುಗಿಸಬೇಕೆಂಬ ಧೋರಣೆಯಿಂದ ಅದಕ್ಕೆ ಬೇಕಾದಂಥ ಹಣವನ್ನು ಒದಗಿಸಲಾಗಿದೆ. ಇದರ ಜೊತೆಗೆ ಇನ್ನೂ ೨೨೬ ಹೊಸ ಕೆಲಸಗಳನ್ನು ಸಹ ಸೇರಿಸಲಾಗಿದೆ. ಆ ಹೊಸ ಕೆಲಸಗಳಲ್ಲಿ ಸೌತ್ ಜೋನ್‌ಗೆ ೧೭೬ ಕೆಲಸಗಳಿಗೆ ೩೬ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ನಾರ್ತ್ ಜೋನಿಗೆ ೫೦ ಲಕ್ಷ ರೂಪಾಯಿಗಳ ಕೆಲಸಗಳನ್ನು ಮಂಜೂರುಮಾಡಿ ೨೪ ಲಕ್ಷ ೭೦ ಸಾವಿರ ರೂಪಾಯಿಗಳನ್ನು ೧೯೭೪-೭೫ನೇ ಸಾಲಿನಲ್ಲಿ ಖರ್ಚುಮಾಡುವ ದೆಸೆಯಿಂದ ಒದಗಿಸಲಾಗಿದೆ. ಈಗ ಒಟ್ಟು ೪೪೨೩ ಕೆರೆಗಳು ರಿಪೇರಿಯಾಗಬೇಕಾಗಿದೆ. ಅವುಗಳಿಂದ ಸುಮಾರು ೧೬ ಲಕ್ಷ ೯೯ ಎಕರೆಗಳಷ್ಟು ನೀರಾವರಿಯಾಗುತ್ತದೆ. ಆ ಕೆರೆಗಳನ್ನು ಸರಿಯಾದ ದೃಷ್ಟಿಯಿಂದ ಇಟ್ಟುಕೊಳ್ಳುವುದಕ್ಕೆ ಹಾಗೂ ಮೇಂಟೇನ್ ಮಾಡುವುದಕ್ಕೆ ೩ ಕೋಟಿ ಒಂದು ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಲಾಗಿದೆ. ಸರ್ವೇ ಸಾಧಾರಣವಾಗಿ ೧೭ ಲಕ್ಷ ಎಕರೆ ನೀರಾವರಿ ಆಗತಕ್ಕ ಕೆರೆಗಳನ್ನು ಮೇಂಟೇನ್ ಮಾಡುವುದಕ್ಕೆ ಎಕರೆಗೆ ೨೦ ರೂಪಾಯಿಗಳಷ್ಟು ಖರ್ಚು ಸಹ ಬೀಳಲಾರದೆಂಬ ಪರಿಸ್ಥಿತಿಯಲ್ಲಿದೆ. ಕೆಲವು ಮಾನ್ಯ ಸದಸ್ಯರು ಹಳೆಯ ಕೆರೆಗಳ ದುರಸ್ತಿ ಸರಿಯಾಗಿ ಆಗಿಲ್ಲ, ಅನೇಕ ಕೆನಾಲ್‌ಗಳ ತೂಬುಗಳನ್ನು ಸರಿಯಾಗಿ ಮೇಂಟೇನ್ ಮಾಡಿಲ್ಲವೆಂಬುದಾಗಿ ಸಲಹೆ ಕೊಟ್ಟಿದ್ದಾರೆ.

(ಶ್ರೀ ಎಸ್. ಬಿ. ನಾಗರಾಳ್)

ಆದ್ದರಿಂದ ನಮ್ಮಲ್ಲಿ ಈಗ ಇರತಕ್ಕ ೩ ಕೋಟಿ ಒಂದು ಲಕ್ಷ ರೂಪಾಯಿಗಳಲ್ಲಿ ಟಾಪ್ ಪ್ರಿಯಾರಿಟಿ ಕೊಟ್ಟು ಕೆರೆಗಳ ರಿಪೇರಿ ಮಾಡಲು ವಿಶೇಷವಾಗಿ ಆಸಕ್ತಿಯನ್ನು ವಹಿಸಿವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇವೆ. ಈಗ ನಮಗೆ ಒದಗಿಸತಕ್ಕ ಹಣದಲ್ಲಿ ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಬಾಬಿಗೆ ೪೫ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಅದರ ಬಗ್ಗೆ ನನ್ನಲ್ಲಿರುವ ಅಂಕಿ ಅಂಶಗಳನ್ನು ಈ ಮಹಾಸಭೆಯ ಮುಂದೆ ಇಡಬಯಸುತ್ತೇನೆ. ಈ ಸಾಲಿನಲ್ಲಿ ೯ ಕೋಟಿ ೧೭ ಲಕ್ಷ ೬೫ ಸಾವಿರ ರೂಪಾಯಿಗಳಲ್ಲಿ ೩ ಕೋಟಿ ೧ ಲಕ್ಷ ರೂಪಾಯಿಗಳನ್ನು ಕೆರೆಗಳ ಮೇಂಟೆನೆನ್ಸ್ ಗೋಸ್ಕರವಾಗಿಯೂ, ೬೪ ಲಕ್ಷ ರೂಪಾಯಿಗಳನ್ನು ಫ್ಲಡ್ ಕಂಟ್ರೋಲ್‌ಗಾಗಿಯೂ, ಪ್ಲಾನ್ ಸ್ಕೀಮ್‌ಗಾಗಿ ೫ ಕೋಟಿ ೫೦ ಲಕ್ಷ ರೂಪಾಯಿಗಳನ್ನು ಇಡಲಾಗಿದೆ. ಇನ್ನು ಚಾಮರಾಜನಗರದ ಮಾನ್ಯ ಸದಸ್ಯರಾದ ಶ್ರೀ ಪುಟ್ಟಸ್ವಾಮಿಯವರು ಅಲ್ಲಿನ ಕೆರೆಗಳ ರಿಪೇರಿ ಕೆಲಸ ಸಮರ್ಪಕವಾಗಿ ಆಗಿಲ್ಲವೆಂದು ಹೇಳಿದ್ದಾರೆ. ಅಲ್ಲಿನ ಕೆಲವು ಕೆರೆಗಳ ರಿಪೇರಿ ಕೆಲಸ ಬಹಳ ಜಾಗ್ರತೆಯಾಗಿ ಆಗ ಬೇಕಾಗಿದೆ ಕೆಲವು ಕೆರೆಗಳನ್ನು ಇನ್ನೂ ದೊಡ್ಡದಾಗಿ ಮಾಡಬೇಕಾಗಿದೆ. ಆದರೆ ಅಲ್ಲಿ ಆಗಬೇಕಾದಂಥ ಲ್ಯಾಂಡ್ ಅಕ್ವಿಸಿಷನ್ ಕೆಲಸ ಇನ್ನೂ ಇವತ್ತಿನವರೆಗೂ ಕಂಪ್ಲೀಟ್ ಆಗಿಲ್ಲ. ಅಲ್ಲಿನ ಜನರ ತಕರಾರಿನ ಕಾರಣ ಇದು ನಿಧಾನವಾಗುತ್ತಿದೆ ಆದ್ದರಿಂದ ಈಗ ಅತಿ ಜಾಗ್ರತೆಯಾಗಿ ಲ್ಯಾಂಡ್ ಅಕ್ವಿಸಿಷನ್ ಕೆಲಸವನ್ನು ಮುಗಿಸಿ ಆ ಕೆರೆಗಳ ರಿಪೇರಿ ಕೆಲಸವನ್ನು ಮಾಡುತ್ತೇವೆ. ಅದೇ ರೀತಿಯಲ್ಲಿ ಹುದೂರು ಟ್ಯಾಂಕ್ ವಿಷಯ. ಅದೂ ಕೂಡ ಲ್ಯಾಂಡ್ ಅಕ್ವಿಸಿಷನ್ ದೆಸೆಯಿಂದ ಹಾಗೆಯೇ ಏನೂ ರಿಪೇರಿ ಕೆಲಸ ಆಗದೆ ಉಳಿದಿದೆ. ಗುಂಡ್ಲುಪೇಟೆಯಲ್ಲಿರುವ ಕೆಲವು ಕೆರೆಗಳ ಕೆಲಸಗಳು ಮಾಡಿಯೂ ಇರಿಗೇಷನ್ ನಡೆದಿರುವುದರಿಂದ, ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಅಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿರುವುದರಿಂದ, ಅದರ ಬಗ್ಗೆ ನಾನು ವಿಶೇಷವಾಗಿ ಪ್ರಸ್ತಾಪ ಮಾಡುವ ಅವಶ್ಯಕತೆ ಇಲ್ಲ ಮೈನರ್ ಇರಿಗೇಷನ್ ವಿಚಾರವಾಗಿ ಆ ಭಾಗದಲ್ಲಿರತಕ್ಕ ಜನರಿಗೆ ಹೆಚ್ಚಿನ ಸೌಕರ್ಯವನ್ನು ಒದಗಿಸುವ ಪ್ರಸಂಗ ಬಂದಾಗ್ಗೆ ನಮ್ಮಲ್ಲಿರುವ ದುಡ್ಡನ್ನು ನೋಡಿಕೊಂಡು ಆ ಕಾರ್ಯಗಳನ್ನು ತೆಗೆದುಕೊಳ್ಳಲಾಗುತ್ತದೆ. ಈ ವಿಚಾರದಲ್ಲಿ ಅಲ್ಲಿ ಯಾರಿಗೂ ಅನ್ಯಾಯವಾಗದ ಹಾಗೆ ಸರಿಯಾದ ರೀತಿಯಲ್ಲಿ ಅಲ್ಲಿನ ಕೆಲಸಕಾರ್ಯಗಳನ್ನು ಸರ್ಕಾರ ಮಾಡುತ್ತದೆಂದು ಹೇಳಬಯಸುತ್ತೇನೆ. ಇನ್ನು ಮಾನ್ಯ ಶ್ರೀ ಮಾರ್ಗದ ಮಲ್ಲಪ್ಪನವರು ಹಿರೆಕಟ್ಟಿ ಟ್ಯಾಂಕ್ ವಿಷಯವಾಗಿ ರೆಫರ್ ಮಾಡಿದರು. ಅದರ ಬಗ್ಗೆ ಸಾಕಷ್ಟು ಫಂಡನ್ನು ಒದಗಿಸಿ ಆ ಕೆರೆಯ ಕೆಲಸಗಳನ್ನು ತ್ವರಿತವಾಗಿ ಕೈಗೊಳ್ಳುತ್ತೇವೆ. ಇನ್ನು ಬಿಜಾಪುರ ಜಿಲ್ಲೆಯ ಮಾನ್ಯ ಶ್ರೀ ಸಜ್ಜನ್ ಅವರು ಮತ್ತು ಮಾನ್ಯ ಶ್ರೀ ಜಾಂಗಿಯವರು ತಮಗೆ ತೋರಿದ ಸಲಹೆಗಳನ್ನು ನಮ್ಮ ಎದುರಿಗೆ ಇಟ್ಟಿದ್ದಾರೆ. ಅವರು ಏನೇನು ಸಲಹೆಗಳನ್ನು ಈಗ ಕೊಟ್ಟಿದ್ದಾರೋ ಅವೆಲ್ಲವನ್ನೂ ನನ್ನ ಗಮನದಲ್ಲಿಟ್ಟುಕೊಂಡು ಸರಿಯಾದ ದೃಷ್ಟಿಯಿಂದ ಪ್ರಯಾರಿಟಿ ಕೊಟ್ಟು ಕೆಲಸಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ. ಬಿಜಾಪುರದ ಕೆಲವು ಸದಸ್ಯರು ತಂತಮ್ಮ ಕ್ಷೇತ್ರಗಳಲ್ಲಿ ಬರಗಾಲ ಪರಿಸ್ಥಿತಿ ಬಂದಾಗ ಯಾವ್ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆಯೆಂಬುದಾಗಿ ಕೇಳಿದ್ದಾರೆ. ೬೪, ಫ್ಯಾಮಿನ್ ಏಟುವನಲ್ಲಿ ದುಷ್ಕಾಲದ ಬಗ್ಗೆ ೩೩ ಅಪ್ಟು ಇರಿಗೇಷನ್ ಸ್ಕೀಂಗಳನ್ನು ತೆಗೆದುಕೊಂಡಿದ್ದೇವೆ. ಸಾಧ್ಯವಾದಷ್ಟುಗೂ ಅವನ್ನೆಲ್ಲಾ ಮುಗಿಸಿ ಅಲ್ಲಿರತಕ್ಕ ಜನರಿಗೆ ಆಗಿರುವ ತೊಂದರೆಗಳನ್ನು ದೂರ ಮಾಡುವ ದೃಷ್ಟಿಯಿಂದ ಕೆಲಸಮಾಡುತ್ತಿದ್ದೇವೆ. ಅದಕ್ಕಾಗಿ ಸರ್ಕಾರದವರು ಕೆಲವರು ಸ್ಕೀಂಗಳನ್ನು ಮಾಡಿ ಆ ಸ್ಕೀಂಗಳಲ್ಲಿ ಕೆಲಸ ಕಾರ್ಯಗಳು ಈಗಾಗಲೇ ನಡೆಯುತ್ತಿವೆ. ಅವು ಯಾವುವೆಂದರೆ :

1: Constructing a barrage across Krishna river near Galgali Bil-i Taluk.
2, Construction of a barrage across Malaprabha river neer Kamatgi, Hungund Taluk
3. Contruction of a barrage across Krishna neer Aijole
4. Barrage neer Korti Bilgi taluk.
5. Barrage neer Chelanhgud
6. Barrage across Ghataprabha river neer Bagalkot:
7. Barrage across Malaprabha river Asangi

---

† Asteriks indicate that Remarks or Speaches have not been revised by the members Concerned.

ಇನ್ನು ಕೆಲವು ಕೆಲಸಗಳನ್ನು ಈಗಾಗಲೇ ಪ್ರೊಪೋಜ್ ಮಾಡಿದ್ದೇವೆ. ಅವು ಯಾವುವೆಂದರೆ :

1. Barrage near Chadchan, Mudhol Taluk
2. Barrage near Uttur, Mudhol taluk.

ಹೀಗೆ ಒಟ್ಟು ೯ ಕೆಲಸಗಳು ೯ ಲಕ್ಷ ೭೯ ಸಾವಿರದ ವೆಚ್ಚದಲ್ಲಿ ಹಾಲಿ ನಡೆಯುತ್ತಿವೆ. ಇಲ್ಲಿ ಇನ್ನೂ ಅನೇಕ ಕೆಲಸಗಳಿವೆ. ಬೇಕೆಂದರೆ ಓದಿ ಹೇಳುತ್ತೇನೆ.

ಇನ್ನು ಕಾಂಪೆನ್‌ಸೇಷನ್ ವಿಚಾರದಲ್ಲಿ ಹಣವನ್ನು ಕೊಡತಕ್ಕುದು ಬಹಳ ನಿಧಾನವಾಗುತ್ತವೆ ಎಂದು ಕೆಲವರು ಹೇಳಿದ್ದಾರೆ. ಆದರೆ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ ವಿಧಿ ನಿಯಮಗಳನ್ನು ಪಾಲಿಸಬೇಕಾದುದರಿಂದ ಇದರಬಗ್ಗೆ ಸ್ವಲ್ಪ ತಡವಾಗುವುದು ಸ್ವಾಭಾವಿಕ. ಆದರೆ ಹಾಲಿ ನಮ್ಮಲ್ಲಿ ಇರತಕ್ಕ ಈ ಅಕ್ವಿಜಿಷನ್ ಕೇಸುಗಳೆಷ್ಟೆಂದರೆ ಗುಲ್ಬರ್ಗಾದಲ್ಲಿ ೭೭ ಕೇಸುಗಳಿವೆ, ಬೆಳಗಾಂನಲ್ಲಿ ೭೦೩ ಕೇಸುಗಳಿವೆ, ಧಾರ್ವಾಡದಲ್ಲಿ ೧೦ ಇವೆ. ಇವುಗಳ ಸಂಬಂಧದಲ್ಲಿ ಹಣವನ್ನು ಬೇಗ ಪಾರ್ಟಿಗಳಿಗೆ ಕೊಡತಕ್ಕ ಬಗ್ಗೆ ಮತ್ತು ಅಕ್ವಿಜಿಷನ್ ಕೇಸುಗಳನ್ನು ಬೇಗ ಇತ್ಯರ್ಥಮಾಡುವುದಕ್ಕೆ ಏನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬ ಬಗ್ಗೆ ನಾನು ಈಗಾಗಲೇ ಸಂಬಂಧಪಟ್ಟ ಸಚಿವರೊಂದಿಗೆ ಮಾತುಕತೆಗಳನ್ನಾಡಿದ್ದೇನೆ. ಇನ್ನು ಮುಂದೆ ಈ ತೊಂದರೆಯನ್ನು ಪರಿಹರಿಸುವುದಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತೇವೆಂಬ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡಬಯಸುತ್ತೇನೆ.

ಇನ್ನು ಕೆಲವು ಮಾನ್ಯ ಸದಸ್ಯರು ಸ್ಪಿಲೋವರ್ ಕೆಲಸಗಳು ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟಿವೆ ಎಂಬುದನ್ನು ತಿಳಿಸಬೇಕೆಂದು ಕೇಳಿದ್ದಾರೆ. ಅದರ ವಿವರಗಳು ಹೀಗಿವೆ: —

ಜಿಲ್ಲೆ		ಸ್ಪಿಲೋವರ್ ಕೆಲಸಗಳು		ಅದಕ್ಕೆ ಬೇಕಾದ ವೆಚ್ಚದಹಣ
ಬೆಂಗಳೂರು	...	೪೮	...	೧ ಕೋಟಿ ೩೭ ಲಕ್ಷ
ಕೋಲಾರ	...	೧೮೬	...	೧ ಕೋಟಿ ೬೫ ಲಕ್ಷ
ತುಮಕೂರು	...	೧೫೯	...	೨ ಕೋಟಿ ೧[illegible] ಲಕ್ಷ
ಮೈಸೂರು	...	೮೨	...	೩ ಕೋಟಿ ೯೨ ಲಕ್ಷ
ಮಂಡ್ಯ	...	೪೭	...	೧ ಕೋಟಿ ೫೧ ಲಕ್ಷ
ಶಿವಮೊಗ್ಗ	...	೨೫	...	೭೫ ಲಕ್ಷ
ಚಿಕ್ಕಮಗಳೂರು	...	೩೫	...	೨೦ ಲಕ್ಷ
ಚಿತ್ರದುರ್ಗ	...	೬೭	...	೨ ಕೋಟಿ ೨೮ ಲಕ್ಷ
ಹಾಸನ	...	೪೧	...	೧ ಕೋಟಿ ೪೨ ಲಕ್ಷ
ದ. ಕನ್ನಡ	...	೧೩	...	೭೧ ಲಕ್ಷ
ಕೊಡಗು	...	೧೧	...	೧೭ ಲಕ್ಷ
ಬೆಳಗಾಂ	...	೧೫೨	...	೩ ಕೋಟಿ ೨೬ ಲಕ್ಷ
ಬಿಜಾಪುರ	...	೭೬	...	೪ ಕೋಟಿ ೮೧ ಲಕ್ಷ
ಗುಲ್ಬರ್ಗ	...	೧೧೭	...	೩ ಕೋಟಿ ೬೩ ಲಕ್ಷ
ರಾಯಚೂರು	...	೫೭	...	೩ ಕೋಟಿ ೫೨ ಲಕ್ಷ
ಬಳ್ಳಾರಿ	...	೬೪	...	೩ ಕೋಟಿ ೨ ಲಕ್ಷ
ಬೀದರ್	...	೩೦	...	೨ ಕೋಟಿ ೧೭ ಲಕ್ಷ
ಧಾರ್ವಾಡ	...	೫೨	...	೨ ಕೋಟಿ ೧೨ ಲಕ್ಷ
ಉ. ಕನ್ನಡ	...	೨೪	...	೧ ಕೋಟಿ ೮೭ ಲಕ್ಷ

ಹೀಗೆ ಒಟ್ಟು ೧೨೫೬ ಸ್ಪಿಲ್ಲೋವರ್ ಕೆಲಸಗಳಿಗೆ ಒಟ್ಟು ಬೇಕಾಗಿರುವ ಮೊತ್ತ ೩೯ ಕೋಟಿ ೭ ಲಕ್ಷ ರೂಪಾಯಿಗಳು ಬೇಕಾಗಿದೆ. ಇದರಲ್ಲಿ ಇಲ್ಲಿಯವರೆಗೆ ೧೯ ಕೋಟಿ ಖರ್ಚಾಗಿದೆ. ಇನ್ನು ಮುಂದೆ ಇದಕ್ಕೆ ಬೇಕಾದುದು ೨೦ ಕೋಟಿ ರೂಪಾಯಿಗಳು. ಇನ್ನು ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಹೊಸ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ ಎಂಬ ಮಾಹಿತಿ ತಿಳಿಸಬೇಕಾಗಿದೆ.

(ಶ್ರೀ ಎಸ್. ಬಿ. ನಾಗರಾಳ್)

ಜಿಲ್ಲೆಯ ಹೆಸರು		ಕೆಲಸಗಳ ಸಂಖ್ಯೆ		ಅದಕ್ಕೆ ಬೇಕಾದ ಮೊಬಲಗು
ಬೆಂಗಳೂರು	...	೨೨	...	೪೩ ಲಕ್ಷದ ೧೮ ಸಾವಿರ
ಕೋಲಾರ	...	೧೩	...	೨೩ ಲಕ್ಷದ ೫೧ ಸಾವಿರ
ತುಮಕೂರು	...	೨೧	...	೨೫ ಲಕ್ಷದ ೯೫ ಸಾವಿರ
ಮೈಸೂರು	...	೧೬	...	೪೯ ಲಕ್ಷದ ೫೭ ಸಾವಿರ
ಮಂಡ್ಯ	...	೧೪	...	೩೪ ಲಕ್ಷದ ೯೧ ಸಾವಿರ
ಶಿವಮೊಗ್ಗ	...	೧೭	...	೬೪ ಲಕ್ಷ
ಚಿಕ್ಕಮಗಳೂರು	...	೧೫	...	೨೩ ಲಕ್ಷದ ೫೪ ಸಾವಿರ
ಚಿತ್ರದುರ್ಗ	...	೩೨	...	೬೭ ಲಕ್ಷದ ೪೧ ಸಾವಿರ
ಹಾಸನ	...	೧೬	...	೨೪ ಲಕ್ಷದ ೧ ಸಾವಿರ
ದ. ಕನ್ನಡ	...	೮	...	೯ ಲಕ್ಷದ ೨೮ ಸಾವಿರ
ಕೊಡಗು	...	೨	...	೧ ಲಕ್ಷದ ೭೦ ಸಾವಿರ
ಬೆಳಗಾಂ	...	೧೧	...	ಎಪ್ಪತ್ತೊಂಬತ್ತು ಸಾವಿರದಾರು
ಬಿಜಾಪುರ	...	೭	...	೩೯ ಲಕ್ಷ
ಗುಲ್ಬರ್ಗ	...	೩	...	೪೮ ಲಕ್ಷ
ರಾಯಚೂರು	...	೩	...	೩೯ ಲಕ್ಷ
ಬಳ್ಳಾರಿ	...	೩	...	೨೧ ಲಕ್ಷ
ಬೀದರ್	...	೩	...	೨೧ ಲಕ್ಷ
ಧಾರ್ವಾಡ	...	೧೦	...	೯೩ ಲಕ್ಷ
ಉ. ಕನ್ನಡ	...	೮	...	೨೯ ಲಕ್ಷ

ಈ ರೀತಿಯಾಗಿ ೨೨೬ ಕೆಲಸಗಳಿಗೆ ೭ ಕೋಟಿ ೧೪ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈ ವರ್ಷ ಕೆಲಸವನ್ನು ಷುರು ಮಾಡುವುದಕ್ಕೆ ೬೪ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ನಾರ್ತ್ ಜೋನಿಗೆ ೨೪ ಲಕ್ಷ ರೂಪಾಯಿಗಳೂ ಮತ್ತು ಸೌತ್ ಜೋನಿಗೆ ೩೯ ಲಕ್ಷದ ೫೧ ಸಾವಿರ ಇನ್ನು ಈ ಇರಿಗೇಷನ್ ಕೆಲಸಗಳನ್ನು ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಪ್ರಕಾರ ಕೈಗೊಳ್ಳಲಾಗಿದೆ ಎಂದರೆ ಯಾವ ಜಿಲ್ಲೆಯಲ್ಲಿ ಪರ್ಸೆಂಟೇಜ್ ಆಫ್ ಇರಿಗೇಷನ್ ೧೦ ಪರ್ಸೆಂಟಿಗಿಂತ ಜಾಸ್ತಿ ಇರುತ್ತದೋ ಅಲ್ಲಿ ಕೆಲಸಗಳನ್ನು ಕಡಿಮೆ ಪ್ರಮಾಣದಲ್ಲೂ ಮತ್ತು ಯಾವ ಜಿಲ್ಲೆಯಲ್ಲಿ ಇದು ೧೦ ಪರ್ಸೆಂಟಿಗಿಂತ ಕಡಿಮೆ ಪ್ರಮಾಣದಲ್ಲಿ ಇರುತ್ತದೋ ಅಲ್ಲಿ ಸ್ವಲ್ಪ ಹೆಚ್ಚಿನ ಕೆಲಸಗಳನ್ನು ಕೈಗೊಳ್ಳಲಾಗಿದೆ. ಆದರೆ ಶಿವಮೊಗ್ಗ ಜಿಲ್ಲೆಯಲ್ಲಿ ಸಾಕಷ್ಟು ಕೆಲಸಗಳನ್ನು ತೆಗೆದುಕೊಂಡಿಲ್ಲವೆಂಬ ವಾದವಿದ್ದಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸಚಿವರು ಒಂದು ಜಿಲ್ಲೆಯನ್ನು ಯೂನಿಟ್ಟಾಗಿ ತೆಗೆದುಕೊಂಡ ಹೇಳುತ್ತಿದ್ದಾರೆ. ಆದರೆ ಅದೇ ಪರ್ಸೆಂಟೇಜನ್ನು ಒಂದು ಡಿವಿಷನ್ ಯೂನಿಟ್ಟಾಗಿಟ್ಟು ಹೇಳಲಿ ನೋಡೋಣ.

I am now giving the Percentage of irrigation in the following Taluk:

1.	Bhadravathi	...	...	78—59
2.	Navalgund	...	...	0—004
3.	Kudligi	...	...	0—05
4.	Gadag	...	...	0—38
5.	Kundagol	...	...	0—38
6.	Naragund	...	...	0—62
7.	Ron	...	...	0—72
8.	Chitapur	...	...	0—97

9.	Hangal	...	...	1—02
10.	Kushtagi	...	...	1—06
11.	Shorapur	...	...	1—25
12.	Bhalki	..	...	1—44
13.	Hubli	...	...	1—72
14.	Byadgi	..	...	1— 9
15.	Jewargi	...	...	1—82
16.	Savanoor	...	...	1—84
17.	Shahapur	...	...	1—·4
18.	Sringeri	...	...	1—94
19.	Shirahatti	...	...	2—11
20.	Lingasugar	...	...	2—13
21.	Yelburga	...	...	2—20
22.	Koppa	...	...	2—47
23.	Muddebihal	...	...	2—71
24.	Aland	...	...	2—94
25.	Gulbarga	...	...	2—97
26.	Marcara	...	...	3—03
27.	Basavakalyar	...	...	3—03
28.	Deodurg	...	...	3—08
29.	Sedam	...	...	3—14
30.	Arasikere	...	...	3—50
31.	Haveri	...	...	3—75
32.	Koppal	...	...	3—77
33.	Bellary	...	...	4—25
34.	Mundargi	...	...	4—26
35.	Afzalpur	...	...	4—32
36.	Bagewadi	...	...	4—38
37.	Sandatti	...	...	4—57
38.	Hadagali	...	...	4—48
39.	Hosadurga	...	...	4—61
40.	Chikkodi	...	...	4—65
41.	Siddapur	...	...	4—82
42.	Aurad	...	...	4—96
43.	Bagalkot	...	...	5—44
44.	Sindagi	...	...	5—89
45.	Ranibennur	...	...	6—04
46.	Holalkere	...	...	6—15
47.	Bijapur	...	...	6—17

ಈಗ ೩೭೮೬ ಸ್ಪಿಲ್‌ಓವರ್ ವರ್ಕ್ಸ್ ತೆಗೆದುಕೊಳ್ಳಬೇಕಾಗಿದೆ ಮುಗಿಯದೆ ಇರುವ ಸ್ಪಿಲ್‌ಓವರ್ ವರ್ಕ್ಸ್‌ಗೆ ೨೦ ಕೋಟಿ ರೂಪಾಯಿ ಬೇಕು. ಮೊದಲು ಅರ್ಧವಾಗಿರುವ ಕೆಲಸ ತೆಗೆದುಕೊಂಡು ನಂತರ ಹೊಸ ಕೆಲಸ ನಿಧಾನವಾಗಿ ತೆಗೆದುಕೊಳ್ಳಬೇಕೆಂದಿದ್ದೇವೆ. ಲಿಫ್ಟ್ ಇರಿಗೇಷನ್ನಿಗೆ ಆದ್ಯತೆ ಕೊಡಬೇಕು. ಹಾಗೆ ಮಾಡಿದರೆ ೫-೬ ತಿಂಗಳಲ್ಲಿ ನೀರಾವರಿಗೆ ಅನುಕೂಲವಾಗುವುದು ಎಂದು ಯೋಚನೆ ಮಾಡಿದ್ದೇವೆ. ಹೊಸ ಕೆರೆ ಕೆಲಸ ತೆಗೆದುಕೊಂಡರೆ ನಿಧಾನವಾಗಿ ಸ್ಪಿಲ್‌ಓವರ್ ಕೆಲಸಗಳಿಗೆ ಅವಕಾಶವಾಗುವುದಿಲ್ಲ. ಅಲ್ಲದೆ ಆ ಕೆಲಸಗಳ ವಿಚಾರದಲ್ಲಿ ಕೂಡ ಸ್ಪಿಲ್‌ಓವರ್ ಆಗುವುದು.

ಶ್ರೀ ಕೆ. ಎಸ್. ವೀರಪ್ಪಗೌಡ.—೬೩ ಕೋಟಿ ರೂಪಾಯಿಗಳನ್ನು ಎಲ್ಲಿ ಖರ್ಚು ಮಾಡಿದ್ದಾರೆ ? ಸ್ಪಿಲ್‌ಓವರ್ ವರ್ಕ್ಸ್ ಇವೆಯೆಂದು ಹೇಳಿದರು. ಕೆಲವು ಕಡೆ ೩ ಕೋಟಿ ಎಂದು ಮತ್ತೆ ಕೆಲವು ಕಡೆ ೩ ಲಕ್ಷ ಎಂದು ಹೇಳಿದರು. ದಾಸರಹಳ್ಳಿ ಕೆರೆ ಕಟ್ಟಿರುವ ಕಡೆ ಇರಿಗೇಷನ್ ಎಷ್ಟಾಗಿದೆ ಎಂಬುದನ್ನು ನೋಡಿದ್ದಾರೆಯೇ ? ನೀರಿರುವ ಕಡೆ ರಿಪೇರಿ, ಕೆರೆ ಮುಂತಾದುವನ್ನು ಮಾಡದೆ ನೀರಿಲ್ಲದಿರುವ ಕಡೆ ಖರ್ಚು ಮಾಡಿದರೆ ಪ್ರಯೋಜನವೇನು ?

ಶ್ರೀ ಎಸ್. ಬಿ. ನಾಗರಾಳ್.—೬೨ ಕೋಟಿ ಸಂಪೂರ್ಣವಾಗಿ ಮೈನರ್ ಇರಿಗೇಷನ್ನಿಗೇ ಖರ್ಚಾಗಿಲ್ಲ, ಮೇಜರ್ ಇರಿಗೇಷನ್ನಿಗೆ ಸಹ ಅದರಲ್ಲಿ ಖರ್ಚಾಗಿದೆ. ಕೆನಾಲ್ಸ್, ರಸ್ತೆ ಮುಂತಾದವುಗಳಿಗೂ ಅದರಲ್ಲಿ ಖರ್ಚಾಗಿದೆ.

ಶ್ರೀ ಕೆ. ಎಸ್. ವೀರಪ್ಪಗೌಡ.—ಮೇಜರ್ ಇರಿಗೇಷನ್ನಿಗೆ ೩-೪ ಕೋಟಿ ರೂಪಾಯಿ ಖರ್ಚಾಗಿದೆ.

ಶ್ರೀ ಎಸ್. ಬಿ. ನಾಗರಾಳ್.—ಸ್ಪಿಲ್‌ಓವರ್ ಕೆಲಸಗಳ ವಿಚಾರ ಹೇಳಿವೆ. ಅವರ ಬಗ್ಗೆ ತಪಶೀಲನ್ನು ಕೊಟ್ಟಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಭಾವ ಪ್ರದೇಶದಲ್ಲಿ ೬೦ ಕೋಟಿ ರೂಪಾಯಿ ಖರ್ಚಾಗಿದೆ. ಅದರಲ್ಲಿ ಸಣ್ಣ ನೀರಾವರಿಗೆ ಎಷ್ಟು ಖರ್ಚಾಗಿದೆ ಎಂಬುದನ್ನು ೭೨-೭೩ ಮತ್ತು ೭೩-೭೪ಕ್ಕೆ ಡಿಸ್ಟ್ರಿಕ್ಟ್‌ವಾರ ಹೇಳಿದರೆ ಒಳ್ಳೆಯದು.

ಶ್ರೀ ಕೆ. ಎಚ್ ಪಾಟೀಲ್.—ಸಬ್ ಡಿವಿಜನ್ನುಗಳಲ್ಲಿ ನೀರಾವರಿ ಕೆಲಸ ತೆಗೆದುಕೊಳ್ಳದಿರುವುದಿದೆಯೋ ? ಕೆಲವು ಕಡೆ ೨ ವರ್ಷದಿಂದ ಏನೂ ಕೆಲಸ ತೆಗೆದುಕೊಂಡಿಲ್ಲ.

ಶ್ರೀ ಎಸ್. ಬಿ. ನಾಗರಾಳ್.—ಸಂಖ್ಯೆ ಹೇಳಿದೆ, ಅವನ್ನು ನೋಡಿದರೆ ಅರ್ಥವಾಗುವುದು. ಗುಲ್ಬರ್ಗದಲ್ಲಿ ೧೧೭ ಸ್ಪಿಲ್‌ಓವರ್ ಕೆಲಸಗಳಿವೆ, ಅದಕ್ಕೆ ೩ ಕೋಟಿ ೬೩ ಲಕ್ಷ ರೂಪಾಯಿ ಅಂದಾಜು ೩೧-೩-೧೯೭೩ರ ವರೆಗೆ ೨೨ ಲಕ್ಷ ಖರ್ಚಾಗಿದೆ. ಅದಕ್ಕೆ ಮುಂದೆ ಬೇಕಾಗುವುದು ೨ ಕೋಟಿ ೭೮ ಲಕ್ಷ. ಬಳ್ಳಾರಿಯಲ್ಲಿ ೩೬೪ ಕೆಲಸಗಳಿವೆ, ಅದಕ್ಕೆ ೩ ಕೋಟಿ ೨ ಲಕ್ಷದ ಅಂದಾಜಾಗಿದೆ. ೩೧-೩-೧೯೭೪ರ ವರೆಗೆ ೧ಕೋಟಿ ೪೯ ಲಕ್ಷ ಖರ್ಚಾಗಿದೆ. ಬಿದರೆಗೆ ೨ ಕೋಟಿ ೧೭ ಲಕ್ಷ ಅಂದಾಜಾಗಿ ೬೯ ಲಕ್ಷ ಖರ್ಚಾಗಿದೆ. ಧಾರವಾಡಕ್ಕೆ ೫೨ ಕೆಲಸಗಳಿಗೆ ೨ ಕೋಟಿ ೧೨ ಲಕ್ಷದ ಅಂದಾಜಾಗಿ ೧.೨೫ ಲಕ್ಷ ಖರ್ಚಾಗಿದೆ. ಉತ್ತರ ಕನ್ನಡ ಜಿಲ್ಲೆಗೆ ೧ ಕೋಟಿ ೮೭ ಲಕ್ಷದ ಅಂದಾಜಾಗಿ ೧ ಕೋಟಿ ೨೧ ಲಕ್ಷ ಖರ್ಚಾಗಿದೆ.

SMT WINNIFRED FERNANDES.—What about South Canara District? He has not said anything about South Canara.

SRI S. B. NAGARAL.—We have taken up 13 works. The estimate is Rs. 21 89 lakhs and expenditure is Rs. 13 lakhs.

ಒಬ್ಬ ಮಾನ್ಯ ಸದಸ್ಯರು.—ಈಗ ಅಭಾವಕೊಳಗಾಗಿರುವ ತಾಲ್ಲೂಕುಗಳೆಷ್ಟಿವೆ ? ಅವುಗಳಿಗೆ ಖಾಯಂ ಪರಿಹಾರ ಒದಗಿಸಲು ಏನು ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಎಸ್. ಬಿ. ನಾಗರಾಳ್.—ಇಲ್ಲಿಯವರೆಗೆ ಖಾಯಂ ಪರಿಹಾರ ನೀಡುವ ಕೆಲಸ ತೆಗೆದುಕೊಂಡಿಲ್ಲ. ಒಂದೇ ಸಲ ಗುಲ್ಬರ್ಗ, ಬಿದರೆ ಮುಂತಾದ ಕಡೆಗಳಲ್ಲಿ ದುಷ್ಕಾಲ ಪ್ರಾಪ್ತವಾಗಿದೆ. ಸರಿಯಾದ ಕೆಲಸಮಾಡಿದರೆ ಈ ರೀತಿಯ ಅಭಾವ ಬರುವುದಿಲ್ಲ ಎಂದು ಅದರ ಬಗ್ಗೆ ಪ್ರಯತ್ನವಿದೆ. ಇದುವರೆಗೆ ಹಾಗೆ ಮಾಡದಿರುವುದರಿಂದ ತೊಂದರೆಯಾಗಿದೆ. ಇಲ್ಲಿಯವರೆಗೆ ಹೊಂದಿ ಒಂದು ನಿಶ್ಚಿತ ಧೋರಣೆ ಅನುಸರಿಸಿಲ್ಲ. ೫೫೧ ಕೋಟಿ ರೂಪಾಯಿಗಳು ಹಂಚಲಾಗುವುದು, ೨೭೬ ಕೆಲಸಗಳನ್ನು ತೆಗೆದುಕೊಂಡಿದೆ. ಇದರ ಬಗ್ಗೆ ೬೪ ಲಕ್ಷ ರೂಪಾಯಿ ಒದಗಿಸಲಾಗಿದೆ. ೧೫೮೭ ಸ್ಪಿಲ್‌ಓವರ್ ಕೆಲಸಗಳಲ್ಲಿ ೪೭೮ ಕೆರೆ ಕೆಲಸ, ೧೦೪ ಲಿಫ್ಟ್ ಇರಿಗೇಷನ್ ಸ್ಕೀಮ್ಸ್ ಪೂರ್ಣಮಾಡಬೇಕೆಂಬ ಧೋರಣೆ ಇದೆ. ಇದರ ಬಗ್ಗೆ ಬಜೆಟ್ಟನ್ನು ಕುರಿತು ಹೇಳುವಾಗ ರಾಜ್ಯಪಾಲರು ತಿಳಿಸಿದ್ದಾರೆ. ೬೩೦ ಕೆಲಸಗಳನ್ನು ಪೂರ್ಣಮಾಡಲು ೨೧ ಕೋಟಿ ರೂಪಾಯಿ ಬೇಕು. ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ೧೫ ಕೋಟಿ ರೂಪಾಯಿ ದೊರೆಯುವುದು. ವರ್ಲ್ಡ್ ಬ್ಯಾಂಕಿನಿಂದ ಸಹಾಯ ಪಡೆಯಲು ಯೋಚಿಸಲಾಗುವುದು. ಕೆಲವು ಸದಸ್ಯರು ತಮಗೆ ಬೇಕಾದವರಿಗೆ ವಿಶೇಷ ಸೌಲತ್ತನ್ನು ಕೊಟ್ಟು ಉಳಿದವರಿಗೆ ಅನ್ಯಾಯ ಮಾಡಿದ್ದಾರೆಂದು ಹೇಳುವುದು ಸರಿಯಲ್ಲ. ಆ ರೀತಿ ಮಾಡಿಲ್ಲ. ಇಂಬ್ಯಾಲೆನ್ಸ್ ಇರುವ ಕಡೆಗೆ ಸಹಾಯ ಮಾಡಲಾಗಿದೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಒಂದು ಕಡೆಗೆ ಮೂರುವರೆ ಕೋಟಿ ಇನ್ನೊಂದು ಕಡೆಗೆ ಮೂರುವರೆ ಲಕ್ಷ ಕೊಟ್ಟಿರುವುದಕ್ಕೆ ಕಾರಣವೇನು ? ಹೀಗೆ ಒಂದು ಕಡೆಗೆ ಕೊಟ್ಟು ಇತರ ಕಡೆಗಳನ್ನು ಕೈಬಿಡಲಾಗಿದೆ. ಇದನ್ನು ಸರಿಪಡಿಸುವ ವಿಚಾರ ಹೇಳಬೇಕು. ಹೀಗೆ ಹೇಳಿದರೆ ಹೇಗೆ?

ಶ್ರೀ ಎಸ್. ಬಿ. ನಾಗರಾಳ್.—ನಾನು ಫಿಗರ್ಸ್ ಹೇಳಿದ್ದೇನೆ. ನಾರ್ತ್ ಡಿವಿಜನ್ನಿಗೆ ೪೫೦ ಕೋಟಿ ಮತ್ತು ಸೌತ್ ಡಿವಿಜನ್ನಿಗೆ ೪೫೦ ಕೋಟಿ – ಹೀಗೆ ಸಮನಾಗಿ ಹಂಚಲಾಗಿದೆ, ವಿಶೇಷ ಸೌಲತ್ತೇನೂ ಕೊಟ್ಟಿಲ್ಲ. ದುಷ್ಕಾಲ ಬಹಳವಾಗಿರುವ ಕಡೆಗೆ ಕೊಡಬೇಕಾದ್ದು ಕೊಟ್ಟಿಲ್ಲ. ೬೪ ಫ್ಯಾಮಿನ್ ಬಾಬಿನ ಕೆಳಗೆ ಮಾಡಿರುವ ಕೆಲಸಗಳು ಅಪೂರ್ಣವಾಗಿವೆ, ಅವನ್ನು ಪೂರ್ಣಗೊಳಿಸಬೇಕಾಗಿದೆ, ಹಾಗೆಯೇ ಬಿಡುವುದು ಒಳ್ಳೆಯದಲ್ಲ. ಅದರ ಬಗ್ಗೆ ಪ್ರಯತ್ನ ಮಾಡಲಾಗಿದೆ. ಸೇಕಡ ಹತ್ತಕ್ಕಿಂತ ಕಡಮೆ ನೀರಾವರಿ ಇರುವ ಕಡೆಗೆ ಒಂದೆರಡು ಕೆಲಸಗಳನ್ನು ಕೊಡಲಾಗಿದೆ. ಸೇಕಡ ಹತ್ತಕ್ಕಿಂತ ಜಾಸ್ತಿ ಇರುವ ಕಡೆಗೆ ಕಡಮೆ ಮಾಡಲಾಗಿದೆ. ಸ್ಪಿಲ ಓವರ್ ಕೆಲಸಗಳನ್ನು ಪೂರ್ಣಮಾಡಿ ಯಾರಿಗೂ ಅನ್ಯಾಯವಾಗ ದಂತೆ ಮಾಡಲು ಪ್ರಯತ್ನ ಮಾಡುತ್ತೇವೆ. ಯಾವುದೇ ವಿಚಾರ ಸರಿಯಾಗಿಲ್ಲದಿದ್ದರೆ ಶ್ರೀ ವೀರಪ್ಪ ಗೌಡರು ಅದನ್ನು ನಮ್ಮ ಗಮನಕ್ಕೆ ತಂದರೆ ಸರಿಪಡಿಸುತ್ತೇವೆ.

ಶ್ರೀ ಎಸ್. ವೈ. ಪಾಟೀಲ್.—ನಾನು ಒಂದೆರಡು ವಿಷಯಗಳನ್ನು ತಿಳಿಸಬೇಕಾಗಿದೆ. ಬಿಜಾಪುರ ಜಿಲ್ಲೆಯಲ್ಲಿ ದುಷ್ಕಾಲಕ್ಕೆ ತುತ್ತಾಗಿರುವ ಭಾಗಗಳಿವೆ. ಇಂಡಿಸಿಂದಗಿಗಳಲ್ಲಿ ದುಷ್ಕಾಲವಿದೆ ಎಂದರೆ ಅದನ್ನು ನಂಬಬೇಕು. ಅಲ್ಲಿ ಮೈನರ್ ಇರಿಗೇಷನ್ ಸ್ಕೀಂ ಮಾಡಲು ಅವಕಾಶವಿಲ್ಲ. ವೆಲ್ ಇರಿಗೇಷನ್ ಮೈನರ್ ಇರಿಗೇಷನ್ ಕೆಲಸದಲ್ಲಿ ಬರುವುದಿಲ್ಲ. ಇದಕ್ಕೆ ವರ್ಲ್ಡ್ ಬ್ಯಾಂಕಿನಿಂದ ಸಾಲ ತಂದರೂ ನಮಗೆ ಯಾವುದೂ ಸಿಕ್ಕಿಲ್ಲ.

ಸಿಂಧಗಿ ನನ್ನ ಕ್ಷೇತ್ರ ಅಲ್ಲಿ ಲಿಫ್ಟ್ ಇರಿಗೇಷನ್‌ಗೆ ಆಗಲೀ, ಮೈನರ್ ಇರಿಗೇಷನ್ನಿಗೆ ಆಗಲೀ ಅವಕಾಶವಿಲ್ಲ. ವೆಲ್ ಇರಿಗೇಷನ್ ೬,೫೦೦ ಬಾವಿಗಳು ಇವೆ. ಅವುಗಳನ್ನು ಆಳಮಾಡಬೇಕಾಗಿದೆ. ಅದಕ್ಕಾಗಿ ನಮಗೆ ಎರಡು ಕೋಟಿ ರೂಪಾಯಿ ಲೋನ್ ಕೊಟ್ಟರೆ ನಮ್ಮ ಪ್ರಾಬ್ಲಮ್ ಶಾಶ್ವತವಾಗಿ ನಿಕಾಲೆಯಾಗುತ್ತದೆ. ಆದುದರಿಂದ ಇಲ್ಲಿ ಬಾವಿ ಇರಿಗೇಷನ್ ತೆಗೆದುಕೊಳ್ಳುವ ಬಗ್ಗೆ ಏನು ಹೇಳುತ್ತಾರೆ?

9–30 A. M.

ಶ್ರೀ ಕೆ. ಆರ್. ಎಸ್. ನಾಯ್ಡು.—ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ, ಕೋಲಾರ, ತುಮಕೂರು, ಚಿತ್ರದುರ್ಗ, ಬಳ್ಳಾರಿ, ಜಿಲ್ಲೆಗಳಲ್ಲಿ ಸರಿಯಾಗಿ ಮಳೆ ಆಗುವುದಿಲ್ಲ. ಅದು ಡ್ರಾಟ್ ಎಫೆಕ್ಟೆಡ್ ಏರಿಯಾ ಅದಕ್ಕೆ ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎನ್ನುವ ಬಗ್ಗೆ ಹೆಚ್ಚಿನ ಮಾಹಿತಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ರೀತಿ ಆದರೆ ಉತ್ತರ ಕೊಡುವುದು ಕಷ್ಟವಾಗುತ್ತದೆ. ಕ್ಲಾರಿಫಿಕೇಷನ್ ಇದ್ದರೆ ಕೇಳಬೇಕು

ಶ್ರೀ ಎಸ್. ಬಿ. ನಾಗರಾಳ್.—ಈಗಾಗಲೇ ಡಿಸ್ಟ್ರಿಕ್ಟ್‌ವೈಸ್ ಹಣ ಖರ್ಚಾಗಿರುವ ಬಗ್ಗೆ ಓದಿ ಹೇಳಿದ್ದೇನೆ. ಚಿತ್ರದುರ್ಗದಲ್ಲಿ ಎರಡು ಕೋಟಿ ೩೦ ಲಕ್ಷ ರೂಪಾಯಿ ಕೆಲಸ ಇದೆ. ಕೋಲಾರದಲ್ಲಿ ಒಂದು ಕೋಟಿ ೪೬ ಲಕ್ಷ ರೂಪಾಯಿ ಕೆಲಸ ಇದೆ. ಇಂಡಿ ತಾಲ್ಲೋಕಿನಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮ್ ತೆಗೆದುಕೊಂಡಿದ್ದೇವೆ. ಸಿಂಧಗಿ ತಾಲ್ಲೋಕಿನಲ್ಲಿ ಕೆರೆ ಕಟ್ಟುವುದಕ್ಕೆ ಅನುಕೂಲವಾಗಿರತಕ್ಕ ಸ್ಥಾನದ ಬಗ್ಗೆ ಇನ್‌ವೆಸ್ಟಿಗೇಷನ್ ನಡೆಯುತ್ತಾ ಇದೆ. ಇನ್‌ವೆಸ್ಟಿಗೇಷನ್ ಮಾಡಿದಾಗ ಫೀಸಿಬಲ್ ಆಗಿ ಕಂಡುಬಂದರೆ ಸಿಂಧಗಿ ತಾಲ್ಲೋಕಿಗೆ ಯಾವುದೇ ರೀತಿ ಅಲಕ್ಷ್ಯ ಮಾಡುವುದಿಲ್ಲ ಎಂದು ಆಶ್ವಾಸನವಚನ ಕೊಡಲು ಬಯಸುತ್ತೇನೆ.

ಶ್ರೀ ಎಸ್. ವೈ. ಪಾಟೀಲ್.—ಇಲ್ಲಿ ಇರಿಗೇಷನ್ ವೆಲ್ಸ್ ಎಂದು ಹೇಳಿದರೆ ಹೊಸದಾಗಿ ಬಾವಿ ತೋಡುವುದಲ್ಲ. ಸಿಂಧಗಿ ತಾಲ್ಲೋಕಿನಲ್ಲಿ ಹೊಸದಾಗಿ ಏತಕ್ಕೆ ಎನ್‌ಕ್ವಯರಿ ಮಾಡುತ್ತೀರಿ ? ಹಿಂದೆ ಇನ್‌ವೆಸ್ಟಿಗೇಟ್ ಮಾಡಿ, ಅಲ್ಲಿ ಯಾವ ಒಂದು ಜಾಗ ಇಲ್ಲ ಎಂದು ತಜ್ಞರು ಹೇಳಿದ್ದಾರೆ. ಅಲ್ಲಿ ಡೋಣ್ ರಿವರ್ ಸ್ಕೀಂ ಇದೆ, ಮತ್ತು ಅಪ್ಪರ ಕೃಷ್ಣ ರಿವರ್ ಸ್ಕೀಮ್ ಏನು ಇದೆ, ಅದು ತಕ್ಷಣಕ್ಕೆ ಆಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎಸ್. ಬಿ. ನಾಗರಾಳ್.—ಸರ್ಕಾರ ಬೋರ್‌ವೆಲ್ ವಿಷಯವಾಗಿ ಒಂದು ಕಮಿಟಿ ನೇಮಕ ಮಾಡಿತ್ತು, ರಿಪೋರ್ಟ್ ಇನ್ನು ಬಂದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಇರಿಗೇಷನ್ ವೆಲ್ಸ್‌ಗಾಗಿ ಎರಡು ಕೋಟಿ ರೂಪಾಯಿ ಹಣವನ್ನು ಲೋನ್ ಮುಖಾಂತರ ಕೊಡಿ ಅದನ್ನು ನಂತರ ವಾಪಸ್ಸು ಕೊಡುತ್ತೇವೆ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಸ್. ಬಿ. ನಾಗರಾಳ್.—ಅವರ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಇನ್ನು ಮೈನರ್ ಇರಿಗೇಷನ್ ಬಗ್ಗೆ ಏನು ತೊಂದರೆ ಇದೆ ಯಾವ ರೀತಿಯಿಂದ ರೈತರಿಗೆ ಒಳ್ಳೆಯದು ಮಾಡ ಬಹುದು ಎಂಬ ಬಗ್ಗೆ ಒಂದು ಕಮಿಟಿ ಅಪಾಯಿಂಟ್ ಮಾಡಿದ್ದಾರೆ. ಅವರು ಈಗಾಗಲೇ ತೀರ್ಮಾನಕ್ಕೆ ಬಂದಿದ್ದು ರಿಪೋರ್ಟ್ ತಯಾರಾಗಿದೆ ಎಂದು ಕೇಳಿದ್ದೇನೆ. ಇನ್ನು ರಿಪೋರ್ಟ್ ಬಂದಿಲ್ಲ. ಬಂದನಂತರ ಇದರ ಬಗ್ಗೆ ಕೂಲಂಕಷವಾಗಿ ಆಲೋಚನೆ ಮಾಡಿ ಯಾವ ರೀತಿಯಿಂದ ಎಲ್ಲೆಲ್ಲಿ ಬೋರ್‌ವೆಲ್ ತೆಗೆದು ಕೊಳ್ಳಬಹುದು ಎಂದು ನೋಡಿ ಅದಕ್ಕೆ ಹಣದ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಸ್. ವೈ. ಪಾಟೀಲ್ —ನಾನು ಕೇಳುವುದು ಬೋರ್‌ವೆಲ್ ವಿಚಾರ ಅಲ್ಲ. ೬,೫೦೦ ಬಾವಿಗಳಲ್ಲಿ ಸಾಕಷ್ಟು ನೀರು ಇದೆ. ಜಿಯಾಲಾಜಿಕಲ್ ಸರ್ವೆ ಮಾಡಿಸಿ ಡಾ. ರಾಧಾಕೃಷ್ಣ ಅವರ ಅಭಿಪ್ರಾಯ ತೆಗೆದುಕೊಂಡು ಗವರ್ನ್‌ಮೆಂಟ್ ಏಜೆನ್ಸಿ ಮೂಲಕ ಈ ಬಾವಿಗಳ ಕೆಲಸ ಮಾಡಿಸಿ ಎಂದು ಹೇಳುತ್ತೇನೆ. ಇದಕ್ಕೆ ಯಾರು ಸಂಬಂಧ ಇದ್ದಾರೋ ಅವರು ನನಗೆ ಸಮರ್ಪಕ ಉತ್ತರ ನಾಳೆ ಹೇಳಲಿ, ಅಥವಾ ಅಸೆಂಬ್ಲಿ ಮುಗಿಯುವುದರೊಳಗೆ ಹೇಳಲಿ. ನಾನು ಹೊಸ ಬಾವಿಗಳನ್ನು ಕೇಳುವುದಿಲ್ಲ ನಮಗೆ ಬೋರ್‌ವೆಲ್ ಬೇಕಾಗಿಲ್ಲ;

ಶ್ರೀ ಎಸ್. ಬಿ. ನಾಗರಾಳ್.—ಮಾನ್ಯ ಸದಸ್ಯರು ಕೇಳಿರತಕ್ಕ ಬೇಡಿಕೆಯನ್ನು ಸರಿಯಾದಂಥ ದೃಷ್ಟಿಯಿಂದ ಎಕ್ಸಾಮಿನ್ ಮಾಡಿಸುತ್ತೇನೆ ಎಂದು ಹೇಳಿದ್ದೇನೆ. ಈಗಲೂ ಹೇಳುತ್ತೇನೆ. ಒಣ ಪ್ರದೇಶದಲ್ಲಿರತಕ್ಕ ಜಮೀನುಗಳನ್ನು ಹೇಗೆ ನೀರಾವರಿ ಮಾಡಬೇಕು. ಬೋರ್‌ವೆಲ್ ಮಾಡಬೇಕೇ, ಅದಕ್ಕೆ ಬೇಕಾಗಿರತಕ್ಕ ಹಣ ಹೇಗೆ ಒದಗಿಸಬೇಕು ಎನ್ನುವ ಬಗ್ಗೆ ರಿಪೋರ್ಟಿನಲ್ಲಿ ವಿಶೇಷವಾದ ಮಾಹಿತಿ ಕೊಟ್ಟಿದ್ದಾರೆ ಎಂದು ಕೇಳಿದ್ದೇನೆ. ರಿಪೋರ್ಟ್ ಬಂದನಂತರ ಸವಿಸ್ತಾರವಾಗಿ ಕೂಲಂಕಷವಾಗಿ ಪರಿಶೀಲಿಸಿ ಸರಿಯಾದಂಥ ದೃಷ್ಟಿಯಿಂದ ಸಣ್ಣ ನೀರಾವರಿಗೆ ಬೇಕಾಗುವ ಸೌಲಭ್ಯಗಳನ್ನು ಏರ್ಪಡಿಸುವ ಪ್ರಯತ್ನ ಮಾಡುತ್ತೇನೆ ಎಂದು ಇಷ್ಟು ಮಾತ್ರ ಹೇಳಬಯಸುತ್ತೇನೆ.

ಶ್ರೀ ಎಸ್. ವೈ. ಪಾಟೀಲ್ —ರೂಲ್ಸ್ ರೆಗ್ಯುಲೇಷನ್ಸ್ ಜನರ ಕಲ್ಯಾಣಕ್ಕೆ ಆಗದೇ ಇದ್ದರೆ ಏನು ಮಾಡಬೇಕು ? ಸ್ಕೇರ್‌ಸಿಟಿ ಪ್ರದೇಶದ ಎಂ. ಎಲ್. ಎ. ಗಳನ್ನು ಕರೆದುಕೊಂಡು ಹೋಗದೆ ಸಂಬಂಧ ಇಲ್ಲದ ಎಂ. ಎಲ್. ಎ. ಗಳನ್ನು ಕರೆದುಕೊಂಡು ಹೋಗಿ ರಿಪೋರ್ಟ್ ಮಾಡುತ್ತಾ ಇದ್ದಾರೆ.

ಶ್ರೀ ಎಸ್. ಬಿ. ನಾಗರಾಳ್.—ಆ ಸಮಿತಿಗೆ ತಾಂತ್ರಿಕ ತಜ್ಞರನ್ನು ಸೆಕ್ರೆಟೇರಿಯೆಟ್ ಲೆವೆಲ್‌ನಲ್ಲಿ ನೇಮಿಸಲಾಗಿದೆ.

ಶ್ರೀ ಎಸ್. ವೈ. ಪಾಟೀಲ್.—ನನ್ನನ್ನು ಸಿಂಧಗಿಗೆ ಕರೆದುಕೊಂಡು ಹೋಗಿ ನಾನು ತೋರಿಸಿ ಕೊಡುತ್ತೇನೆ.

ಶ್ರೀ ಬಾಪುಗೌಡ.—ಅಲ್ಲಿ ಬೇರೆ ಯಾವ ನೀರಾವರಿ ಸೌಕರ್ಯವಿಲ್ಲ, ಕೆರೆಗಳು ಆಗುವುದಿಲ್ಲ, ಲಿಫ್ಟ್ ಇರಿಗೇಷನ್ ಕೂಡ ಆಗುವುದಿಲ್ಲ. ಕೇವಲ ೬,೫೦೦ ಹಳೆ ಬಾವಿಗಳು ಇವೆ. ಅಂಥ ಬಾವಿಗಳನ್ನು ಆಳ ಮಾಡಲು ಹಣ ಒದಗಿಸಿ ಎಂದು ಹೇಳುತ್ತಾರೆ. ಅದಕ್ಕೆ ನಿರ್ದಿಷ್ಟ ಉತ್ತರಬೇಕು.

ಅಧ್ಯಕ್ಷರು.—ಕೋ ಆಪರೇಟಿವ್ ಡಿಮ್ಯಾಂಡ್ ದಿವಸ ಕೇಳಬೇಕಾಗಿತ್ತು. ಅವರಿಗೆ ಇದು ಸಂಬಂಧ ಇಲ್ಲ ಎಂದು ಹೇಳುತ್ತಾರೆ. ಲೋನ್ ಒದಗಿಸುವ ವಿಚಾರ ಪರೀಕ್ಷೆ ಮಾಡುತ್ತಾರೆ ಎಂದು ಹೇಳಿದ್ದಾರೆ.

ಶ್ರೀ ಎಸ್. ವೈ. ಪಾಟೀಲ್.—ಇದು ಜೀವನ, ಮರಣದ ಪ್ರಶ್ನೆ, ಯಾವ ಮಿನಿಸ್ಟರಿಂದಲಾದರೂ ಇದಕ್ಕೆ ಉತ್ತರ ಕೊಡಿಸಿ.

ಅಧ್ಯಕ್ಷರು.—ಇದಕ್ಕೆಲ್ಲಾ ಒಂದು ರೂಲ್ಸ್ ಇದೆ. ಹೀಗೆ ಮಾತನಾಡಿದರೆ ಹೇಗೆ ?

ಶ್ರೀ ಎಸ್. ವೈ. ಪಾಟೀಲ್.—ಸಾಯುವ ಬಗ್ಗೆ ರೂಲ್ಸ್ ಏನು ಅಡ್ಡಿ ಇಲ್ಲ.

ಶ್ರೀ ಹೆಚ್. ಸಿದ್ದವೀರಪ್ಪ.—ಸಾಯುವ ಬಗ್ಗೆ ರೂಲ್ಸ್ ಏತಕ್ಕೆ ಬೇಕು ?

ಶ್ರೀ ಎಸ್. ವೈ. ಪಾಟೀಲ್.—ರೋಣ ತಾಲ್ಲೂಕಿನಲ್ಲಿ ಇದುವರೆಗೆ ಯಾವ ಬಾವಿಗಳ ಕೆಲಸಗಳೂ

ಆಗಿಲ್ಲ. ಇಲ್ಲಿನ ಜನಕ್ಕೆ ನೀರೇ ಇಲ್ಲದೆ ಸಾಯುವ ಪ್ರಸಂಗ ಬಂದಿದೆ. ಇಲ್ಲಿನ ಬಾವಿಗಳ ದುರಸ್ತಿ ಬಗ್ಗೆ ಯಾರ ಕಡೆಯಿಂದ ಉತ್ತರ ಕೇಳಬೇಕು ನಮಗೆ ಗೊತ್ತಿಲ್ಲ. ಸರಕಾರದ ಕಡೆಯಿಂದ ತಾವು ಉತ್ತರ ತರಿಸಿ ಕೊಡಿ ಎಂದು ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು.—ಇದು ಇಲ್ಲಿರುವ ಬೇಡಿಕೆಗಳಲ್ಲಿ ಬರುವುದಿಲ್ಲ ಎಂದು ಸರಕಾರದವರು ಹೇಳುತ್ತಿದ್ದಾರೆ. ಇದನ್ನು ಮಾನ್ಯ ಪಾಟೀಲ್‌ರವರು ಒಪ್ಪಲಿಲ್ಲ ಎಂದರೆ ನಾವೇನು ಹೇಳುವುದು ?

ಶ್ರೀ ಎಸ್. ವೈ. ಪಾಟೀಲ್.—ಸ್ಕೇರ್ಸಿಟಿ ಏರಿಯಾಗಳಲ್ಲಿ ನಮ್ಮ ಭಾಗದಲ್ಲಿ ಇಂಡಿ, ಸಿಂಧಗಿ ತಾಲ್ಲೂಕುಗಳಲ್ಲಿ ಕಳೆದ ೨೦ ವರ್ಷಗಳಿಂದಲೂ ಬಾವಿಗಳ ಕೆಲಸವನ್ನೇ ಮಾಡಿಲ್ಲ. ನಮ್ಮ ಜನಕ್ಕೆ ನಾವೇನು ಹೇಳುವುದು ?

ಅಧ್ಯಕ್ಷರು. ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು. ಇಲ್ಲಿ ಮಾನ್ಯ ಮಂತ್ರಿಗಳು ಹೇಳುವ ಉತ್ತರವನ್ನು ಮೊದಲು ಸಮಾಧಾನವಾಗಿ ಕೇಳಬೇಕು. ಇದನ್ನು ಕೇಳಿಯಾದ ನಂತರ ಅವರಿಗೆ ತೋಚಿದ ಕ್ಲಾರಿಫಿಕೇಷನ್‌ಗಳನ್ನು ಕೇಳಲು ಅವಕಾಶವಿದೆ. ಹಾಗೆ ಮಾಡದೆ ಈ ರೀತಿ ಮಧ್ಯೆ ಮಧ್ಯೆ ಪ್ರಶ್ನೆ ಕೇಳಿ ಅದಕ್ಕೆ ಉತ್ತರ ಕೊಡಬೇಕೆಂದು ಕೇಳಿದರೆ ಇವಕ್ಕೆಲ್ಲಾ ಕಾಲಾವಕಾಶ ಎಲ್ಲಿದೆ ? ಉತ್ತರ ಹೇಳುವವರೆಗೆ ಸ್ವಲ್ಪ ನಿಧಾನವಾಗಿ ಅವರು ಮೊದಲು ಕೇಳಿ ಆ ನಂತರ ಏನು ವಿವರ ಬೇಕೋ ಅದನ್ನು ಕೇಳಬಹುದು.

ಶ್ರೀ ಎಸ್. ವೈ. ಪಾಟೀಲ್.—ನಾನು ಸರಕಾರದಲ್ಲಿ ಕೇಳುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿರುವ ಬಾವಿಗಳ ದುರಸ್ತಿನ ಬಗ್ಗೆ ಯಾವ ಮಂತ್ರಿಗಳನ್ನು ಕೇಳಬೇಕು ಎನ್ನುವುದು ನನಗೆ ತಿಳಿಯದು. ಇದನ್ನು ಮೈನರ್ ಇರಿಗೇಷನ್ ಮಂತ್ರಿಗಳು ನೋಡುತ್ತಾರೆಂದು ಇದ್ದೆ. ಆದರೆ ಅವರು ಈ ಪ್ರಶ್ನೆ ತಮಗೆ ಸೇರಿಲ್ಲ ಎನ್ನುತ್ತಾರೆ. ಇದಕ್ಕಾಗಿ ಯಾವ ಮಂತ್ರಿಗಳು ಉತ್ತರ ಹೇಳುತ್ತಾರೋ ಅವರಿಗಾದರೂ ತಾವು ಸ್ವಲ್ಪ ಪರವಾನಗಿ ಕೊಡಿ.

ಅಧ್ಯಕ್ಷರು.—ಶ್ರೀಮಾನ್ ಚನ್ನಬಸಪ್ಪನವರು ಇದರ ಬಗ್ಗೆ ಹೇಳುತ್ತೇವೆನು ಹೇಳುತ್ತಾರೆ.

ಶ್ರೀ ಎಸ್. ವೈ. ಪಾಟೀಲ್.—ಶ್ರೀಮಾನ್ ಚನ್ನಬಸಪ್ಪನವರೇ ಹೇಳಲಿ. ನಮ್ಮ ಸಿಂದಗಿ ಹಾಗೂ ಇಂಡಿ ತಾಲ್ಲೂಕುಗಳಲ್ಲಿ ಮೇಜರು ಇರಿಗೇಷನ್ ಬಾಬಿನಲ್ಲಿ ಅಪ್ಪರು ಕೃಷ್ಣಾ ಯೋಜನೆ ಬರುತ್ತೆ ಎನ್ನುತ್ತಾರೆ ಇದಕ್ಕಾಗಿ ಸೈಟುಗಳನ್ನು ಆರಿಸಿ ಏನೋ ಕೆಲಸಗಳನ್ನು ಮಾಡುತ್ತಿದ್ದಾರೆ. ನಾನು ಇಲ್ಲಿ ಕೇಳುವುದು ನಮ್ಮ ಕ್ಷೇತ್ರಗಳಲ್ಲಿ ಹೊಸ ಬಾವಿಗಳನ್ನು ತೋಡಿಸಿದರೂ ನೀರು ಬರುತ್ತೋ ಇಲ್ಲವೋ ಎನ್ನುವ ಒಂದು ಸಂಶಯ ನಮ್ಮನ್ನು ಕಾಡುತ್ತಿದೆ. ಸುಮಾರು ೬೫೦೦ ಬಾವಿಗಳನ್ನು ತೋಡಿಸಬೇಕೆಂದು ಇದ್ದುದರಲ್ಲಿ ನಮ್ಮ ಇಂಡಿ ಹಾಗೂ ಸಿಂದಗಿ ತಾಲ್ಲೂಕುಗಳಿಗೆ ಸುಮಾರು ಎರಡು ಕೋಟಿ ಖರ್ಚು ಮಾಡಿ ಬಾವಿಗಳನ್ನು ಆಳ ಮಾಡಿಸುತ್ತೇವೆಂದೂ ಹೇಳಿದ್ದರು. ಇದುವರೆಗೂ ಯಾವ ಬಾವಿಯ ಕೆಲಸಗಳನ್ನೂ ಇಲ್ಲಿ ಮಾಡಲಿಲ್ಲ ಮತ್ತು ಶೇಕಡಾ ೧೪ರಷ್ಟು ದುಡ್ಡನ್ನು ಇಲ್ಲಿಗೆ ವೆಚ್ಚ ಮಾಡಬೇಕೆಂದು ಇದ್ದರೂ ಶೇಕಡಾ ನಾಲ್ಕರಷ್ಟು ಕೂಡ ಖರ್ಚು ಮಾಡಲಿಲ್ಲ. ಮಾನ್ಯ ಚನ್ನಬಸಪ್ಪನವರಲ್ಲಿ ನಾನು ಕೈ ಮುಗಿದು ಕೇಳಿ ಕೊಳ್ಳುತ್ತೇನೆ. ನಮ್ಮ ಕಡೆ ಜನ ಅನ್ನವಿಲ್ಲದೆ ಸಾಯುವ ಸ್ಥಿತಿ ಬಂದಿದೆ. ಇದರ ಕಡೆಗೆ ತಾವಾದರೂ ಉತ್ತರ ಕೊಡಿ ಇಲ್ಲವೇ ಚೀಫ್ ಮಿನಿಸ್ಟರ್ ಕಡೆಯಿಂದಲಾದರೂ ಉತ್ತರವನ್ನು ಕೊಡಿಸಿ. ನಾನು ಇದರ ಬಗ್ಗೆ ಸುಮಾರು ೫೦-೬೦ ಸಾರಿ ಪದೇ ಪದೇ ಹೇಳುತ್ತಲೇ ಬರುತ್ತಿದ್ದೇನೆ. ಇದರ ಬಗ್ಗೆ ಇಲ್ಲಿ ಸ್ಟೇಟುಮೆಂಟು ಕೊಡುವಾಗ ಉತ್ತರ ಕೊಡುವುದನ್ನು ಕೈಬಿಟ್ಟಿದ್ದಾರೆ. ಇದು ಜನರ ಸಾಯುವ ಪ್ರಶ್ನೆ.

ಅಧ್ಯಕ್ಷರು.—ಸಾಯುವವರನ್ನು ಯಾರು ಏನು ಮಾಡುವುದಕ್ಕಾಗುವುದಿಲ್ಲ. ಸಾಯುವವರು ಆಡಳಿತ ಪಕ್ಷದವರನ್ನೂ ಬಿಡುವುದಿಲ್ಲ. ಇವರು ವಿರೋಧ ಪಕ್ಷದವರು ಎಂದೂ ಬಿಡುವುದಿಲ್ಲ. ಸಾಯುವ ವರು ಏನಿದ್ದರೂ ಸಾಯುತ್ತಾರೆ. ಅದಕ್ಕೆ ನಾವೇನು ಇಲ್ಲಿ ಮಾಡಬಹುದು ? ಮಾನ್ಯ ಸದಸ್ಯರು ಇಲ್ಲಿ ಈ ರೀತಿ ಹೇಳಿದರೆ ಹೇಗೆ ? ಸರಕಾರದ ಪರವಾಗಿ ಮಂತ್ರಿಗಳು ಏನು ಉತ್ತರಗಳನ್ನು ಕೊಡಲು ಸಾಧ್ಯವೋ ಅದನ್ನು ಇಲ್ಲಿ ತಿಳಿಸಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರು ಸಮಾಧಾನವಾಗಿ ಕುಳಿತು ಅವರು ಹೇಳುವುದನ್ನು ಕೇಳಬೇಕು.

ಶ್ರೀ ಎಸ್. ವೈ. ಪಾಟೀಲ್.—ತಾವು ಯಾರ ಕಡೆಯಿಂದಲಾದರೂ ಸರಿ ಉತ್ತರವನ್ನು ನಮಗೆ ತರಿಸಿಕೊಡಿ. ನಾನು ಕೂತುಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ — ಶ್ರೀಮಾನ್ ಎಸ್. ವೈ. ಪಾಟೀಲರವರು ಇದನ್ನು ಇವೊತ್ತು ಹೇಳುತ್ತಿಲ್ಲ. ಅವರು ಸ್ವಲ್ಪ ಉದ್ರೇಕವಾಗಿ ಮಾತನಾಡುತ್ತಾರೆ. ಇದು ಅವರ ಸ್ವಭಾವ. ಸ್ವಲ್ಪ ತಾವೂ ಇದರ ಬಗ್ಗೆ ಕೇಳಬೇಕು. ಕಳೆದ ಸಾರಿ ಕೂಡ ಸರಕಾರದವರ ಗಮನವನ್ನು ಇದರ ಬಗ್ಗೆ ಸೆಳೆದಾಗ ಒಂದು ರೀತಿಯಾಗಿ ಉತ್ತರ ಕೊಟ್ಟರು. ನಾವೆಲ್ಲ ಇದೇ ಸಭೆಯಲ್ಲಿ ಕೇಳಿದಂತೆ ಇಂಡಿ ತಾಲ್ಲೂಕಿನೊಳಗೆ ಇರುವ ಪರಿಸ್ಥಿತಿ ನೋಡಿ ಚೀಫ್ ಮಿನಿಸ್ಟರವರು ಲ್ಯಾಂಡು ಡೆವಲಪ್‌ಮೆಂಟು ಬ್ಯಾಂಕು ಗಳ ಮೂಲಕ ಈಗ ಇರತಕ್ಕ ಬಾವಿಗಳನ್ನು ಆಳ ಮಾಡಿಸಲು ಹಣ ಕೊಡಿಸುವ ವಿಚಾರವಾಗಿ ನಾನು ಎಕ್ಸಾಮಿನ್ ಮಾಡುತ್ತೇನೆಂದು ಭರವಸೆ ಕೊಟ್ಟಿದ್ದರು. ಇದು ಸಭೆಯ ರಿಕಾರ್ಡಿನಲ್ಲಿ ಹಾಗೂ ಪ್ರೊಸೀಡಿಂಗ್ಸ್‌ನಲ್ಲೂ ಇದೆ. ಬೇಕಾದರೆ ತಾವು ತರಿಸಿ ನೋಡಬಹುದು. ಆದರೆ ಇವೊತ್ತಿನವರೆಗೂ ಇದರ ಬಗ್ಗೆ ಯಾವ ನಿರ್ಣಯವೂ ಆಗಲಿಲ್ಲ. ಮೈನರು ಇರಿಗೇಷನ್ ಮೂಲಕ ಇದನ್ನು ಮಾಡಲು ಬರುವುದಿಲ್ಲ. ಇದನ್ನು ನಾನೂ ಒಪ್ಪುತ್ತೇನೆ. ಡೆವಲಪ್‌ಮೆಂಟು ಇಲಾಖೆ ಚರ್ಚೆಗೆ ಬಂದಾಗ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ಮಾತನಾಡುವಾಗ ಇದರಲ್ಲಿ ಇರಿಗೇಷನ್ ವೆಲ್ಸ್‌ಗಳೂ ಬರುತ್ತವೆ. ಡೆವಲಪ್‌ಮೆಂಟು ಡಿಪಾರ್ಟ್‌ಮೆಂಟು ಮೂಲಕ ಇದರ ಬಗ್ಗೆ ಹೇಳಲು ಸಾಧ್ಯವಾಗಬಹುದು. ನಾಳೆ ಈ ಬೇಡಿಕೆಗಳು ಬರಬಹುದು. ಆಗ ಉತ್ತರವನ್ನು ಹೇಳಬಹುದು. ಡೆವಲಪ್‌ಮೆಂಟ್ ಲೋನುಗಳ ಮೂಲಕ ಇರುವ ಹಾಳು ಬಾವಿಗಳನ್ನು ಆಳ ಮಾಡಲು ಎಷ್ಟು ಹಣ ಕೊಡಲು ಸಾಧ್ಯವಾಯಿತು ? ಸರಕಾರ ಇದರ ಬಗ್ಗೆ ಖರ್ಚು ಮಾಡಲು ಸಾಧ್ಯವಾಯಿತೇ ಇಲ್ಲವೇ ಇದನ್ನು ದಯಮಾಡಿ ತಿಳಿಸಿ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಯಾವ ಕೆಲಸ ಮಾಡಬೇಕಾದರೂ ಅದಕ್ಕೆ ತಕ್ಕ ವಿಧಿ ನಿಯಮ ಗಳುಂಟು. ಯಾವ ಡಿಮ್ಯಾಂಡು ಬಂದಾಗ ಯಾವುದರ ಬಗ್ಗೆ ಉತ್ತರವನ್ನು ನಿರೀಕ್ಷೆ ಮಾಡಬೇಕು ಎಂದು ಇದೆಯೋ ಅದನ್ನು ನಿರೀಕ್ಷೆ ಮಾಡಬಹುದು. ಅದನ್ನು ಬಿಟ್ಟು ಮೈನರು ಇರಿಗೇಷನ್ ಡಿಮ್ಯಾಂಡುಗಳು ಬಂದಾಗ ಡೆವಲಪ್‌ಮೆಂಟು ಡಿಮ್ಯಾಂಡುಗಳ ಬಗ್ಗೆ ಹೇಳಬೇಕೆಂದರೆ ನಾವೇನು ಹೇಳಲಿಕ್ಕೆ ಸಾಧ್ಯ. ಇದನ್ನು ತಾವು ವಿಚಾರ ಮಾಡಬೇಕು.

ಶ್ರೀ ಎಸ್. ವೈ. ಪಾಟೀಲ್ — ನಾಳೆ ಡೆವಲಪ್‌ಮೆಂಟು ಡಿಮ್ಯಾಂಡು ಬಂದಾಗಲೇ ಉತ್ತರ ಕೊಡಿಸಿ.

ಶ್ರೀ ಎಸ್. ಬಿ. ನಾಗರಾಳ್.—ಸನ್ಮಾನ್ಯ ಸದಸ್ಯರಾದ ಶ್ರೀ ಪಾಟೀಲರವರ ಅನುಕಂಪ ಚಟ ನಮಗೆ ಗೊತ್ತಾಗಿದೆ. ಹಣದ ಸೌಲಭ್ಯ ನೋಡಿಕೊಂಡು ಯಾವ ರೀತಿ ಅನುಕೂಲಗಳನ್ನು ಮಾಡಿಕೊಡಬಹುದು ಅದನ್ನು ವಿಚಾರ ಮಾಡಿ ಸರಕಾರ ಮಾಡಲು ಪ್ರಯತ್ನ ಮಾಡುತ್ತದೆ ಎಂದು ಇಷ್ಟು ಹೇಳಿ ಮಾನ್ಯ ಸದನದ ಸದಸ್ಯರು ನಾನು ಮಂಡಿಸಿರುವ ಬೇಡಿಕೆಗಳಿಗೆ ಒಪ್ಪಿಗೆ ಕೊಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ಸರಕಾರ ಇದೆಯೋ ಇಲ್ಲವೋ ಗೊತ್ತಾಗಲಿಲ್ಲ. ನಮಗೆ ರಕ್ಷಣೆ ಕೊಡುವವರು ಯಾರು ? ಕಳೆದ ಎರಡು ವರ್ಷಗಳಿಂದಲೂ ತಿಪಟೂರು ತಾಲ್ಲೂಕಿನಲ್ಲಿ ಎರಡು ಕೆರೆಗಳ ಕೆಲಸವನ್ನೂ ಮಾಡಲಿಲ್ಲ. ಆದರೆ ಅದೇ ಪಕ್ಕದ ತಾಲ್ಲೂಕಿನಲ್ಲಿ ಕೆರೆಗಳ ಕೆಲಸಗಳಾಗುತ್ತಿವೆ. ನಾವೇನಾದರೂ ಕಂದಾಯ ಕೊಡುತ್ತಿಲ್ಲವೇನು ?

ಅಧ್ಯಕ್ಷರು.—ಇದೇನು ಮಾನ್ಯ ಸದಸ್ಯರಾದ ಶ್ರೀಮಾನ್ ಮಂಜುನಾಥ್‌ರವರು ಕೂಡ ಯುದ್ಧ ಮಾಡುವವರ ಹಾಗೆ ಎದ್ದು ಹೇಳುತ್ತಿದ್ದಾರಲ್ಲ. ಅವರೊಬ್ಬರೇ ಅಲ್ಲ ಕಂದಾಯ ಕೊಡುತ್ತಿರುವವರು.

ಶ್ರೀ ಟಿ. ಎಂ. ಮಂಜುನಾಥ.—ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುವುದು ನಮಗೆ ತಾವು ರಕ್ಷಣೆ ಕೊಡಬೇಕು ಎಂದು. ನಮ್ಮ ಕ್ಷೇತ್ರದಲ್ಲಿ ಯಾವ ಕೆರೆಗಳನ್ನೂ ಹೊಸದಾಗಿ ಮಾಡಿಲ್ಲ ಇರುವ ಕೆರೆಗಳನ್ನು ರಿಪೇರಿ ಕೂಡ ಮಾಡಲಿಲ್ಲ. ಆದರೆ ಬೇರೆ ಕಡೆ ಕೆರೆಗಳಿಗಾಗಿ ಖರ್ಚು ಮಾಡುತ್ತಿದ್ದಾರೆ. ಇದಕ್ಕೆ ಕಾರಣವೇನು ? ನಾವು ವಿರೋಧ ಪಕ್ಷದವರು ಇದ್ದೇವೆಂದು ಕೆಲಸಗಳನ್ನು ಮಾಡುವುದಿಲ್ಲವೇ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರಾದ ಶ್ರೀ ಮಂಜುನಾಥರವರು ತಾಳ್ಮೆ ಕಳೆದು ಕೊಳ್ಳುವ ಅವಶ್ಯಕತೆ ಇಲ್ಲ. ಹಾಸನದಲ್ಲಿ ಹಾಗೂ ಮಾನ್ಯ ಸದಸ್ಯರು ಇರುವ ಕ್ಷೇತ್ರದಲ್ಲಿ ಕಳೆದ ಎರಡು ವರ್ಷಗಳಿಂದ ನಿಮ್ಮ ಕಾಲದಲ್ಲಿ ಯಾವ ಕೆಲಸಗಳೂ ಆಗಿಲ್ಲ ಎನ್ನುವ ಆಪಾದನೆಗಳನ್ನು ಮಾಡಿದ್ದಾರೆ. ಇದರಲ್ಲಿ ಹುರುಳಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಕೆಲಸಗಳನ್ನು ತೆಗೆದುಕೊಂಡಿದ್ದರೆ ಇಂತಹ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಬಹುದು. ಇಲ್ಲವೇ ಇಲ್ಲಿ ಯಾವ ಕೆಲಸಗಳನ್ನೂ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ಬೇಕಾದರೂ ತಿಳಿಸಬಹುದು. ಇದರಲ್ಲಿ ಸತ್ಯವಿದೆಯೋ ಇಲ್ಲವೋ

ಗೊತ್ತಿಲ್ಲ. ಇಲ್ಲ ನಿಮ್ಮ ಕ್ಷೇತ್ರದಲ್ಲಿ ಯಾವ ಕೆಲಸವನ್ನೂ ಮಾಡಬಾರದು ಎನ್ನುವ ಧೋರಣೆ ಏನಾದರೂ ಇದೆಯೇ ಅದನ್ನು ಸ್ಪಷ್ಟಪಡಿಸಿ ಇದಕ್ಕೆ ಕಾರಣಗಳನ್ನಾದರೂ ತಿಳಿಸಬಹುದು.

ಶ್ರೀ ಕೆ. ಎನ್. ವೀರಪ್ಪಗೌಡ.—ನಿಮ್ಮ ಕ್ಷೇತ್ರ ಒಂದೇ ಅಲ್ಲ. ಸ್ಕೇರ್ಸಿಟಿ ವರ್ಕುಗಳನ್ನು ಬಿಟ್ಟು ಬೇರೆ ಕಡೆಗಳಲ್ಲಿ ಕೂಡ ಕೆಲಸಗಳಾಗಿಲ್ಲ. ಮಾನ್ಯ ಸದಸ್ಯರೊಬ್ಬರೇ ಅಲ್ಲ ಕಂದಾಯ ಕೊಡುತ್ತಿರುವವರು. ನಾವು ಕೂಡ ಕಂದಾಯವನ್ನು ಕೊಡುತ್ತಿದ್ದೇವೆ.

ಶ್ರೀ ಟಿ. ಎಂ. ಮಂಜುನಾಥ.—ನನ್ನ ಪಕ್ಕದ ತಾಲ್ಲೂಕಿನಲ್ಲಿ ಏಳು ಕೆರೆಗಳ ಕೆಲಸಗಳನ್ನು ತೆಗೆದುಕೊಂಡು ನನ್ನ ಕ್ಷೇತ್ರದಲ್ಲಿ ಯಾವ ಕೆರೆಗಳ ಕೆಲಸಗಳನ್ನು ಮಾಡದೇ ಇರಲು ಇದ್ದಂತಹ ವಿಶೇಷ ಕಾರಣಗಳಾದರೂ ಏನು ?

ಶ್ರೀ ಹೆಚ್. ಸಿದ್ದವೀರಪ್ಪ.—ಮಾನ್ಯ ಮಂಜುನಾಥ್‌ರವರು ಅವರ ಕ್ಷೇತ್ರದಲ್ಲಿ ಸುಖವಾಗಿದ್ದಾರೆ. ಅದಕ್ಕೆ ಇಂದು ತೆಂಗಿನಕಾಯಿ ಒಂದಕ್ಕೆ ಒಂದೂವರೆ ರೂಪಾಯಿಗಳಾಗಿರುವುದು. ಅವರಷ್ಟು ಸುಖವಾಗಿರುವವರು ಬೇರೆ ಯಾರೂ ಇಲ್ಲ,

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮೀ, ಮಾನ್ಯ ಸಚಿವರು ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದರ ಬಗ್ಗೆ ಎಷ್ಟು ಹಣವನ್ನು ಸಿ.ಐ. ಎನ್. ಇ. ಡಿ. ಮೂಲಕ ಕೊಡಲಾಗಿದೆ ಮತ್ತು ಎಷ್ಟು ಕೆರೆಗಳನ್ನು ಇದುವರೆಗೆ ರಿಪೇರಿ ಮಾಡಲಾಗಿದೆ ? ಮತ್ತು ಯಾವ ಯಾವ ಡಿವಿಜನ್ನುಗಳಲ್ಲಿ ಎಷ್ಟು ಹಣ ಅಲಾಟು ಮಾಡಲಾಗಿತ್ತು ? ಇವುಗಳ ಬಗ್ಗೆ ಸರಿಯಾದ ವಿವರಗಳನ್ನು ಹೇಳಲಿಲ್ಲ. ನನಗೆ ತಿಳಿದು ಬಂದಿರುವ ಮಾಹಿತಿಗಳು ವಿಚಾರ ಮಾಡಿದರೆ ಕೆಲವು ಕಡೆ ಹಣ ಕೊಟ್ಟಿದ್ದಾರೆ. ಕೆಲವು ಕಡೆಗಳಲ್ಲಿ ಹಣ ಕೊಟ್ಟಿಲ್ಲ ಬರಗಾಲಕ್ಕೆ ಸೇರಿದ ಕೆಲಸಗಳು ಎಂದು ಮಂಡ್ಯ, ತಿಪಟೂರು, ಹಾಸನ ಹಾಗೂ ಇನ್ನಿತರ ಜಿಲ್ಲೆಗಳಲ್ಲಿ ಹತ್ತು ವರ್ಷಗಳಿಂದಲೂ ಇಂತಹ ಕೆಲಸಗಳನ್ನು ಮಾಡಬೇಕೆಂದು ಒಂದು ಯೋಜನೆ ಕೂಡ ಹಾಕಿಕೊಂಡಿದ್ದರು. ಆದರೆ ಇದರಲ್ಲಿ ಎಂಟು ಹತ್ತು ಕೆಲಸಗಳನ್ನು ಪ್ರಾರಂಭಿಸಿ ಹಾಗೆ ಉಳಿದಿವೆ. ಇದಕ್ಕೆ ಕಾರಣ ಕೇಳಿದರೆ ಈಚೆಗೆ ನಮ್ಮ ಮಾನ್ಯ ಹಣಕಾಸು ಸಚಿವರಾದ ಶ್ರೀ ಘೋರ್ಪಡೆಯವರು ಇಪ್ಪತ್ತು ಪರ್ಸೆಂಟು ಕಟ್ ಮಾಡಬೇಕೆಂದು ಸೂಚನೆ ಕೊಟ್ಟಿದ್ದಾರೆಂದು ತಿಳಿಸಿದರು. ಇದರಿಂದಾಗಿ ಬಡ್ಜೆಟ್ಟಿನಲ್ಲಿ ಕೂಡ ಇವುಗಳಿಗೆ ಹಣ ಇಲ್ಲ.

ಶ್ರೀ ಹೆಚ್. ಸಿದ್ದವೀರಪ್ಪ.—ಇವರುಗಳು ಹೀಗೆ ಗಲಾಟೆ ಮಾಡಿಯೇ ಎಲ್ಲವನ್ನೂ ಸರಕಾರದಿಂದ ಪಡೆಯುತ್ತಿದ್ದಾರೆ. ಆದರೆ ನಮ್ಮ ಕ್ಷೇತ್ರಗಳಲ್ಲಿ ಏನೂ ಆಗಲೇ ಇಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ರಿಪೇರಿ ಮಾಡಲು ಸಾವಿರಾರು ಕೆರೆಗಳಿವೆ. ಎಲ್ಲಕ್ಕೂ ಒಂದೇ ಸಮನಾಗಿ ಹಂಚುವುದಕ್ಕೆ ದುಡ್ಡು ಇಲ್ಲ.

ಶ್ರೀ ಎಸ್. ಬಿ. ನಾಗರಾಳ್.— ಸಿ. ಐ. ಎನ್. ಇ. ಡಿ. ಅಲಾಟ್‌ಮೆಂಟ್ ಕೇಳುತ್ತಾರೆ. ಅಲಾಟ್‌ಮೆಂಟ್ ಮಾಡುವ ಪ್ರಶ್ನೆ ಇಲ್ಲ, ಎಲ್ಲಿ ಕೆರೆಗಳು ಜಾಸ್ತಿ ಇವೆ ಅಲ್ಲಿ ಹೆಚ್ಚು ದುಡ್ಡು ಕೊಡಬೇಕಾಗುತ್ತದೆ. ಕೆರೆಗಳು ಇದ್ದ ಕಡೆ ಖರ್ಚು ಮಾಡಬೇಕು ವಿನಹ ಕೆರೆಗಳು ಇಲ್ಲದ ಕಡೆ ಆ ಹಣ ಯುಟಿಲೈಸ್ ಮಾಡುವುದಕ್ಕೆ ಆಗುವುದಿಲ್ಲ. ವಿಲೇಜ್ ವೈಸ್‌ಅಲಾಟ್‌ಮೆಂಟ್ ಹೇಗೆ ಮಾಡುವುದಕ್ಕಾಗುತ್ತದೆ? ತಾಲ್ಲೂಕ್ ವೈಜ್, ಡಿವಿಜನ್‌ವೈಸ್ ಹಂಚುವುದಕ್ಕೆ ಆಗುವುದಿಲ್ಲ ಕೆಲಸ ಎಲ್ಲಿ ಇದೆ, ಕ್ಯಾನಲ್ ಸಿಲ್ಟ್ ಎಲ್ಲಿ ಆಗಿದೆ, ತೂಬಿನ ಅನಾನುಕೂಲ ಎಲ್ಲಿ ಆಗಿದೆ ಅಲ್ಲಿ ಖರ್ಚು ಮಾಡಬೇಕಾಗುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.— ಇಂಜನಿಯರ್ ಕೇಳಿದರೆ ದುಡ್ಡು ಕೊಟ್ಟಿಲ್ಲ ಏನು ಮಾಡಲಿ ಎಂದು ಹೇಳುತ್ತಾರೆ. ಎರಡು ವರ್ಷಗಳಿಂದ ಕೇಳುತ್ತಲೇ ಇದ್ದೇವೆ, ಸಾವಿರಾರು ಕೆರೆಗಳ ರಿಪೇರಿಗಾಗಿ ಅವರಿಗೆ ಮೂರು ನಾಲ್ಕು ಲಕ್ಷ ಮಾತ್ರ ಕೊಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ. ಸಿಐಎನ್‌ಇಡಿ ಪ್ರಕಾರ ಒಂದೊಂದು ಡಿವಿಜನ್ನಿಗೆ ಎಷ್ಟೆಷ್ಟು ಹಣ ಕೊಟ್ಟಿದ್ದಾರೆ ಎಂದು ಹೇಳಿಬಿಡಲಿ. ಡಿವಿಷನ್ಸ್‌ಗಳು ಎಷ್ಟು ಇವೆ. ಡಿವಿಜನ್ ಕೆಳಗೆ ಎಷ್ಟು ಟ್ಯಾಂಕುಗಳು ಇವೆ ಎಷ್ಟು ಹಣ ಕೊಟ್ಟಿದ್ದಾರೆ ಎಂದು ಲೆಕ್ಕ ಕೊಟ್ಟು ಬಿಟ್ಟರೆ ಸಾಕು.

SRI H. SIDDAVEERAPPA —This amount is not distributed division. wise or talukwise. Whereever there is need we do it. It is never expected to be so. If it were so, funds might have been distributed talukwise.

ಶ್ರೀ ಕೆ. ಎಫ್. ಪಾಟೀಲ್.— ಸಣ್ಣ ನೀರಾವರಿ ಸಮಸ್ಯೆಯ ಬಗ್ಗೆ ಮಾನ್ಯ ವಿರೋಧಪಕ್ಷದ ಸದಸ್ಯರಾದ ಮಾನ್ಯ ಶಂಕರೇಗೌಡರು ಆಗಲಿ. ಮಾನ್ಯ ಮಂಜುನಾಥ್‌ರವರಾಗಲಿ ಮಾನ್ಯ ಹನುಮೇಗೌಡರಾಗಲಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕೊಟ್ಟಿಲ್ಲ ಎನ್ನತಕ್ಕ ಮಾತನ್ನು ಹೇಳಿದಾಗ ತಮಗೆ ಬೇಕಾದವರಿಗೆ ಕೊಡುತ್ತಾರೆ ಎನ್ನುವ ಕಿಂಚಿತ್ ಅರ್ಥವಿದ್ದರೆ ಅದು ತಪ್ಪು ಎಂದು ಹೇಳುತ್ತೇನೆ. ಈ ಮಂತ್ರಿಮಂಡಲ ಅಸ್ತಿತ್ವಕ್ಕೆ ಬಂದಾಗಿನಿಂದ ನನ್ನ ಕ್ಷೇತ್ರದಲ್ಲಿರುವ ಒಂದು ಕೆರೆಯ ಬಗ್ಗೆ ಶ್ರೀ ಚನ್ನಬಸಪ್ಪನವರಿಗೆ ವಿನಂತಿ ಮಾಡಿಕೊಂಡು ಬರೆದಿದ್ದೇನೆ. ಇವತ್ತಿನವರೆಗೂ ಆ ಕೆರೆಯ ಎಸ್ಟಿಮೇಟ್ ಮಾಡಿಲ್ಲ ಏತಕ್ಕೆ ಮಾಡುವುದಿಲ್ಲ ಎನ್ನುವುದು ಗೊತ್ತಿಲ್ಲ. ಕೇಳಿದರೆ ಎಕ್ಸಿಕ್ಯುಟಿವ್ ಇಂಜನಿಯರ್‌ರವರು ದುಡ್ಡು ಇಲ್ಲ, ಸ್ಯಾಂಕ್ಷನ್ ಆಗಿಲ್ಲ ಎಂದು ಹೇಳುತ್ತಾರೆ. ಸ್ಯಾಂಕ್ಷನ್ ಮಾಡುವವರು ಯಾರು ಎಂದು ದೊಡ್ಡ ಪ್ರಶ್ನೆಯಾಗಿದೆ. ಸೂಪರಿಂಟೆಂಡಿಂಗ್ ಇಂಜನಿಯರ್ ಸ್ಟೇಜ್‌ನಲ್ಲಿ ಹಣ ಕೊಡಬೇಕಾಗುತ್ತಿದೆಯೆಂದು ಕಾಣುತ್ತದೆ. ನಾನು ವೈಯುಕ್ತಿಕವಾಗಿ ಯಾವ ಆಫೀಸರ್ ಮನೆಯನ್ನು ಕಾಯುವುದಕ್ಕೆ ಆಗಲಿ ಮಿನಿಸ್ಟರ್ ಮನೆಯನ್ನು ಕಾಯಲು ಹೋಗುವುದಕ್ಕೆ ಆಗಲಿ ಶಕ್ಯವಿಲ್ಲ. ಬರೆಯುತ್ತೇನೆ ಕೊಡುತ್ತೇನೆ ಯಾರು ಸಚಿವರ ಬೆನ್ನು ಹತ್ತುತ್ತಾರೋ ಅವರ ಕೆಲಸ ಮಾತ್ರ ಆಗುತ್ತದೆ. ಹೊಸ ಬಜೆಟ್ ಫಾರಂ ಮಾಡುವಾಗ ಏನೇನು ಕಾರ್ಯಕ್ರಮಗಳನ್ನು ಹಾಕಬೇಕು ಎನ್ನುವುದಕ್ಕೆ ಪಿ. ಡಬ್ಲ್ಯು. ಡಿ.ಯವರು ತಾಲ್ಲೂಕುವೈಸ್, ಡಿಸ್ಟ್ರಿಕ್ಟ್‌ವೈಸ್ ಮೀಟಿಂಗ್ ಮಾಡಿ ಅಲ್ಲಿ ಸದಸ್ಯರು, ಆಫೀಸರು ಕೂಡಿ ಡಿಸ್‌ಕಸ್‌ಮಾಡಿ ಮಿನಿಸ್ಟರಿಗೆ ಕಳುಹಿಸಿದ ಮೇಲೆ ಫೀಸಬಲ್ ಇದ್ದರೆ ಮಾಡಲಿ ಫೀಸಬಲ್ ಇಲ್ಲದಿದ್ದರೆ ಸುಮ್ಮನೆ ಕೊಡಲಿ ಮನಸ್ಸಿಗೆ ಬಂದ ಹಾಗೆ ಕಾರ್ಯಕ್ರಮ ನಡೆಯುತ್ತಿರುವುದರಿಂದ ನಾನು ಹೇಳಿದ ಯಾವ ಕ್ಷೇತ್ರದಲ್ಲಿಯೂ ಯಾವುದೇ ಕೆರೆ ತೆಗೆದುಕೊಂಡಿಲ್ಲ. ನಮ್ಮ ಮಿನಿಸ್ಟರಿಗೆ ೨೫.೩೦ ವರ್ಷದ ಅನುಭವವಿದೆ ಏತಕ್ಕೆ ಈ ಸಮಸ್ಯೆ ಬಗೆಹರಿಯದೆ ಉಳಿದಿದೆ? ಮಿನಿಸ್ಟರಾಗಿ ಬಂದವರು ಆ ಭಾಗದ ಮೆಂಬರ್ಸ್‌ನ್ನು ಕರೆದು ಡಿಸ್‌ಕಸ್ ಮಾಡಿ ಫೀಸಬಲ್ ಇಲ್ಲ ಎಂದರೆ ಬಿಟ್ಟು ಬಿಡಲಿ ಇಲ್ಲದಿದ್ದರೆ, ಮಾಡಲಿ. ಇದು ವೈಯಕ್ತಿಕವಾದ ಪ್ರಶ್ನೆಯಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಕೆರೆ ರಿಪೇರಿ, ತೂಬು ರಿಪೇರಿ, ಮೈನರ್ ವರ್ಕ್ಸ್‌ಗಳ ಐಟಂನ ಪ್ರಕಾರ ಸರ್ಕಾರ ಡಿವಿಜನ್ ವೈಜ್ ಹಂಚುವುದಿಲ್ಲ ಚೀಫ್ ಇಂಜನಿಯರ್ ಅವರು ಆಯಾಯ ಸನ್ನಿವೇಶದಂತೆ ಕೆರೆಗಳು ಎಷ್ಟು ಅವಶ್ಯಕ ಇದೆಯೆನ್ನುವ ಬಗ್ಗೆ ರಿಪೋರ್ಟ್ ತರಿಸಿಕೊಂಡು ಆ ಆಧಾರದ ಮೇಲೆ ಅಲಾಟ್‌ಮೆಂಟ್ ಮಾಡುತ್ತಾರೆ.

The Government will not destribute it talukwise or districtwise. If there is any need, either Sri Hanumegowda or anybody may bring it to our notice.

ಶ್ರೀ ಕಾಗೋಡು ತಿಮ್ಮಪ್ಪ.— ಅದನ್ನು ಹೇಳಿದರೂ ಯಾರೂ ನೋಡುವವರೇ ಇಲ್ಲ.

ಶ್ರೀ ಎಚ್, ಎಂ. ಚನ್ನಬಸಪ್ಪ.— ಕೆರೆಗಳ ರಿಪೇರಿಗಾಗಿ ಹಣವನ್ನು ಚೀಫ್ ಇಂಜನಿಯರ್ ಡಿವಿಜನ್ ವೈಸ್ ಕೊಡತಕ್ಕವರು ಸರ್ಕಾರ ಒಟ್ಟಿನಲ್ಲಿ ಮೊಬಲಗು ಒದಗಿಸತಕ್ಕದ್ದು. ಎಲ್ಲೆಲ್ಲಿ ಎಷ್ಟೆಷ್ಟು ಅವಶ್ಯಕತೆ ಇದೆ ಎನ್ನುವ ಬಗ್ಗೆ ಸೂಪರಿಂಟೆಂಡೆಂಟ್ ಇಂಜನಿಯರ್‌ಗಳ ರಿಪೋರ್ಟ್ ಇರುತ್ತದೆ. ಹಂಚಿಕೆ ಆಗುತ್ತದೆ. ಹೆಚ್ಚಿಗೆ ಬೇಕು ಎನ್ನುವುದು ಇದ್ದರೆ Hon, Member can move it with the superintending Engineer and that could be got done.

ಶ್ರೀ ಕಾಗೋಡು ತಿಮ್ಮಪ್ಪ.— ಕೆರೆಗಳ ರಿಪೇರಿ ಮಾಡುವುದು ಇದ್ದರೆ ಇಲ್ಲಿ ಹೇಳಬೇಕು. ಅಸಿಸ್ಟೆಂಟ್ ಇಂಜನಿಯರ್, ಎಕ್ಸಿಕ್ಯೂಟೀವ್ ಇಂಜಿನಿಯರ್ಸ್‌ಗೆ ಬರೆದು ಸಾಕಾಯಿತು

ಶ್ರೀ ಕೆ ಎಫ್ ಪಾಟೀಲ್.— ಅನೇಕ ಆಕಾಂಕ್ಷೆಗಳನ್ನು ಹೇಳುವುದು ಸದಸ್ಯರ ಕರ್ತವ್ಯ. ಫೀಸಿಬಲ್ ಇಲ್ಲವೇ ಅಥವಾ ಇದೆಯೋ ಎನ್ನುವುದು ನಿರ್ಧಾರಮಾಡುವುದು ತಜ್ಞರ ಕರ್ತವ್ಯ. ಎರಡೂ ಇಲ್ಲದಿದ್ದರೆ ಹೇಗೆ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಅವರು ಹೇಳತಕ್ಕದ್ದು ಹೊಸ ಕೆರೆ ವಿಷಯ. ಇವರು ಹೇಳುವುದು ರಿಪೇರಿ ವಿಷಯ ಒಂದೊಂದಕ್ಕೆ ಸಂಬಂಧವಿಲ್ಲ,

ಶ್ರೀ ಸಿ. ಅಂದಾನಪ್ಪ.— ಒಂದು ವಿಚಾರ ಸರ್ಕಾರದ ಗಮನಕ್ಕೆ ತರುತ್ತೇನೆ. ನನ್ನ ಕ್ಷೇತ್ರದಲ್ಲಿ ಹತ್ತು ವರ್ಷಗಳಿಂದ ತುಂಗಭದ್ರಾ ನದಿ ದಂಡೆಗೆ ಅನೇಕ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ಪ್ರಾರಂಭ ಮಾಡಿದ್ದಾರೆ. ಅದು ಒಂದು ಲಕ್ಷದಿಂದ ಮೂರು ನಾಲ್ಕು ಲಕ್ಷದವರೆಗೆ ಇದೆ. ದುರಾದೃಷ್ಟವಶಾತ್ ಯಾವುವು ಕಂಪ್ಲೀಟ್ ಆಗಿಲ್ಲ.

ಶ್ರೀ ಎಸ್. ಬಿ. ನಾಗರಾಳ್.— ನಾನಾ ತೊಂದರೆಗಳು ಇವೆ. Most of the lift irrigation works will be completed, before the end of June.

ಶ್ರೀ ಟಿ. ಎಂ. ಮಂಜುನಾಥ.— ನಮ್ಮ ತಾಲ್ಲೂಕು ಕರ್ನಾಟಕ ರಾಜ್ಯದಲ್ಲಿ ಇಲ್ಲ ಎಂದು ಹೇಳಿ ಬಿಡಲಿ.

ಶ್ರೀ ಎಂ. ಎಂ. ಸಜ್ಜನ್.— ಭೂಮಿ ಮುಳುಗಡೆ ಆಗಿರುವ ಕಡೆ ಭೂ ಮಾಲಿಕರಿಗೆ ದುಡ್ಡು ಕೊಡುವ ವ್ಯವಸ್ಥೆ ಕೂಡಲೇ ಮಾಡಬೇಕು. ಅದಕ್ಕೆ ಉತ್ತರ ಬರಲಿಲ್ಲ. ಲ್ಯಾಂಡ್ ಅಕ್ವಿಜೀಶನ್ ಆಕ್ಟಿಗೆ ಅಮೆಂಡ್‌ಮೆಂಟ್ ತರುತ್ತಾರೆಯೋ? ಯಾವ ರೀತಿ ತೀವ್ರ ವ್ಯವಸ್ಥೆ ಮಾಡಿ ಭೂಮಿ ಮುಳುಗಡೆ ಆಗಿರುವ ಭೂ ಮಾಲಿಕರಿಗೆ ದುಡ್ಡು ಹೇಗೆ ಕೊಡಿಸುತ್ತಾರೆ ಎಂದು ಹೇಳಬೇಕು.

ಶ್ರೀ ಎಸ್. ಬಿ. ನಾಗರಾಳ್.— ಎಲ್ಲಿ ತಕರಾರು ಇಲ್ಲದೆ ಇರುವ ಕೆರೆಗಳು ಇವೆ ಅಲ್ಲಿ ತ್ವರಿತಗತಿಯಿಂದ ಜಮೀನಿನ ಕಾಂಪನ್‌ಸೇಷನ್ ಸಿಗುತ್ತದೆ. ತಕರಾರು ಇರುವ ಕೆರೆಗಳಲ್ಲಿ ಕೋರ್ಟಿಗೆ ಹೋದರೆ ೫,೬ ವರ್ಷಗಳು ಆಗಿರುವ ನಿದರ್ಶನಗಳೂ ಇವೆ. ಇರಿಗೇಷನ್ ಅಭಿವೃದ್ಧಿಗೆ ಉದಾತ್ತವಾಗಿ ಮುಂದೆ ಬರುವವರಿಗೆ ೬ ತಿಂಗಳ ೮ ತಿಂಗಳೊಳಗಾಗಿ ಕಾಂಪನ್‌ಸೇಷನ್ ಕೊಟ್ಟಿರತಕ್ಕ ಉದಾಹರಣೆ ಇವೆ. ಎಲ್ಲವೆ ಸಾಮಾನ್ಯವಾಗಿ ಸದಸ್ಯರು ಸಹಕಾರ ಮಾಡಿ ಕಾಂಪನ್‌ಸೇಷನ್ ಬೇಗ ಕೊಡುವಂತೆ ಸಹಾಯ ಮಾಡಿದರೆ ಸರ್ಕಾರ ಬೇಗ ಕೊಡಿಸುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ.

10·00 A.M.

ಶ್ರೀ ಜೆ. ಎಲ್. ಕಬಾಡಿ.— ಊರಿನವರು ಮುಂದೆ ಬಂದು ಜಮೀನು ಕೊಟ್ಟು ಹೊಸ ಕೆರೆ ಕಟ್ಟಿಸುವುದಕ್ಕೆ ಸಹಾಯ ಮಾಡಿದರೂ ೧೦ ವರ್ಷಗಳಿಂದ ಅಕ್ವಿಜಿಷನ್ ಮಾಡಿದ ಜಮೀನಿಗೆ ಕಿಮ್ಮತ್ತು ಕೊಟ್ಟಿಲ್ಲ ಕಂಪೆನ್‌ಜೇಷನ್ ಕೊಟ್ಟಿಲ್ಲ. ಇದುವರೆಗೆ ಯಾವ ವ್ಯವಸ್ಥೆಯೂ ಆಗದೇ ಇರುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ?

† ಶ್ರೀ ಎಚ್. ಎಂ. ಚನ್ನಬಸಪ್ಪ.—[ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಶಾಖೆಗಳ ಮಂತ್ರಿಗಳು] ಮಾನ್ಯ ಅಧ್ಯಕ್ಷಿಣಿಯವರೆ, ಪಿ. ಡಬ್ಲ್ಯು. ಡಿ. ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆ ೨ ದಿವಸಗಳಿಂದಲೂ ಅವಿಚ್ಛಿನ್ನವಾಗಿ ನಡೆದಿದೆ. ಮಾನ್ಯ ಸದಸ್ಯರು ಅನೇಕ ರಚನಾತ್ಮಕ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತೆ ಬಹಳ ತೀವ್ರಕ್ರಮವಾಗಿ ಕಟುವಾದ ಟೀಕೆಗಳನ್ನು ಮಾಡಿದ್ದಾರೆ. ಈ ಎರಡಕ್ಕೂ ಕೂಡ ನಾನು ಅವರನ್ನು ಅಭಿನಂದಿಸುತ್ತೇನೆ, ಕಾರಣ ಸಲಹೆಗಳನ್ನು ಕೊಡತಕ್ಕಂತಾದ್ದು ಆಡಳಿತದಲ್ಲಿ ವಿಧಿ ಬಂದೋಬಸ್ತು ಮತ್ತು ಶಿಸ್ತು, ಚೆನ್ನಾಗಿ ನಡೆಯಲಿ, ಹೆಚ್ಚು ಪ್ರಯೋಜನಕಾರಿಯಾದ ಕೆಲಸ ಮಾಡಲಿ ಎಂದು ವಿಶಾಲ ದೃಷ್ಟಿಯಿಂದ ಮಾಡಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಹಾಗೂ ಟೀಕೆ ಟಿಪ್ಪಣಿಗಳನ್ನು ಮಾಡತಕ್ಕದ್ದೂ ಕೂಡ ಎಲ್ಲೆಲ್ಲಿ ಏನೇನು ಲೋಪದೋಷಗಳು ಇವೆ ಅವುಗಳನ್ನು ಎತ್ತಿ ತೋರಿಸಿ ಅವುಗಳನ್ನು ಸರಿಪಡಿಸಿಕೊಂಡು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಲಿ ಎನ್ನುವ ಸದುದ್ದೇಶದಿಂದ ಟೀಕೆ ಮಾಡಿದ್ದಾರೆಂದು ತಿಳಿದುಕೊಂಡಿದ್ದೇನೆ. ಅವೆಲ್ಲಕ್ಕೂ ಆ ಕಡೆಯ ಸದಸ್ಯರಿಗೆ ಮತ್ತು ಈ ಕಡೆಯ ಸದಸ್ಯರಿಗೆ ಎಲ್ಲರಿಗೂ ಕೂಡ ಅಭಿನಂದನೆಯನ್ನು ಸಲ್ಲಿಸತಕ್ಕದ್ದು ನನ್ನ ಪ್ರಥಮ ಕರ್ತವ್ಯ. ಲೋಕೋಪಯೋಗಿ ಬಹಳ ದೊಡ್ಡ ಇಲಾಖೆ ಮತ್ತು ಇಡೀ ದೇಶದ ಆರ್ಥಿಕ ಪ್ರಗತಿಗೆ ತಳಹದಿಯನ್ನು ಹಾಕತಕ್ಕ ಇಲಾಖೆ. ಇದರಲ್ಲಿ ಸುಮಾರು ೭೭೦೦ ಅಧಿಕಾರಿಗಳು, ೧೪೦೦೦ ಜನ ವರ್ಕ್‌ಚಾರ್ಜ್ಡ್ ಎಸ್ಟಾಬ್ಲಿಷ್‌ಮೆಂಟ್, ಹೆಚ್ಚು ಕಡಿಮೆ ೨೧,೦೦೦ ಜನ ಕೆಲಸ ಮಾಡುತ್ತಿದ್ದಾರೆ. ವರ್ಷಂಪ್ರತಿ ಸಂಬಳ ಸಲ್ಲಿಸಲು ಹೆಚ್ಚು ಕಡಿಮೆ ೬೩ ಕೋಟಿ ರೂಪಾಯಿ ಖರ್ಚಾಗುತ್ತದೆ. ಈ ಇಲಾಖೆ ದಕ್ಷತೆಯಿಂದ, ಪ್ರಮಾಣಿಕತೆಯಿಂದ ಕೆಲಸ ಮಾಡಿದರೆ ಮಾತ್ರ ಎಲ್ಲಾ ಇಲಾಖೆಗಳೂ ಪ್ರಗತಿಗೆ ತಳಹದಿಯಾಗುತ್ತದೆ, ಇದು ಪ್ರತಿಯೊಂದು ಇಲಾಖೆಗೂ ಸಂಬಂಧಪಟ್ಟದ್ದು. ಆದುದರಿಂದ ಆ ಬಗ್ಗೆ ಎಲ್ಲಾ ಇಲಾಖೆಗಳವರೂ ದಕ್ಷತೆಯಿಂದ ಕೆಲಸ ಮಾಡುವುದರ ಜೊತೆಗೆ ಈ ಇಲಾಖೆಗೆ ಸಂಬಂಧಪಟ್ಟವರೆಲ್ಲ ಹೆಚ್ಚು ಪ್ರಮಾಣಿಕತೆಯಿಂದ ಹೆಚ್ಚು ದಕ್ಷತೆಯಿಂದ ಕೆಲಸ ಮಾಡುವ ಅವಶ್ಯಕತೆ ಇದೆ. ನಿನ್ನೆ ಮೊನ್ನೆ ತಾವು ಮಾಡಿದಂಥ ಟೀಕೆ ಟಿಪ್ಪಣಿಗಳು ಎಲ್ಲವೂ ಕೂಡ ಒಳ್ಳೆಯ ದೃಷ್ಟಿಯಿಂದ ಮಾಡಿದ್ದಾರೆ ಎಂದು ನಾನು ಭಾವಿಸುತ್ತೇನೆ. ನಮ್ಮ ಮೈಸೂರು ಬಹಳ ಕಾಲದಿಂದಲೂ ಕೂಡ ದಕ್ಷರಾದಂಥ ಇಂಜಿನಿಯರ್‌ಗಳಿಗೆ ಹೆಸರುವಾಸಿಯಾದ ರಾಜ್ಯ. ಈವತ್ತು ಕೂಡಾ ಅದೇ ಸ್ಥಾನವನ್ನು ಮೈಸೂರು ರಾಜ್ಯ ಗಳಿಸಿದೆ ಎಂದರೆ ಅತಿಶಯೋಕ್ತಿ ಏನಿಲ್ಲ. ಕಾರಣ ನಾನು ಅನೇಕ ರಾಜ್ಯಗಳಲ್ಲಿ ಹೋಗಿ ನೋಡಿದ್ದೇನೆ, ಎಲ್ಲಾ ಕ್ಷೇತ್ರಗಳಲ್ಲೂ ಕೆಲಸಮಾಡತಕ್ಕ ನಮ್ಮ ಇಂಜನಿಯರ್‌ಗಳು ಅವರಿಗಿಂತಲೂ ಅನೇಕ ರೀತಿಯಲ್ಲಿ ಹೆಚ್ಚು ದಕ್ಷತೆಯಿಂದ ಕೆಲಸಮಾಡತಕ್ಕ ಶಕ್ತಿಯುಳ್ಳವರಾಗಿದ್ದಾರೆ, ನೆನ್ನೆ ಮೊನ್ನೆ ನಡೆದಂಥ ಮಾತುಕತೆಗಳಲ್ಲಿ ಬಹ.

(ಶ್ರೀ ಹೆಚ್. ಎಂ. ಚನ್ನಬಸಪ್ಪ)

ತೇಕ ಈ ಇಲಾಖೆಯಲ್ಲಿ ಇರತಕ್ಕ ಲಂಚಗುಳಿತನ ಮತ್ತು ಅದಕ್ಷತೆ ಬಗ್ಗೆ ನಾನಾ ತರಹ ಟೀಕೆ ಟಿಪ್ಪಣಿಗಳನ್ನು ಬಹಳ ತೀವ್ರತಮವಾಗಿ ಮಾಡಿದ್ದಾರೆ. ಅದರಲ್ಲಿ ಏನೂ ಭಿನ್ನಾಭಿಪ್ರಾಯ ಇಲ್ಲ. ಇಷ್ಟು ದೊಡ್ಡ ಇಲಾಖೆಯಲ್ಲಿ ಕೆಲವು ಜನ ಕೆಟ್ಟವರೂ ಇರಬಹುದು, ಕೆಲವು ಜನ ಲಂಚಕೋರರು ಇರಬಹುದು ಮತ್ತು ಅದಕ್ಷತೆ ಇದ್ದಂತಹವರೂ ಇರಬಹುದು, ಅಂದಮಾತ್ರಕ್ಕೆ ಇಡೀ ಇಲಾಖೆ ಆ ರೀತಿ ಇದೆ ಎನ್ನತಕ್ಕಂಥ ಭಾವನೆ ಮಾಡುವುದು ಸರಿಯಲ್ಲ ತಾವು ಈ ರೀತಿ ಭಾವನೆ ಮಾಡುವುದಿಲ್ಲ ಎಂದು ತಿಳಿದು ಕೊಂಡಿದ್ದೇನೆ. ಎಲ್ಲೆಲ್ಲಿ ಅದಕ್ಷತೆ ಅಪ್ರಮಾಣಿಕತೆ ಇದೆ ಅದನ್ನು ನಾವು ಗುರುತಿಸಿ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾದುದು ನಮ್ಮ ಕರ್ತವ್ಯ. ಆದುದರಿಂದ ಈ ರಾಜ್ಯದ ಆಡಳಿತವನ್ನು ಸುಗಮ ಮಾಡಿ ಸುಲಲಿತವಾಗಿ ಪ್ರಾಮಾಣಿಕತೆಯಿಂದ ಕೆಲಸ ಮಾಡತಕ್ಕಂಥ ರೀತಿಯಲ್ಲಿ ಏರ್ಪಾಡು ಮಾಡಲು ನಾವೆಲ್ಲರೂ ಕೂಡ ಕಾರಣಕರ್ತರಾಗಿದ್ದೇವೆ ಈ ಸಭೆಯಲ್ಲಿ ಅನೇಕ ವೇಳೆ ನಾನು ಹೇಳಿದ್ದೇನೆ ವಿರೋಧ ಪಕ್ಷದ ಜನ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದಾರೆ, ನಮ್ಮ ದಕ್ಷತೆ ಮತ್ತು ಶಕ್ತಿ ಹೆಚ್ಚಾಗುವುದಕ್ಕೆ ಕಾರಣಕರ್ತರು ಅವರು ಎಂದು ಎಷ್ಟೋ ಸಾರಿ ಹೇಳಿದ್ದೇನೆ. ಅನೇಕ ವೇಳೆ ಕೆಲಸ ಮಾಡತಕ್ಕ ಕಾಲದಲ್ಲಿ ಎಲ್ಲೆಲ್ಲಿ ಲೋಪದೋಷಗಳು ಆಗಿವೆ ಅವು ನಮಗೆ ಕಂಡು ಬರದಿದ್ದರೆ, ನಮ್ಮ ಬೆನ್ನು ಹಿಂದೆ ಇರುವ ಲೋಪದೋಷಗಳನ್ನು ತೋರಿಸುವುದರಿಂದ ನಾವು ಎಚ್ಚೆತ್ತು ಮುಂದುವರಿಯುವುದಕ್ಕೆ ಸಹಾಯಕವಾಗುತ್ತದೆ. ಯಾವ ಟೀಕೆ ಟಿಪ್ಪಣಿಯನ್ನು ತೀವ್ರತಮವಾಗಿ ಮಾಡಿದರೂ ಕೂಡ ಸದುದ್ದೇಶದಿಂದ ಮಾಡಿದ್ದಾರೆ ಎನ್ನತಕ್ಕ ಭಾವನೆ ನನ್ನ ಮನಸ್ಸಿನಲ್ಲಿ ಸ್ಪಷ್ಟವಾಗಿದೆ ಎಂದು ಈ ಸಭೆಯಲ್ಲಿ ತಿಳಿಸಬೇಕೆಂದಿದ್ದೇನೆ. ಅಪ್ರಾಮಾಣಿಕತೆ ಮತ್ತು ಅದಕ್ಷತೆ ಒಂದೇದಿವಸದಲ್ಲಿ ಒಂದೇ ವಾರದಲ್ಲಿ ಬೆಳೆಯುವುದಿಲ್ಲ. ಈ ಲಂಚಗುಳಿತನ, ಅದಕ್ಷತೆ, ಅಪ್ರಮಾಣಿಕತೆ ಹಲವಾರು ವರ್ಷಗಳಿಂದ ಬೆಳೆದು ಬಂದಿದೆ. ಕೆಲವು ಕಾಲ ಹೆಚ್ಚುತ್ತದೆ, ಕೆಲವು ಕಾಲ ಕಮ್ಮಿಯಾಗುತ್ತದೆ. ಕಾರಣಾಂತರಗಳಿಂದ ಸನ್ನಿವೇಶಗಳಿಂದ ಆಯಾ ಆಡಳಿತ ದರ್ಪ ಮತ್ತು ಬಿಗಿಗೆ ಅನುಗುಣವಾಗಿ ಆಗುತ್ತದೆ. ಇದರಲ್ಲಿ ಲಂಚಕೋರ ಮತ್ತು ಲಾಭಪಡುವ ಕಂಟ್ರಾಕ್ಟರುಗಳು ಹಾಗೂ ಅನೇಕ ಪ್ರಭಾವಯುತರಾದ ಶಕ್ತಿಗಳು ಒಂದು ಕಡೆ ಸಂಯುಕ್ತ ರಂಗವನ್ನು ಮಾಡಿಕೊಂಡಿವೆ ಈ ಸಂಯುಕ್ತ ರಂಗದಿಂದ ಅನೇಕ ಅವ್ಯವಹಾರಗಳು ನಡೆದು ಹೋಗುತ್ತಿವೆ. ಹಾಗೆ ನಡೆದುಹೋದ ಕಾಲದಲ್ಲಿ ಈ ವಿಶಾಲವಾದ ಇಲಾಖೆಯಲ್ಲಿ ನಡೆಯತಕ್ಕಂಥದನ್ನು ಗುರುತಿಸಿ ಅದನ್ನು ರಿಪೇರಿ ಮಾಡತಕ್ಕದರಲ್ಲಿ ನಾವೂ ನೀವೂ ಎಲ್ಲರೂ ಕೂಡ ಸರ್ವಪ್ರಯತ್ನವನ್ನು ನಮ್ಮ ಕ್ರಿಯಾಶಕ್ತಿಯಿಂದ ಮಾಡಬೇಕಾಗಿದೆ. ಅದು ರಚನಾತ್ಮಕವಾದದ್ದು. ಇದರಲ್ಲಿ ಕೆಲವು ಅಡ್ಡಿ ಆತಂಕಗಳು. ಕಷ್ಟಗಳು ತೊಂದರೆಗಳು ಅಗಾಧವಾಗಿ ಇವೆ. ಕಾರಣ ಅನೇಕ ವೇಳೆ ಒಬ್ಬ ಅಧಿಕಾರಿಯನ್ನು ಶಿಕ್ಷೆ ಮಾಡಬೇಕಾದರೆ ಹಿಂದಿನಿಂದಲೂ ಬಂದಿರತಕ್ಕ ಕಾನೂನುಗಳು ಏನು ಇವೆ. ಇವುಗಳಿಂದ ಕೂಡ ಅಡ್ಡಿ ಆತಂಕಗಳು ಬಂದಿವೆ. ಕಾನ್‌ಸ್ಟಿಟ್ಯೂಷನ್‌ನಲ್ಲಿ ಏನೇನು ರಕ್ಷಣೆಗಳನ್ನು ಕೊಟ್ಟಿದ್ದಾರೋ ಆ ರಕ್ಷಣೆ ಕೊಟ್ಟಿರುವುದೇ ಅಪರಾಧವಾಗಿ ಅನೇಕವೇಳೆ ಪರಿಣಮಿಸುತ್ತದೆ, ಆದುದರಿಂದ ಅತ್ಯಾವಶ್ಯಕ ರೀತಿಯಲ್ಲಿ ಕೋಡಲ್ ರೂಲ್ಸ್ ಸಿ.ಸಿ.ಎ ರೂಲ್ಸ್ ಮತ್ತು ವಿಧಿನಿಯಮಗಳನ್ನು ಬದಲಾವಣೆ ಮಾಡಿ ಈಗಿನ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ಮಾಡಿ ತಪ್ಪು ಮಾಡಿದವರನ್ನು ತಕ್ಷಣ ಶಿಕ್ಷೆ ಮಾಡತಕ್ಕ ವ್ಯವಸ್ಥೆ ಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ ಎಂದು ನನ್ನ ಅನುಭವದಲ್ಲಿ ಸ್ಪಷ್ಟವಾಗಿದೆ. ಮಾತನಾಡುವಾಗ ಅನೇಕ ಮಂದಿ ನಮ್ಮ ಕಡೆಯವರು ಮತ್ತು ವಿರೋಧಪಕ್ಷದ ಸದಸ್ಯರು ಕೆಲವು ರಚನಾತ್ಮಕವಾದ ಸಲಹೆ ಕೊಟ್ಟರು. ದಕ್ಷತೆಯನ್ನು ಹೆಚ್ಚಿಸಬೇಕಾದರೆ ಈ ಇಲಾಖೆಯ ಸ್ಟ್ರಕ್ಚರ್ ಏನು ಇದೆ ಅದು ಪುನರ್ರಚನೆಯಾಗಬೇಕು. ಸ್ವಲ್ಪ ಯೂನಿಫೈಡ್ ಕಂಟ್ರೋಲ್ ಇರಬೇಕು ಎಂದು ಸಲಹೆ ಕೊಟ್ಟರು. ಜೊತೆಗೆ ಸ್ಪೆಷಿಯಲೈಸೇಷನ್ ಏನು ಇದೆ. ಪಿ.ಎಚ್.ಸಿ ಸ್ಪೆಷಿಯಲೈಸೇಷನ್. ಇರಿಗೇಷನ್ ಸ್ಪೆಷಯಲೈಸೇಷನ್, ರೋಡ್ ಸ್ಪೆಷಿಲೈಸೇಷನ್, ಬಿಲ್ಡಿಂಗ್ ಸ್ಪೆಷಿಲೈಜೇಷನ್ ಇವೆಲ್ಲಾ ಕೆಲಸಮಾಡತಕ್ಕ ಮಟ್ಟದಲ್ಲಿ ಅನಾವಶ್ಯಕ. ಈ ವಿಚಾರದಲ್ಲಿ ಎಕ್ಸಿಕ್ಯೂಟಿವ್ ಇಂಜನಿಯರ್ ಕೆಳಗೆ ಸ್ಪೆಷಿಲೈಸೇಷನ್ ಅನಾವಶ್ಯಕ. ವರ್ಕ್‌ಲೋಡ್ ನೋಡಿ ಎಲ್ಲೆಲ್ಲಿ ಎಷ್ಟೆಷ್ಟು ಪ್ರಮಾಣದ ಸಿಬ್ಬಂದಿ ಬೇಕು ಎಂದು ವ್ಯವಸ್ಥೆ ಮಾಡಿ, ಎಕ್ಸಿಕ್ಯೂಟಿವ್ ಇಂಜಿನಿಯರ್, ಸೂಪರಿಂಟೆಂಡಿಂಗ್ ಇಂಜನಿಯರ್ ಮತ್ತು ಚೀಫ್ ಇಂಜನಿಯರ್‌ಗಳ ಮಟ್ಟದಲ್ಲಿ ಸ್ಪೆಷಿಲೈಸೇಷನ್ ಪ್ರತಿಯೊಂದು ಬ್ರಾಂಚುಗಳಲ್ಲಿಯೂ ಕೂಡ ಇರಬೇಕಾದುದು ಅವಶ್ಯಕ ಎಂದು ಮಾನ್ಯ ಸದಸ್ಯರು ಈ ಕಡೆಯವರೂ, ಆ ಕಡೆಯವರೂ ತಿಳಿಸಿದರು. ಇದರಲ್ಲಿ ಸ್ವಲ್ಪಮಟ್ಟಿಗೆ ನನ್ನ ಸಹಾನುಭೂತಿ ಇದೆ. ಅನೇಕ ವೇಳೆ ಯೋಚನೆ ಮಾಡಿದ್ದೇನೆ, ಒಂದೊಂದು ಬ್ರಾಂಚಿನಲ್ಲಿ ಒಂದೊಂದು ಹಯರಾರ್ಕಿ ಮಾಡುವ ಬದಲು ಕೆಳಮಟ್ಟದಲ್ಲಿ, ಕೆಲಸ ನಡೆಯತಕ್ಕ ಕ್ಷೇತ್ರದಲ್ಲಿ ಒಂದು ಡಿವಿಜನ್ ಕೆಳಗೆ ಸ್ಪೆಷಲೈಸೇಷನ್ ಅನಾವಶ್ಯಕ ಅದರ ಮೇಲ್ಪಟ್ಟು ಸ್ಪೆಷಲೈಸೇಷನ್ ಅತ್ಯಾವಶ್ಯಕ ಎನ್ನತಕ್ಕ ವಿಷಯದಲ್ಲಿ ಇಂಜನಿಯರುಗಳನ್ನು ಕೂಡಿಸಿ, ಅವರೂ ನಾವೂ ಎಲ್ಲರೂ ವಿಚಾರಮಾಡಿ ಯಾವ ರೀತಿ ಹೆಚ್ಚು ಪ್ರಯೋಜನಕಾರಿಯಾಗುವ ರೀತಿಯಲ್ಲಿ ಮಾಡಬೇಕು ಎನ್ನತಕ್ಕದ್ದನ್ನು ಆಲೋಚನೆ ಮಾಡುವುದಕ್ಕೆ ಯೋಗ್ಯವಾದ ವಿಷಯ ಇದು, ಎನ್ನುವುದನ್ನು ನಾನು ಸ್ಪಷ್ಟಪಡಿಸುತ್ತೇನೆ.

ಇದ್ದೇನೆ. ಮತ್ತು ಇದರ ಜೊತೆಗೆ ಅಧಿಕಾರ ವಿಕೇಂದ್ರೀಕರಣ ಆಗಬೇಕು. ಅದರಲ್ಲೂ ಕೂಡ ವರ್ಗಾವರ್ಗಿಗಳು ಆಗುವಾಗ ವಿಕೇಂದ್ರೀಕರಣವಾಗಬೇಕು. ಕೆಲಸಕಾರ್ಯಗಳಿಗೆ ಯಾವ ರೂಲ್ಸ್ ವಿಧಿನಿಯಮ ಫಿಕ್ಸ್ ಮಾಡುತ್ತೇವೆ, ಅದರ ಪ್ರಕಾರ ಕೆಲಸಕಾರ್ಯಗಳನ್ನು ನಡೆಯಬೇಕು ಎನ್ನತಕ್ಕದ್ದನ್ನು ಸಲಹೆ ಮಾಡಿದ್ದು. ಅದು ಈಗಾಗಲೇ ಇದೆ. ಆದರೆ ಏಕೆ ಇಷ್ಟು ಹೆಚ್ಚಿನ ರೀತಿಯಿಂದ ನಡೆಯುತ್ತಾ ಇಲ್ಲ ಎನ್ನುವುದಕ್ಕೆ ಅನೇಕ ಕಾರಣಗಳು ಇವೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇವೆ ಅದಕ್ಕೋಸ್ಕರ ನಾರ್ಮ್ಸ್ ಫಿಕ್ಸ್ ಮಾಡಬೇಕು ವರ್ಗಾವರ್ಗಿ ವಿಷಯದಲ್ಲಿ. ಕೆಲಸದ ದೃಷ್ಟಿಯಿಂದ ಮತ್ತು ಪ್ರಗತಿಯ ದೃಷ್ಟಿಯಿಂದ ನಾರ್ಮ್ಸ್ ಫಿಕ್ಸ್ ಮಾಡಬೇಕಾದುದು ಅವಶ್ಯಕವೆಂದು ನಾರ್ಮ್ಸ್ ಕೂಡ ಫಿಕ್ಸ್ ಮಾಡಿದ್ದೇವೆ ಇದರಲ್ಲಿ ಏನಾದರೂ ಲೋಪದೋಷ ಇದ್ದರೆ ಅವುಗಳನ್ನು ಸರಿಪಡಿಸಿ, ನಾರ್ಮ್ಸ್ ಫಿಕ್ಸ್ ಮಾಡಿ, ಅಧಿಕಾರವನ್ನು ವಿಕೇಂದ್ರೀಕರಣ ಮಾಡತಕ್ಕದ್ದು ಅವಶ್ಯಕ ಮಾಡುವುದು ಅಷ್ಟೇ ಅಲ್ಲ, ಅವನ್ನು ಜಾರಿಗೆ ತರತಕ್ಕದ್ದು ಬಹಳ ಅವಶ್ಯಕ. ಮತ್ತೊಂದು ವಿಷಯವೇನೆಂದರೆ, ಅನೇಕ ಜನ ಮಾನ್ಯ ಸದಸ್ಯರು ಮಾತನಾಡುವಾಗ ಅನೇಕ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ ಅವರಲ್ಲಿ ನನ್ನ ಕೋರಿಕೆ ಇಷ್ಟೆ. ಅವರದು ತಪ್ಪು ಇಲ್ಲ ಹಳಬರು ಅನೇಕ ಜನ ಸದಸ್ಯರು ಇದ್ದಾರೆ. ಮತ್ತು ಕೆಲವರು ಹೊಸ ಸದಸ್ಯರು ಇದ್ದಾರೆ. ಆದುದರಿಂದ ಒಂದೇ ವೇಳೆ ಹೊಸ ಸದಸ್ಯರು ಪ್ರಶ್ನೆಗಳನ್ನು ಕೇಳುವಾಗ ಆಗಲೀ ಟೀಕೆಟಿಪ್ಪಣಿಗಳನ್ನು ಮಾಡುವಾಗ ಆಗಲೀ, ಸ್ವಲ್ಪ ಹೆಚ್ಚುಕಡಿಮೆ ಹೋದರೂ ಕೂಡ ನಾವು ಅದನ್ನು ಸರಿಪಡಿಸಿಕೊಂಡು ಹೋಗಬೇಕಾದ್ದು ಅತ್ಯಾವಶ್ಯಕ. ಪ್ರಶ್ನೋತ್ತರ ಕಾಲದಲ್ಲಿ ಯಾವ ಯಾವ ವಿಷಯದಲ್ಲಿ ಮಾತನಾಡಬೇಕು ಎಂದು ಇಚ್ಛೆ ಇದೆ. ಅದರ ಬಗ್ಗೆ ಮಾಹಿತಿಗಳನ್ನು ತರಿಸುವುದು ಮೂಲ ಉದ್ದೇಶ, ಅದರ ಆಧಾರದ ಮೇಲೆ ಚರ್ಚೆಗಳನ್ನು ನಡೆಸತಕ್ಕದ್ದು ಮೂಲ ಉದ್ದೇಶ. ಅನೇಕ ವೇಳೆ ಯಾರು ಯಾರೋ ಬಂದು ಹೇಳಿ ಬಿಡುತ್ತಾರೆ. ಪ್ರಶ್ನೆ ಕೇಳಿ ಹೀಗೆ ಆಗಿಬಿಟ್ಟಿದೆ ಎಂದು ಹೇಳುತ್ತಾರೆ. ಅದು ಸರಿಯಾಗಿದ್ದ ಪಕ್ಷದಲ್ಲಿ ಅದಕ್ಕೆ ಹೆಚ್ಚಿನ ಮಾನ್ಯತೆ ಬರುತ್ತದೆ. ಅದು ಶುದ್ಧ ತಪ್ಪು ಆಗಿದ್ದ ಪಕ್ಷದಲ್ಲಿ ನಮ್ಮ ಮನಸ್ಸಿಗೆ ಖೇದ ಆಗುತ್ತದೆ. ಎಲ್ಲಾ ಮಾನ್ಯ ಹೊಸ ಸದಸ್ಯರಲ್ಲೂ ಕೂಡ ನನ್ನ ಕೋರಿಕೆಯೇನೆಂದರೆ ತಾವು ಯಾವ ಟೀಕೆ ಟಿಪ್ಪಣಿಗಳನ್ನು ಮಾಡಬೇಕಾದರೂ ಕೂಡ ಆಧಾರಗಳನ್ನು ಮೊದಲು ಒದಗಿಸಿಕೊಂಡು ಟೀಕೆ ಟಿಪ್ಪಣಿ ಮಾಡುವುದು ನಿಮಗೂ ಯೋಗ್ಯ, ನಮಗೂ ಯೋಗ್ಯ. ಆದ್ದರಿಂದ ಹೆಚ್ಚಿನ ಪ್ರಯೋಜನ ದೇಶಕ್ಕೆ ಆಗುತ್ತದೆ. ಚರ್ಚೆ ನಡೆಯುತಕ್ಕ ಕಾಲದಲ್ಲಿ ಅನೇಕ ಸದಸ್ಯರು 2 ವರ್ಷಗಳಿಂದ ಕೆಲಸ ಹಿಂದುಳಿದ, ಕೆಲಸ ನಡೆದಿಲ್ಲ, ಆದರಲ್ಲ ನಿರೀಕ್ಷಿಸಿದಷ್ಟು ಕೆಲಸ ನಡೆದಿಲ್ಲ ಎಂದು ಹೇಳತಕ್ಕಂಥಾದ್ದು ಕೇಳಿಬಂದಿದೆ. ಇದಕ್ಕ ಏನು ಕಾರಣ ಎಂದು ಯೋಚನೆ ಮಾಡಬೇಕಾಗಿದೆ ನಿಜವಾಗಿಯೂ ಕೆಲಸ ಬಹಳವಾಗಿ ನಡೆದಿದೆ ನಮ್ಮ ಆಸೆ ಎಷ್ಟು ಪ್ರಮಾಣದ್ದಿದೆ, ಆ ಪ್ರಮಾಣದ ಮಟ್ಟಕ್ಕೆ ಏರುತ್ತಾ ಇಲ್ಲ. ನಮ್ಮ ಆಸೆ ಬಹಳ ಇದೆ. ನಮ್ಮ ನಿರೀಕ್ಷಣೆ, ಆಸೆ ಏನು ಇದೆ ಅದನ್ನು ಪೂರೈಸುತ್ತಾರೆ. ಅನೇಕ ಕಡೆಗಳಲ್ಲಿ ಹೇಳಿದ್ದೇವೆ, ಮಾಡಬೇಕಲ್ಲ ? ಆಗಬೇಕಾದುದು ಆಗಬೇಕಾದರೂ ಕೂಡ ಒಂದು ಮಾರ್ಗ ಇದೆ. ನಮ್ಮ ರಿಸೋರ್ಸ್‌ಸ್ ಏನಿದೆ ಅದಕ್ಕನುಗುಣವಾಗಿ ಪ್ಲಾನ್ ಪ್ರಕಾರ ಆಗಬೇಕೇ ವಿನಃ, ಎಲ್ಲವನ್ನೂ ಏಕಕಾಲದಲ್ಲಿ ಮಾಡುವುದಕ್ಕೆ ಆಗುವುದಿಲ್ಲ ಎನ್ನುವುದನ್ನು ತಾವೂ ಕೂಡ ಒಪ್ಪಿಕೊಳ್ಳುತ್ತೀರಿ. ಎಲ್ಲ ಕೆಲಸ ಕಾರ್ಯಗಳೂ ಕೂಡ ಸಂಪನ್ಮೂಲಗಳನ್ನು ಅವಲಂಬಿಸಿರುತ್ತವೆ. ಸಂಪನ್ಮೂಲಗಳಿದ್ದರೂ ಕೂಡ ಮಾಡದೇ ಹೋದರೆ, ತಪ್ಪನ್ನು ನೇರವಾಗಿ ನಮ್ಮ ತಲೆಯಮೇಲೆ ಹೊರಿಸುವುದಕ್ಕೆ ಸಾಧ್ಯವಾಗುತ್ತದೆ, ಸಂಪನ್ಮೂಲಗಳಿಲ್ಲದೆ ನಾವು ಎಷ್ಟು ಪರದಾಡಿದರೂ ಕೂಡ ಅದು ಸಂದಾಟವಾಗುತ್ತದೆಯೇ ವಿನಾ ಆದರಿಂದ ಏನೂ ಪ್ರಯೋಜನವಾಗುವುದಿಲ್ಲ, ಸಂಪನ್ಮೂಲಗಳನ್ನು ದುರುಪಯೋಗ ಮಾಡಿದರೂ ಕೂಡ ಮಹಾಪರಾಧವಾಗುತ್ತದೆ. ಇರತಕ್ಕ ಸಂಪನ್ಮೂಲಗಳನ್ನು ಉಪಯೋಗಿಸಿ ಬಹಳ ವಿಚಾರಶೀಲತೆಯಿಂದ ಎಷ್ಟು ಪ್ರಮಾಣದಲ್ಲಿ ಪ್ರಗತಿ ಮಾಡಬೇಕೋ, ಅಷ್ಟು ಪ್ರಮಾಣದಲ್ಲಿ ಮಾಡಬೇಕೇ ವಿನಾ ನಮ್ಮ ಶಕ್ತಿ ಮೀರಿ ಮಾಡುವುದಕ್ಕೆ ಹೋದರೆ ಅವರಿಂದ ನಮಗೆ ಬೇಗೆ ಕ್ಲಾಷ್ ಆಗುತ್ತದೆ. ಅದನ್ನು ಮಾಡುವಾಗ, ಸಮರ್ಪಕವಾಗಿ ಎಲ್ಲಾ ಕಡೆಗಳಲ್ಲಿಯೂ ಪ್ರಯೋಜನವಾಗುವ ರೀತಿಯಲ್ಲಿ ಮಾಡಬೇಕು ಎನ್ನತಕ್ಕ ನೀತಿ ಏನಿದೆ ಅದನ್ನು ಒಪ್ಪಿಕೊಳ್ಳುತ್ತೇನೆ. ಈಗ ಎರಡು ವರ್ಷದಿಂದ ಏನಾಗಿದೆ ? ಅನೇಕ ದುರ್ಘಟನೆಗಳು ದೇಶದಲ್ಲಿ ಒದಗಿ ಬಂದಿವೆ. ಒಂದು ಕಡೆ ನಾವು ಪ್ರಾರಂಭ ಮಾಡುವಾಗಲೇ, ಮಾನ್ಯ ಸದಸ್ಯರಿಗೆ ಗೊತ್ತಿದೆಯಷ್ಟು, ಓವರ್‌ಡ್ರಾಫ್ಟ್ ಹೆಚ್ಚಿನ ಪ್ರಮಾಣದಲ್ಲಿ ಇತ್ತು, ಇದರ ಜೊತೆಗೆ ದುರ್ದೈವದಿಂದ ಪ್ರಕೃತಿ ವಿಕೋಪದಿಂದ ಸುಮಾರು ಒಂದು ಕೋಟಿ ಪ್ರಜಾಸಂಖ್ಯೆ ಇರುವ ಭಾಗದಲ್ಲಿ ದುರ್ದಮ್ಯವಾದಂಥ ಪರಿಸ್ಥಿತಿ ಬಂದು ಒದಗಿತು ಕ್ಷಾಮ ಪರಿಸ್ಥಿತಿ, ಬರಗಾಲ ಪರಿಸ್ಥಿತಿ, ದುಷ್ಕಾಲ ಪರಿಸ್ಥಿತಿ ಬಂದಿತು. ಈ ಪರಿಸ್ಥಿತಿಗೋಸ್ಕರ ನಮ್ಮಲ್ಲಿ ಇರತಕ್ಕಂಥ ಸಂಪನ್ಮೂಲಗಳೆಲ್ಲವನ್ನೂ ಮುಡುಪಾಗಿ ಇಡಬೇಕಾಗಿ ಬಂತು. ಮಾನ್ಯ ಸದಸ್ಯರು, ಅವರವರ ಕ್ಷೇತ್ರಗಳಲ್ಲಿ ಏನೂ ಆಗಿಲ್ಲ ಎಂದು ಹೇಳುತ್ತಾರೆ ಅದರಲ್ಲೂ ಸತ್ಯ ಇದೆ. ಅಸತ್ಯ ಇದೆ ಎಂದು ಹೇಳಬೇಕಾಗಿಲ್ಲ. ನಮ್ಮಲ್ಲಿ ಇರತಕ್ಕ ಸಂಪತ್ತು ಒಂದು ಕಡೆ. ದೇಶದಲ್ಲಿ ಜನಗಳ ಸಂರಕ್ಷಣೆ ಮಾಡಬೇಕಾದ ಪರಿಸ್ಥಿತಿ ಬಂದಾಗ, ಅದಕ್ಕೆ ನಾವು ಎಲ್ಲವನ್ನೂ ಬದಿಗಿಟ್ಟು ಮಾಡಬೇಕಾಗಿ ಬರುತ್ತದೆ, ಅದನ್ನು ನ್ಯಾಯ ಎಂದು ಅವರೂ ಒಪ್ಪಿಕೊಳ್ಳುತ್ತಾರೆ, ಆದುದರಿಂದ ಈ ದುಷ್ಕಾಲ ಪರಿಸ್ಥಿತಿ ಜೊತೆಗೆ ಹಿಂದಿನ ಓವರ್‌ಡ್ರಾಫ್ಟ್

(ಶ್ರೀ ಹೆಚ್. ಎಂ. ಚನ್ನಬಸಪ್ಪ)

ತೀರಿಸತಕ್ಕದ್ದು, ಇದರ ಜೊತೆಗೆ ಆಡಳಿತವನ್ನು ನಡೆಸತಕ್ಕ ನೌಕರರುಗಳು ಏನಿದ್ದಾರೆ ಅವರುಗಳಿಗೆ ಸುಮಾರು ೨—೩ ಸಾರಿ ತುಟ್ಟಿಭತ್ಯವನ್ನು ಪರಿಸ್ಥಿತಿಗನುಗುಣವಾಗಿ ಹೆಚ್ಚು ಮಾಡಿದ್ದರಿಂದ ಸುಮಾರು ೨೦—೨೪ ಕೋಟಿ ರೂಪಾಯಿಯವರೆಗೆ ಖರ್ಚಾಗಿದ್ದೂ ಒಂದು ಕಾರಣ. ಅದಕ್ಕೆ ಇದೊಂದೇ ಕಾರಣ ಎಂದು ಹೇಳುವುದಿಲ್ಲ. ಈ ಎಲ್ಲಾ ಕಾರಣಗಳಿಂದ ನಮ್ಮ ಹಣಕಾಸಿನ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಬಿಕ್ಕಟ್ಟಿಗೆ ಬಂದುದರಿಂದ ಹಳ್ಳಿಗಾಡಿನಲ್ಲಿ ಯಾವ ಯಾವ ಕೆಲಸ ನಡೆಯಬೇಕಾಗಿತ್ತು ಅಂದರೆ, ಕೆರೆಕಟ್ಟೆಗಳ ನಿರ್ಮಾಣವಾಗಲಿ, ರಿಪೇರಿ ಕೆಲಸವಾಗಲೀ, ರಸ್ತೆಗಳ ಕೆಲಸವಾಗಲೀ ಅವೆಲ್ಲಕ್ಕೂ ಸ್ವಲ್ಪ ಖೋತಾ ಮಾಡಬೇಕಾಗಿ ಬಂತು. ಆದುದರಿಂದ ಸದಸ್ಯರನೇಕರಿಗೆ ಒಂದೆರಡು ವರ್ಷಗಳಲ್ಲಿ ನಾವು ನಿರೀಕ್ಷಿಸಿದ ಪ್ರಮಾಣದಲ್ಲಿ ಕೆಲಸ ಆಗಲಿಲ್ಲವಲ್ಲ ಎನ್ನುವ ಕುತೂಹಲ, ಅಸಂತುಷ್ಟಿ ಈ ಕಡೆ ಇರುವ ಸದಸ್ಯರಿಗೂ ಆ ಕಡೆ ಇರುವ ಸದಸ್ಯರಿಗೂ ಆ ಕಡೆ ಇರುವ ಸದಸ್ಯರಿಗೂ ಆಗಿರುವುದು ಸ್ವಾಭಾವಿಕವಾಗಿದೆ, ವಾಸ್ತವಾಂಶಗಳನ್ನು ಮನಸಂಗಂಡು ಮುಂದೆ ಏನು ಮಾಡಬೇಕು ಎಂದು ನಾವೂ ನೀವೂ ಕೂಡ ಯೋಚನೆ ಮಾಡತಕ್ಕಂಥ ವಿಚಾರವಾಗಿದೆ. ಮತ್ತು ಬೆಳವಣಿಗೆಯಾಗತಕ್ಕ ರಾಜ್ಯದಲ್ಲಿ ಅದರಲ್ಲೂ ಆಸೆ ಆಕಾಂಕ್ಷೆಗಳನ್ನು ಹಾರಿದುಂಬಿಸಿರತಕ್ಕ ರಾಜ್ಯದಲ್ಲಿ ಅಸಂತುಷ್ಟಿ ಆಗಿಂದಾಗ್ಗೆ, ಆಗಿಂದಾಗ್ಗೆ ಬರತಕ್ಕದ್ದು ಸ್ವಾಭಾವಿಕ, ಅದು ಬಂತು ಎಂದು ಬೇಜಾರ್ಯ ಪಡಬೇಕಾಗಿಲ್ಲ. ಎಷ್ಟು ಬಂದರೂ ಕೂಡ ಕೆಲಸಗಳು ಆಗಬೇಕು ಎನ್ನುವ ಕಾತುರತೆಯನ್ನು ತೋರಿಸುತ್ತೇವೆ, ನಮ್ಮ ಪ್ರತಿನಿಧಿಗಳಿಗೂ ಕೂಡ ತಮ್ಮ ತಮ್ಮ ಪ್ರಾಂತ್ಯಗಳಲ್ಲಿ ಜನಗಳಿಗೆ ಹೆಚ್ಚು ಹೆಚ್ಚು ಅನುಕೂಲ ಮಾಡಬೇಕು ಎನ್ನುವ ಆಕಾಂಕ್ಷೆ ಹೊರ ಹೊಮ್ಮಿ ಬರುತ್ತದೆ. ಇದು ಶುಭ ಸೂಚಕವೇ ವಿನಾ ಅಸಂತುಷ್ಟಿ ಬರಬೇಕಾದುದು ಅನಗತ್ಯ. ಇಷ್ಟು ವಿಷಯ ತಮಗೆ ಪೀಠಿಕೆಯಲ್ಲಿ ತಿಳಿಸಿ, ಈಗ ತಾವು ಏನೇನು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ, ನಿನ್ನೆ ಮೊನ್ನೆ, ಅವುಗಳನ್ನು ಹೆಚ್ಚು ಮಾಡಿದ್ದೀರಿ ಎಂದು ತೋರುತ್ತಾ ಇದೆ. ಯಾವ ವಿಷಯಕ್ಕೆ ತಕ್ಷಣದಲ್ಲಿ ಮಾಹಿತಿ ಸಿಗುತ್ತದೆ ಅದನ್ನು ತರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಕಾರಣ ನಿನ್ನೆ ಸಂಜೆ ೭ ಗಂಟೆಗೆ ಚರ್ಚೆ ಮುಕ್ತಾಯವಾಗಿದೆ. ನೀವು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಸಾಧ್ಯವಾದಷ್ಟು ಮಾಹಿತಿ ತರಿಸಿಕೊಡುವುದಕ್ಕೆ ಪ್ರಯತ್ನ ಪಟ್ಟಿದ್ದೇನೆ. ಬಹುಶಃ ಅವರಲ್ಲಿ ಯಾವುದೂ ಬಿಟ್ಟು ಹೋಗಿಲ್ಲ ಎಂದು ನನ್ನಭಾವನೆ ಆಕಸ್ಮಾತ್ ಎಲ್ಲಿಯಾದರೂ ಕೈ ಬಿಟ್ಟು ಹೋಗಿದ್ದರೆ ಕೈ ಬಿಟ್ಟಿದ್ದಾರೆಂದು ಭಾವನೆ ಮಾಡಬಾರದು. ಬಳ್ಳಾರಿ ಡಿವಿಜನ್, ಕೆ.ಆರ್. ನಗರ, ಹಾಸನ ಚಾಮರಾಜ ನಗರ ಡಿವಿಜನ್ ರಿಪೇರಿಗಳಿಗಾಗಿ ಏನು ಕೊಟ್ಟಿದ್ದೀರಿ ಎಂದು ಮಾನ್ಯ ಸದಸ್ಯರೇ ಮೊದಲು ಕೇಳಿದಂಥ ಪ್ರಶ್ನೆಗಳಿಗೆ ಮಾಹಿತಿ ಕೊಡುತ್ತಿದ್ದೇನೆ. ಆ ಮಾಹಿತಿ ಈ ರೀತಿ ಇದೆ ಹೋದ ಆಗಸ್ಟಿನಿಂದ ಮಾರ್ಚಿಯವರೆಗೆ ಬಳ್ಳಾರಿ ಡಿವಿಜನ್‌ಗೆ ೫೧.೬೭ ಲಕ್ಷ, ಕೆ.ಆರ್. ನಗರದ ಡಿವಿಜನ್‌ಗೆ ೪೧ ಲಕ್ಷ, ಹಾಸನ ಡಿವಿಜನ್‌ಗೆ ೩೪.೩ ಲಕ್ಷ ಚಾಮರಾಜನಗರ ಡಿವಿಜನ್‌ಗೆ ೪ ಲಕ್ಷ, ಇಷ್ಟು ಲೆಟರ್ ಆಫ್ ಕ್ರೆಡಿಟ್ ಕೊಟ್ಟಿದ್ದೇವೆ. ಆದುದರಿಂದ ಇದರ ಮೇಲೆ ನಾನು ಏನೂ ವ್ಯಾಖ್ಯಾನ ಮಾಡಬೇಕಾದದ್ದು ಇಲ್ಲ, ಸ್ಪೀಕರ್‌ರವರ ಡಿವಿಜನ್‌ಗೇ ಆಗಲೀ, ಮುಖ್ಯಮಂತ್ರಿಗಳು ಇರತಕ್ಕ ಡಿವಿಜನ್‌ಗೇ ಆಗಲೀ ಹೆಚ್ಚು ತಾರತಮ್ಯವನ್ನು ತೋರಿಸಿಲ್ಲ ಎನ್ನತಕ್ಕಂಥದ್ದು ಗೊತ್ತಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಹಣಕಾಸು ಮಂತ್ರಿಯವರ ಡಿವಿಜನ್ನಿಗೆ ಜಾಸ್ತಿಯಾಯಿತು.

ಶ್ರೀ ಎಚ್. ಎಂ ಚನ್ನಬಸಪ್ಪ.—ಅದನ್ನು ಎಕ್ಸ್‌ಪ್ಲೇನ್ ಮಾಡಬೇಕು ಬಿಜಾಪುರದಲ್ಲಿ ೪—೫ ಕೋಟಿ ಖರ್ಚಾಗಿದೆ, ಒಂದೊಂದು ಸಬ್‌ಡಿವಿಜನ್‌ನಲ್ಲಿ ಒಂದುಕಾಲು ಕೋಟಿ ಖರ್ಚಾಗಿದೆಯೆಂದು ಮಾನ್ಯ ಸದಸ್ಯರು ಹೇಳಿದ್ದಾರೆ ಸರಿಯಾದ ಮಾಹಿತಿ ಇಲ್ಲದೇ ಇದ್ದುದರಿಂದ ಆ ರೀತಿ ಹೇಳಿರಬಹುದು ಆ ರೀತಿ ಊಹೆ ಮಾಡಿರಬಹುದು. ಒಟ್ಟಿನಲ್ಲಿ ಸರ್ಕಾರ ಏನು ಮಾಹಿತಿ ಇದೆ ಅದನ್ನು ಮಾತ್ರ ತೆಗೆದುಕೊಳ್ಳುತ್ತಾರೆ ನನಗೆ ಬಂದಿರುವ ಮಾಹಿತಿ ಪ್ರಕಾರ ೧೭೨ ಲಕ್ಷ ೭ ಸಬ್ ಡಿವಿಜನ್‌ಗಳಿಗೆ ಖರ್ಚಾಗಿದೆ. ಬಿಜಾಪುರ ಸಬ್ ಡಿವಿಜನ್‌ಗೆ ೫೫ ಲಕ್ಷ, ಇಂಡಿಗೆ ೩೦ ಲಕ್ಷ, ಸಿಂದಗಿಗೆ ೧೫ ಲಕ್ಷ, ಜಮಖಂಡಿಗೆ ೨೯ ಲಕ್ಷ ಬಾಗೇವಾಡಿಗೆ ೨೬ ಲಕ್ಷ, ಮತ್ತೆ ಸ್ಪೆಷಲ್ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ಸಬ್ ಡಿವಿಜನ್‌ಗೆ ೧೯ ಲಕ್ಷ ಚಿಲ್ಲರೆ, ಆದುದರಿಂದ ಮಾನ್ಯ ಸದಸ್ಯರಿಗೆ ಏನೂ ಮಾಹಿತಿಯನ್ನು ಒದಗಿಸಿದ್ದಾರೆ ಅದು ಸರಿಯಿಲ್ಲವೆಂದು ಹೇಳುತ್ತೇನೆ.

ಕಾಳಿ ನದಿ ವಿಷಯದಲ್ಲಿ ಇವತ್ತಿನವರೆಗೂ ಎಷ್ಟು ಖರ್ಚಾಗಿದೆ ? ಹಣ ಎಷ್ಟು ಇದೆ ಎನ್ನುವ ಬಗ್ಗೆ ಪ್ರಶ್ನೆ ಮಾಡಿದರು. ಕಾಳಿ ನದಿಗೆ, ಮಾರ್ಚಿ ೧೯೭೩ಕ್ಕೆ ನಾವು ಅಧಿಕಾರಕ್ಕೆ ಬಂದ ಕಾಲದಲ್ಲಿ ೩ ಕೋಟಿ ೩೨ ಲಕ್ಷ ಖರ್ಚಾಗಿತ್ತು. ಇವತ್ತಿನವರೆಗೂ ಅಂದರೆ ಮಾರ್ಚಿ ಕೊನೆಯವರೆಗೆ ಅದು ಬಿಟ್ಟು ೨೭ ಕೋಟಿ ೮ ಲಕ್ಷ ರೂಪಾಯಿಗಳು ಖರ್ಚಾಗಿದೆ. ಒಟ್ಟು ೩೯ ಕೋಟಿ ೪೦ ಲಕ್ಷ ರೂಪಾಯಿಗಳು ಖರ್ಚಾಗಿದೆ. ಹಣ ಇದೆಯೋ ಇಲ್ಲವೋ ಎನ್ನುವ ಬಗ್ಗೆ ಬಹಳ ಕಾತುರತೆಯನ್ನು ಮಾನ್ಯ ಸದಸ್ಯರುಗಳು ವ್ಯಕ್ತ ಪಡಿಸಿದರು,

೨೫ ಕೋಟಿ ರೂಪಾಯಿಗಳು ವರ್ಷಕ್ಕೆ ಆಗಬಹುದೆಂದು ಪ್ರೋಗ್ರಾಂ ಹಾಕಿ ಕೊಂಡಿದ್ದೇನೆ. ೨೫ ಕೋಟಿ ಪೈಕಿ ೪ ಕೋಟಿ ರಿಲೀಜ್ ಆಗಿದೆ. ೨೧ ಕೋಟಿ ಹೌಟ್ ಸೈಡದಿ ಪ್ಲಾನ್ ರಿಲೀಜ ಮಾಡಬೇಕೇ ಇನ್ ಸೈಡ್‌ದಿ ಪ್ಲಾನ್ ಮಾಡಬೇಕೇ ಎಂದು ಚರ್ಚೆ ನಡೆಯುತ್ತಿದೆ. ಬಹುತೇಕ ಕಾಳಿ ನದಿ ವಿಷಯದಲ್ಲಿ ಕೇಂದ್ರ ಸರ್ಕಾರ ನಾನು ತಿಳಿದ ಮಟ್ಟಿಗೆ ಅನಾದರಣೆಯನ್ನು ಮಾಡುವುದಿಲ್ಲ ಎಂದು ಸ್ಪಷ್ಟವಾಗಿದೆ. ಹಣ ಹೇಗೆ ಕೊಡಬೇಕು ಎನ್ನುವ ವಿಷಯದಲ್ಲಿ ಪ್ಲಾನಿಂಗ್ ಕಮೀಷನರ್‌ರವರ ಮತ್ತು ಫೈನಾನ್ಸ್ ಮಿನಿಸ್ಟರ ವರಲ್ಲಿ ವಾದ ವಿವಾದಗಳು ನಡೆಯುತ್ತಿರುವುದೇ ವಿನಹ, ಕೊಡುವ ವಿಷಯದಲ್ಲಿ ಯಾವ ಭಿನ್ನಾ ಭಿಪ್ರಾಯವೂ ಇಲ್ಲ. ಕಾಳಿ ನದಿಗೆ ಅವಶ್ಯಕವಾಗಿ ಹಣ ಸಿಗುತ್ತದೆ. ಈ ವಿಚಾರದಲ್ಲಿ ಅನುಮಾನ ಪಡ ಬೇಕಾದ ಕಾರಣವಿಲ್ಲ. ಮುಂದಿನ ವರ್ಕಿಂಗ್ ಸೀಜನ್ ಏನು ಇದೆ, ಅಕ್ಟೋಬರ್ ಅಲ್ಲಿಯವರೆಗೂ ಕೂಡ ಕೆಲಸ ಕಾರ್ಯಗಳು ಆಗುವುದಕ್ಕೆ ನಮಗೆ ಹಣದ ಕೊರತೆಯಿಲ್ಲ. ಅಷ್ಟರೊಳಗೆ ಎಲ್ಲಾ ವಿಷಯ ಗಳೂ ಇತ್ಯರ್ಥವಾಗಿ ಸಾಕಷ್ಟು ಹಣ ನಮಗೆ ದೊರಕುತ್ತದೆ. ಇದರಲ್ಲಿ ಸಂಶಯ ಪಡಬೇಕಾದದು ಇಲ್ಲ ವೆಂದು ನನ್ನ ಅಭಿಪ್ರಾಯ.

ಮತ್ತೆ ನಿನ್ನೆ ಮಾತನಾಡುವಾಗ ನಮ್ಮ ಮಾನ್ಯ ಬೆಳ್ಳಿಯಪ್ಪನವರಿಗೆ ಸಂಬಂಧಪಟ್ಟಿದ್ದರಲ್ಲಿ ಹೊಸ ಪಟ್ಟಣದ ಲಿಫ್ಟ್ ಇರಿಗೇಷನ್ ಸ್ಕೀಂ ಪ್ರಕಾರ ಇರತಕ್ಕ ಕೆಲಸಗಳಿಗೆ ಕಷ್ಟವಾಗುತ್ತದೆ. ೧೫ ಸಾವಿರ ಎಕರೆ ಸಬ್ ಮರ್ಷನ್ ಆಗುತ್ತದೆಂದು ಹೇಳಿದತು. ಇದು ಬಹುಶ ಅವರಿಗೆ ಯಾರೋ ತಪ್ಪು ಅಂಕಿ ಅಂಶಗಳನ್ನು ಕೊಟ್ಟಿರಬೇಕು. ಯಾವ ಯೋಜನೆಯನ್ನು ಮಾಡಬೇಕಾದರೂ, ತಜ್ಞರು ಲೆಕ್ಕಹಾಕಿದ ಎಲ್ಲೆಲ್ಲಿ ಎಷ್ಟೆಷ್ಟು ನೀರು ಉಳಿಯುತ್ತದೆಂದು ಲೆಕ್ಕಹಾಕಿರುತ್ತಾರೆ ಈಗಿರತಕ್ಕಂಥದ್ದಕ್ಕೆ ತೊಂದರೆ ಯನ್ನುಂಟು ಮಾಡಿ ಮಾಡತಕ್ಕಂಥ ಪ್ರಶ್ನೆ ಇಲ್ಲ. ಕಾರಣ ಈಗ ಇರುವುದನ್ನೇ ಕಾಪಾಡಿಕೊಂಡು ಹೋದರೆ ಸಾಕು. ಆದ್ದರಿಂದ ಹೆಚ್ಚು ನೀರು ಉಳಿತಾಯವಾದರೆ ಹೊಸ ಯೋಜನೆ ಮಾಡುವುದು. ಇದರಲ್ಲಿ ಕೇವಲ ೫ ಸಾವಿರ ಎಕರೆ ಮುಳುಗಡೆ ಆಗುತ್ತದೆ. ೨ ಸಾವಿರ ಎಕರೆಯನ್ನು ಸರ್ಕಾರದವರು ಕೊಟ್ಟು ಇನ್ನು ಎರಡು ಸಾವಿರ ಎಕರೆಯವರ ಪ್ರೈವೇಟ್ ಲ್ಯಾಂಡ್ ಎಂದು ಸಮಜಾಯಿಸಿ ಕೊಡುತ್ತೇನೆ.

ಇನ್ನು ಲೆಜಿಸ್ಲೇಚರ್ಸ್ ಹೋಂ ಬಗ್ಗೆ ಸ್ವಲ್ಪ ಮಟ್ಟಿಗೆ ಟೀಕೆಟಿಪ್ಪಣಿಗಳು ಆದವು. ಲೆಜಿಸ್ಲೇಚರ್ಸ್ ಹೋಂ ನಡೆಸತಕ್ಕಂಥ ವಿಚಾರದಲ್ಲಿ ಅದರ ಸಂಪೂರ್ಣ ಜವಾಬ್ದಾರಿ ನಮ್ಮ ಸ್ಪೀಕರ್‌ರವರಿಗೆ ಸೇರಿತ್ತು ಆದರೆ ಅದನ್ನು ಲೋಕೋಪಯೋಗಿ ಇಲಾಖೆ ಮಾಡಲಿ ಎಂದು ಹೌಸ್ ಕಮಿಟಿಯವರು ನಿಮ್ಮೆಲ್ಲರ ಅಭಿಪ್ರಾಯ ಪಡೆದು ನಮ್ಮ ಕೈಗೆ ಕೊಟ್ಟಿದ್ದಾರೆ. ಅದನ್ನು ಮಾಡುತ್ತಿದ್ದೇವೆ. ಲೆಜಿಸ್ಲೇಚರ್ಸ್ ಹೋಂ ಜೂರಿಸ್‌ಡಿಕ್ಷನ್ ಪಿ ಡಬ್ಲ್ಯು.ಡಿ ಗೆ ಹೋಗಬೇಕು ಎಂದು ನಮ್ಮ ಇಚ್ಛೆಯಿಲ್ಲ. ಇದರಲ್ಲಿ ಏನು ಆಗಿದೆ ಎನ್ನುವುದರಲ್ಲಿ ಒಂದು ವಿಷಯ ತಾವು ಎಲ್ಲಾ ಒಪ್ಪಬೇಕು. ಇವತ್ತು ನಮ್ಮ ಲೆಜಿಸ್ಲೇಚರ್ಸ್‌ಗಳ ಸ್ಥಾನ ಮಾನಗಳು ಏನು ಇವೆ, ಅದಕ್ಕೆ ತಕ್ಕಂತೆ ಊಟದ ವ್ಯವಸ್ಥೆ, ಫೋನಿನ ವ್ಯವಸ್ಥೆ ಇನ್ನು ಮುಂತಾದ ವ್ಯವಸ್ಥೆಗಳನ್ನು ಒದಗಿಸಿಕೊಡಬೇಕಾದಂಥ ಕರ್ತವ್ಯವಿದೆ. ಕಡಿಮೆ ಆಯಿತು ಎನ್ನುವುದಾದರೆ ಆ ವಿಷಯ ಸದಸ್ಯರಿಗೆ ಬಿಟ್ಟಿದ್ದು. ಹೇಗೆ ಮಾಡಬೇಕು ಎಂದು ತಾವು ಎಲ್ಲಾ ಸೇರಿ ತೀರ್ಮಾನ ಮಾಡಿದರೆ ಹಾಗೆಯೇ ಮಾಡೋಣ, ಅದರಲ್ಲಿ ಲೋಪದೋಷಗಳು ಏನಾದರೂ ಇದ್ದರೆ ಅವನ್ನು ಸರಿಪಡಿಸಿ ಎಂದರೆ ಸರಿಪ ಡಿಸುತ್ತೇವೆ. ನನ್ನ ಸ್ವಂತ ಅಭಿಪ್ರಾಯ ಮಾತ್ರ ಏನೂ ಇಲ್ಲ. ಒಟ್ಟಿನಲ್ಲಿ ಸಕಾಲಕ್ಕೆ ಒಳ್ಳೆಯ ಭೋಜನ, ಇರಲಿಕ್ಕೆ ಒಳ್ಳೆಯ ಮನೆ, ನಿಮಗೆ ಓದಲಿಕ್ಕೆ ಒಳ್ಳೆಯ ವ್ಯವಸ್ಥೆಗಳನ್ನು ಮಾಡಿಕೊಡಬೇಕು ಎನ್ನತಕ್ಕಂಥದ್ದು ಕನಿಷ್ಠ ಪ್ರಮಾಣದ ಅನುಕೂಲತೆಗಳನ್ನು ಒದಗಿಸಿಕೊಡಬೇಕು ಎಂದು ಹೇಳತಕ್ಕಂಥದ್ದು ನನ್ನ ಅಭಿ ಪ್ರಾಯ. ಮಾನ್ಯ ಸದಸ್ಯರು ಆಗಲೀ ಮೇಲ್ಮನೆಯಲ್ಲಿರುವವರಾಗಲೀ, ಈ ದಿವಸ ಯಾವ ರೀತಿ ಇರ ಬೇಕೆಂದು ಅಭಿಪ್ರಾಯವನ್ನು ಸೂಚನೆ ಮಾಡುತ್ತಾರೋ ಅದಕ್ಕೆ ವಿರುದ್ಧವಾಗಿ ಹೋಗುವ ಪ್ರಶ್ನೆಯಿಲ್ಲ. ಅದು ತಮಗೆ ಬಿಟ್ಟಿದ್ದು. ಯಾವ ರೀತಿಯಲ್ಲಿ ಇರಬೇಕೆಂಬುದನ್ನು ತಾವು ತೀರ್ಮಾನ ಮಾಡಬೇಕು.

ಇನ್ನು ಮಾನ್ಯ ಬಂಗಾರಪ್ಪನವರು ಎಸ್.ಸಿ. ಮತ್ತು ಎಸ್.ಟಿ. ಹಾಸ್ಟಲಗಳ ಬಗ್ಗೆ ಪ್ರಸ್ತಾಪ ಮಾಡಿದರು. ಕಬ್ಬಿಣ ಸ್ಯಾಂಕ್ಷನ್ ಆದದ್ದು, ಏಜೆನ್ಸಿ ಫಿಕ್ಸ್ ಆದದ್ದು, ಮತ್ತು ಡಿಸೈನ್ಸ್ ಅಪ್ರೂವ್ ಆದದ್ದು, ಹಾಗೂ ಕಬ್ಬಿಣವನ್ನು ಏತಕ್ಕೆ ಕೊಂಡುಕೊಂಡರು ಎನ್ನುವ ಬಗೆ ಪ್ರಸ್ತಾಪ ಮಾಡಿ ಮಾಹಿತಿ ಯನ್ನು ಹೇಳಿದರು. ಅದರಲ್ಲಿ ಸ್ವಲ್ಪ ತಪ್ಪು ಅಂಕಿಅಂಶಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಿದ್ದಾರೆಂದು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಎಸ್ಟಿಮೇಟ್ ಸ್ಯಾಂಕ್ಷನ್ ಆದದ್ದು ಜೂನ್ ೭೩ ರಲ್ಲಿ ಅಲ್ಲ ೧೨-೨-೭೩ ರಲ್ಲಿ ಎಸ್ಟಿಮೇಟ್ ಸ್ಯಾಂಕ್ಷನ್ ಆಯಿತು. ಏಜೆನ್ಸಿ ಫಿಕ್ಸ್ ಮಾಡಿದ್ದು ಜುಲೈ ೭೩ ರಲ್ಲಿ ಅಲ್ಲ ಅದು ಏಪ್ರಿಲ್ ೭೩ರಲ್ಲಿ, ಮತ್ತೆ ಟೆಂಡರ್‌ನ್ನು ಪ್ರಿಮರೀಸ್ ಹಾಸ್ಟಲ್ ಬಿಲ್ಡಿಂಗ್‌ಗೋಸ್ಕರ ಕಾಲ್‌ಫಾರ್ ಮಾಡಿದ್ದು ಏಪ್ರಿಲ್ ೭೩ರಲ್ಲಿ ಇನ್ನೊಂದು ೧೧ ಜುಲೈ ೭೩ ರಲ್ಲಿ, ಡಿಸೈನ್ ಅಪ್ರೂವಲ್ ಆಗಿದ್ದು ೨೦-೯-೭೩ ರಲ್ಲಿ, ಇನ್ನೊಂದು ೨೦-೧೧-೭೩ರಲ್ಲಿ. ಇಂಡೆಂಟ್ ಇಶ್ಯೂಡ್ ಬೈ ದಿ ಅಸಿಸ್ಟೆಂಟ್ ಇಂಜಿನಿಯರ್ ೩೦-೩-೭೩ರಲ್ಲಿ. ಮತ್ತೆ ಅಕನಾಲೆಡ್ಜ್‌ಮೆಂಟ್ ಏತಕ್ಕೆ ಮಾಡಬೇಕಾಗಿತ್ತು ಎಂದು ಕೇಳಿದರು. ಅದಕ್ಕೆ ಒಂದು ಗೌವರ್ನಮೆಂಟ್ ಆಜ್ಞೆ ಇದೆ. Government while according administra-

(ಶ್ರೀ ಹೆಚ್. ಎಂ. ಚೆನ್ನಬಸಪ್ಪ)

tive approval to the estimate directed that the works must be taken up immediately so that the available amount can be spent on materials without allowing the amount to lapse ಇದು ಗೌವರ್ನಮೆಂಟ್ ಆಫ್ ಇಂಡಿಯಾದಿಂದ ಬರತಕ್ಕ ಗ್ರಾಂಟಾದುದರಿಂದ ಆ ವರ್ಷವೇ ಖರ್ಚು ಮಾಡಬೇಕಾಯಿತು. ಏಕಾ ಏಕಿ ಖರ್ಚು ಮಾಡುವುದಕ್ಕೆ ಆಗುವುದಿಲ್ಲ. ಅವಕ್ಕೋಸ್ಕರ ಪರ್ಚೇಜ್ ಆಫ್ ಮೆಟೀರಿಯಲ್ಸ್ ಮಾಡಿ ತತ್‌ಕ್ಷಣ ಬುಕ್ ಮಾಡಿ ಎನ್ನತಕ್ಕಂಥದ್ದು ಗೌವರ್ನಮೆಂಟ್ ಆರ್ಡರ್‌ನಲ್ಲಿ ಸೇರಿರುವುದರಿಂದ ಆ ಆಜ್ಞೆ ಪ್ರಕಾರ ಅವರು ಮಾಡಿದ್ದಾರೆ.

ಆದುದರಿಂದ ಈ ಇಂಡೆಂಟ್‌ನ್ನು ೩೦–೭–೧೯೬೩ರಲ್ಲಿ ಮಾಡಿದ್ದು ನಿಜ, ಆ ರೀತಿ ಮಾಡಿರ ತಕ್ಕಂಥಾದ್ದು ಸರ್ಕಾರೀ ಆಜ್ಞೆ ಪ್ರಕಾರ. ಮತ್ತು ಅಸಿಸ್ಟೆಂಟ್ ಇಂಜನೀಯರ್ ಇದನ್ನು ಪುನ ಟ್ರಾನ್ಸ್‌ಫರ್ ಎಂಟ್ರಿ ಆರ್ಡರ್ ಮಾಡಿದ್ದು ಏತಕ್ಕೆ ಎಂದು ಕೇಳಿದರು. ಇದಕ್ಕೆ ಕಾರಣ ಚೀಫ್ ಇಂಜಿ ನೀಯರ್ ಇದನ್ನು ಇನ್‌ಸ್ಪೆಕ್ಟ್ ಮಾಡಿಬಿಟ್ಟು ಇದಕ್ಕೆ ಮೈಲ್ಡ್ ಸ್ಟೀಲ್ ಬೇಡ ಟಾಯ್ ಸ್ಟೀಲ್ ಹಾಕ ಬೇಕು ಎಂದು ಸಲಹೆ ಮಾಡಿದ್ದರ ಮೇಲೆ ಈ ಟ್ರಾನ್ಸ್ ಫರ್ ಎಂಟ್ರಿ ಆರ್ಡರ್ ಆಗಿದೆ. ಅಕೌಂಟೆಂಟ್ ಜನರಲ್‌ರವರು ಇದಕ್ಕೆ ಟ್ರಾನ್ಸ್‌ಫರ್ ಎಂಟ್ರಿ ಆರ್ಡರ್ ಆಗುವುದಕ್ಕೆ ಮುಂಚೆ ಆಬ್ಜೆಕ್ಷನ್ ಹಾಕಿದ್ದರು. What is the procedure followed to put up an indent ಎಂದು ಕೇಳಿದರು. ಆ ಪ್ರೊಸೀಜರ್ ಎಲ್ಲವೂ ಪಿ.ಡಬ್ಲ್ಯೂ.ಡಿ ಕೋಡ್ ರೂಲ್ಸ್‌ನಲ್ಲಿ ಪ್ಯಾರಾಗ್ರಾಫ್ ೩೦೯ ರಿಂದ ೩೧೧ ರವರೆಗೂ ಇದೆ ಆ ಪ್ರೊಸೀಜರ್ ಪ್ರಕಾರ ಆ ಕೆಲಸ ನಡೆದಿದೆ.

10–30 A.M.

ಇನ್ನು ೯೪ ಟನ್‌ಆಂಗಲ ಐರನ್ ಮತ್ತು ಬಿ.ಪಿ. ಷೀಟ್ಸ್‌ನ್ನು ಕಂಟ್ರಾಕ್ಟರಿಗೆ ಏತಕ್ಕೆ ಕೊಡಬೇಕಾ ಗಿತ್ತು ಎಂದು ಕೇಳಿದರು. ಅದು ಪಿ.ಡಬ್ಲ್ಯೂ.ಡಿ. ರೂಲ್ಸ್‌ನಲ್ಲಿ ಇದೆ. ಬಿ.ಪಿ. ಷೀಟ್ಸ್ ಎಂದರೆ ಬ್ಲಾಕ್ ಪ್ಲೇನ್ ಷೀಟ್ಸ್ ಅದನ್ನು ತಾರಸಿ ಹಾಕುವಾಗ ಸೆಂಟರಿಂಗ್‌ಗೆ ಉಪಯೋಗಿಸುತ್ತಾರೆ. ಮತ್ತು ಆಂಗಲ್ ಐರನ್ ಕೂಡ ಅದಕ್ಕೆ ಉಪಯೋಗಿಸುತ್ತಾರೆ ತಾರಸಿ ಹಾಕುವಾಗ ಆ ಕಂಟ್ರಾಕ್ಟರಿಗೆ ಕೊಡ ಬೇಕು ಎಂದು ಪಿ.ಡಬ್ಲ್ಯೂ.ಡಿ ರೂಲ್ಸ್‌ನಲ್ಲೇ ಇದೆ. ಆ ರೂಲ್ಸ್ ಪ್ರಕಾರ ಯಾವ ರೇಟ್ ಪ್ರಕಾರ ಕೊಡಬೇಕೋ ಆ ರೇಟಿನಂತೆ ಕೊಟ್ಟಿದ್ದಾರೆ, ಇಷ್ಟು ವಿಷಯ ತಮಗೆ ತಿಳಿಸಿದರೆ ಸಮರ್ಪಕವಾದ ರೀತಿ ಯಲ್ಲಿ ಉತ್ತರ ಕೊಟ್ಟಿದ್ದೇನೆಂದು ತಿಳಿದುಕೊಂಡಿದ್ದೇನೆ.

ಇನ್ನು ಮಾನ್ಯ ನಂಜೇಗೌಡರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಷೆಡ್ಯೂಲ್ ಆಫ್ ರೇಟ್ಸ್ ವಿಚಾರವಾಗಿ ಹೇಳಿದ್ದಾರೆ ಸ್ಟ್ಯಾಂಡರ್ಡ್ ರೇಟ್ ವಿಚಾರವಾಗಿ ಹೇಳಿದ್ದಾರೆ. ಆ ಸಲಹೆಗಳೆಲ್ಲವೂ ಪರಿಶೀಲ ನೆಗೆ ಯೋಗ್ಯವಾದಂಥವುಗಳು, ಅದನ್ನು ನಮ್ಮ ಇಂಜನಿಯರ್‌ಗಳಿಗೆ ಕೊಟ್ಟು ಪರಿಶೀಲನೆ ಮಾಡಿಸುತ್ತೇನೆ.

ಇನ್ನು ನಲ್ಲೂರಿನ ಅಮಾನಿಕೆರೆ ಬಗ್ಗೆ ಅವಾಗಲೇ ಉತ್ತರ ಕೊಟ್ಟಿದ್ದೇನೆ.

ಇನ್ನು ರಸ್ತೆಗಳ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ ಆ ರಸ್ತೆಗಳು ಬಹಳ ಕನಿಷ್ಟ ಸ್ಥಿತಿಯಲ್ಲಿ ಬಹಳ ಕುಳಿಕುಳಿ ಬಿದ್ದಿವೆ ಎಂದು. ಅವೆಲ್ಲವೂ ರಿಪೇರಿ ಆಗಬೇಕಾದ್ದು ಅತ್ಯಾವಶ್ಯಕ ಎಂದು ಮಾನ್ಯ ಸದಸ್ಯರು ಒತ್ತಾಯಪಡಿಸಿದ್ದಾರೆ. ಅದನ್ನು ನಾನು ಅಕ್ಷರಶಃ ಒಪ್ಪಿಕೊಳ್ಳುತ್ತೇನೆ. ಈಚೆಗೆ ಏನಾಗಿದೆ ಎಂದರೆ ನಾವು ಎಷ್ಟು ರಸ್ತೆಗಳನ್ನು ತೆಗೆದುಕೊಳ್ಳಬೇಕಾಗಿತ್ತೋ ಅದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಪಿ.ಡಬ್ಲ್ಯೂ.ಡಿ.ಗೆ ಬಂದಿದೆ. ೧೯೬೭–೬೨ರಲ್ಲಿ ೪,೫೦೦ ಕಿಲೋಮೀಟರ್ ಇತ್ತು ೧೯೬೩–೬೪ರಲ್ಲಿ ೫೧೦೦೦ ಕಿಲೋಮೀಟರ್ ಆಯಿತು ಇನ್ನು ಇದರ ಜೊತೆಗೆ ವಾಹನ ಓಡಾಟ ತೆಗೆದು ಕೊಂಡರೆ ಒಂದಕ್ಕೆ ಎರಡರಷ್ಟಾಗಿವೆ.

ಹಿಂದಿನ ವರ್ಷ ಬ್ಲಾಕ್ ಟಾಪ್ ಮಾಡತಕ್ಕಂಥಾ ಕಾಲದಲ್ಲಿ ಜನರಿಗೆ ಅಲ್ಪ ದುಡ್ಡಿನಲ್ಲಿ ಹೆಚ್ಚಿನ ರಸ್ತೆ ಗಳನ್ನು ಮಾಡಿಕೊಡಬೇಕೆಂದು ಅದರ ಫೌಂಡೇಷನ್ ಹಾಕಿದವನೇ ನಾನು. ಈಗ ಮತ್ತೆ ಅದೇ ರೀತಿ ರಸ್ತೆಗಳನ್ನು ಮಾಡುವುದಕ್ಕೆ ತೆಗೆದುಕೊಂಡರೆ ಅದು ಹೆಚ್ಚು ಕಾಲ ಬರುವುದಿಲ್ಲ ಸ್ವಲ್ಪ ದಿವಸವಾದ ಮೇಲೆ ಆ ರಸ್ತೆಗಳಲ್ಲಿ ಕುಳಿಕುಳಿ ಬಿದ್ದುಹೋಗಿಬಿಡುತ್ತೆ ಆದುದರಿಂದ ಅದು ಮಾಡಿದರೆ ಪ್ರಯೋಜನವಿಲ್ಲವೆಂದು ಅದನ್ನು ನಿಲ್ಲಿಸಿಬಿಟ್ಟಿದ್ದೇನೆ. ಈಗ ಹಿಂದೆ ಮಾಡಿರುವ ರಸ್ತೆಗಳಿಗೆಬೇಸ್ ಸರಿಯಾಗಿ ಇಲ್ಲದೇ ಇರುವುದರಿಂದ ಏನೂ ಪ್ರಯೋಜನವಾಗದೇ ಮುಂದೆ ಆ ರೀತಿ ಮಾಡಬಾರದು ಎಂದು ನಿಲ್ಲಿಸಿಬಿಟ್ಟಿದ್ದೇನೆ. ಈಗ ಅವೆಲ್ಲಕ್ಕೂ ಅಸ್ಫಾಲ್‌ಟಿಂಗ್ ಬ್ಲಾಕ್‌ಟಾಪ್ ಮಾಡಬೇಕಾದರೆ ಒಂದಕ್ಕೆರಡರಷ್ಟು ಹ.೩ ಖರ್ಚಾಗುತ್ತದೆ.

ಮೊದಲು ಜಲ್ಲಿ ಹಾಕಿ ಮೆಟಲ್ ಮಾಡಬೇಕು. ಆಮೇಲೆ ಬ್ಲಾಕ್‌ಟಾಪ್ ಮಾಡಿ ನಂತರ ಅದರ ಮೇಲೆ ಟಾರ್ ಹಾಕಬೇಕೇ ವಿನಹಃ ಸುಮ್ಮನೆ ಬ್ಲಾಕ್ ಟಾಪ್ ಹಾಕಿ ಟಾರ್ ಬಳಿದರೆ ಏನೂ ಪ್ರಯೋಜನವಾಗುವುದಿಲ್ಲ. ಈ ರೀತಿ ಸರಿಯಾದ ರೀತಿಯಲ್ಲಿ ಟಾರ್ ಹಾಕಬೇಕಾದರೆ ದುಡ್ಡು ಹೆಚ್ಚು ಖರ್ಚಾಗುವುದರಿಂದ ಆ ಕೆಲಸವನ್ನು ಈಗಿನ ಸಂದರ್ಭದಲ್ಲಿ ನಿಲ್ಲಿಸುವುದಕ್ಕೆ ಇದೂ ಒಂದು ಕಾರಣ.

ಇನ್ನು ಎರಡನೆಯದಾಗಿ ನಮಗೆ ಬಡ್ಜೆಟ್ಟಿನಲ್ಲಿ ಹಣದ ರಿಸೋರ್ಸಸ್ ಬಹಳ ಕಡಿಮೆ ಏತಕ್ಕೆಂದರೆ ಹೆಚ್ಚಿಗೆ ಹಣವನ್ನು ಇರಿಗೇಷನ್ ಪ್ರೊವೈಡ್ ಮಾಡಿದ್ದಾರೆ. ನಮ್ಮ ಇಲಾಖೆಗೆ ಬಡ್ಜೆಟ್ಟಿನಲ್ಲಿ ಕೊಟ್ಟಿರುವ ಹಣ ಕಡಿಮೆಯಾಗಿರುವುದರಿಂದ ಸ್ವಲ್ಪ ಕೆಲಸವನ್ನು ಕಟ್‌ಮಾಡತಕ್ಕದ್ದಾಗಿದೆ. ಆದರಿಂದಾಗಿ ಈ ರಸ್ತೆಗಳಿಗೆ ಹೆಚ್ಚು ಖರ್ಚು ಮಾಡುವುದಕ್ಕೆ ತೊಂದರೆ ಬಂದಿವೆ. ಆದುದರಿಂದ ಈ ಬಗ್ಗೆ ನಾವು ೨-೩ ಯೋಜನೆಗಳನ್ನು ಇಟ್ಟುಕೊಂಡಿದ್ದೇವೆ. ಇದರ ಜೊತೆಗೆ ತಾವೆಲ್ಲರೂ ಕೂಡ ಇದರ ಬಗ್ಗೆ ಏನಾದರೂ ರಚನಾತ್ಮಕ ಸಲಹೆಗಳನ್ನು ಕೊಟ್ಟರೆ ಅದನ್ನೂ ಸಹ ಅವಶ್ಯಕವಾಗಿ ಪರಿಶೀಲಿಸಬಹುದು ಹಾಗಿಲ್ಲದೇ ಹೋದರೆ ಈರಸ್ತೆಕಾಮಗಾರಿಗೆ ಸರ್ಕಾರ ಆಗಿಂದಾಗ್ಗೆ ಗ್ರಾಂಟ್‌ಗಳನ್ನು ಕೊಡುತ್ತಾ ಬಂದರೆ ಈಕೆಲಸಗಳನ್ನು ಮಾಡಬೇಕಾದರೆ ಇನ್ನು ೧೦ ವರ್ಷವಾದರೂ ಕಾಲ ಬೇಕಾಗುತ್ತದೆ. ನಾವು ರಸ್ತೆಗಳಿಗೆ ಅನೇಕ ಲಕ್ಷಾಂತರ ರೂಪಾಯಿ, ಅಥವಾ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ ಮೇಲೆ ಅದನ್ನು ಒಂದು ಸ್ಟ್ಯಾಂಡರ್ಡ್‌ನಲ್ಲಿ ಮೈಟೇನ್ ಮಾಡಬೇಕಾಗಿದ್ದರೆ ಅದಕ್ಕೆ ಸತತವಾಗಿ ಹಣ ಇರಲೇಬೇಕು. ಈ ಬಗ್ಗೆ ಒಂದು ಕಮಿಟಿಯನ್ನೂ ಕೂಡ ಮಾಡಿದ್ದೇವೆ ಆದರೂ ಸಹ ತಮ್ಮ ಸಲಹೆಯನ್ನು ಕೊಟ್ಟಿದ್ದಾರೆ. ಯಾವ ಯಾವ ರಸ್ತೆಗಳನ್ನೂ ಮಾಡುತ್ತಾರೋ ಅದರೆ ಒಂದು ಸ್ಟ್ಯಾಂಡರ್ಡ್‌ನ್ನು ಮೆಂಟೇನ್ ಮಾಡಬೇಕಾದರೆ ಎಷ್ಟು ಹಣ ಬೇಕು ಅಷ್ಟನ್ನು ಒದಗಿಸಿಯೇ ತೀರಬೇಕು ಗ್ರ್ಯಾಂಟ್‌ಗಳನ್ನು ಅದಕ್ಕೆ ಒಂದು ವರ್ಷ ಕೊಡಬಹುದು, ಎರಡು ವರ್ಷ ಕೊಡಬಹುದು ಹಾಗೆ ಕೊಟ್ಟರೂ ಕೂಡ ಅವೆಲ್ಲವೂ ಅವರ ಸಂಬಳಸಾರಿಗೆಗೆ ಆಗಿಬಿಡುತ್ತದೆಯೇ ವಿನಾ ಏನೂ ಪ್ರಯೋಜನವಾಗುವುದಿಲ್ಲ ಅದುದರಿಂದ ಮಾಡಿದಂಥ ರಸ್ತೆಗಳನ್ನು ಒಂದು ಸ್ಟ್ಯಾಂಡರ್ಡ್ ಆಗಿ ಮೆಂಟೈನ್ ಮಾಡಬೇಕಾದರೆ ಇದಕ್ಕೆ ಒಂದು ರೋಲಿಂಗ್ ಫಂಡ್ ಮಾಡಬೇಕು ಎನ್ನುವ ಯೋಜನೆ ಇದೆ. ಇದಕ್ಕೆ ಹಣ ಯಾರು ಕೊಡಬೇಕು, ಹೇಗೆ ತೆಗೆದುಕೊಳ್ಳಬೇಕು, ಅನ್ನುವ ಯೋಜನೆ ಇದೆ. ಯಾವುದಾದರೂ ಕಾಮಗಾರಿ ಕೆಲಸ ತೆಗೆದುಕೊಂಡ ಮೇಲೆ ಅದನ್ನು ಪ್ರತಿ ವರ್ಷವೂ ತೆಗೆದುಕೊಳ್ಳುವಂತೆ ಇರಬಾರದು ಆ ರಸ್ತೆಗಳಿಗೆ ಲಕ್ಷಾಂತರ ರೂಪಾಯಿ ಕೋಟ್ಯಾಂತರ ರೂಪಾಯಿಗಳು ಖರ್ಚು ಮಾಡಿದ ಮೇಲೆ ಇನ್ನು ೧೦ ವರ್ಷ ೨೦ ವರ್ಷ ಆದರೆ ಹಿಂದಿನದಕ್ಕಿಂತ ಉತ್ತಮವಾದ ರಸ್ತೆ ಆಗಬೇಕೇ ಹೊರತು ಕಡಿಮೆ ಮಟ್ಟದಲ್ಲಿ ಆಗಬಾರದು ಎಂದು ಹೇಳುತ್ತೇನೆ.

ಇನ್ನು ರೂರಲ್ ಕಮ್ಯೂನಿಕೇಷನ್ ವಿಚಾರದಲ್ಲಿ ಅನೇಕರಿಂದ ಟೀಕೆ ಟಿಪ್ಪಣಿಗಳು ಬಂದಿವೆ. ಅವರಿಗೆ ಎಷ್ಟು ಮನಸ್ಸೋಯುತ್ತದೊ ನನಗೂ ಅಷ್ಟೇ ಮನಸ್ಸೋಯುತ್ತದೆ ನನಗೂ ಅದಕ್ಕೆ ಜೀವ ಕೊಟ್ಟು ಅದರ ಕೆಲಸವನ್ನು ಪೂರೈಸಬೇಕು ಎನ್ನುವ ಆಸೆ ಇದೆ. ಆದರೆ ದುರಾದೃಷ್ಟವಶಾತ್ ಹಣಕಾಸಿನ ಪರಿಸ್ಥಿತಿಯಲ್ಲಿ ಈ ಕೆಲಸಗಳಿಗೆ ತೊಂದರೆಯಾಗಿದೆಯೇ ವಿನಾ ಮತ್ತಾವ ಉದ್ದೇಶದಿಂದಲೂ ಇದಕ್ಕೆ ಅನ್ಯಾಯವಾಗಿಲ್ಲ. ಈ ಕೆಲಸವನ್ನು ಶುರುಮಾಡಬೇಕು ಎಂದು ಫೌಂಡೇಷನ್ ಹಾಕಿದವನು ನಾನು. ಆದರೆ ಅದು ಇನ್ನೂ ಪ್ರಾರಂಭವಾಗಲಿಲ್ಲ. ಅದಕ್ಕಾಗಿ ನಾನು ಪಶ್ಚಾತಾಪ ಪಡುತ್ತೇನೆ ಹಣಕಾಸಿನ ಅಭಾವದಿಂದ ಈ ರೀತಿ ಆಯಿತು. ಈ ಹೊತ್ತಿನ ದಿವಸ ಹಳ್ಳಿಗಾಡಿನ ಜನರಿಗೆ ಬೇಕಾದ್ದು ಕುಡಿಯುವ ನೀರಿನ ವ್ಯವಸ್ಥೆ, ರಸ್ತೆ ಸೌಕರ್ಯ ವಸತಿ ಸೌಕರ್ಯ ಮತ್ತು ಆಸ್ಪತ್ರೆ. ಅವರಿಗೆ ಅಷ್ಟು ಕೊಡಬೇಕಾದ್ದು ಸರ್ಕಾರದ ಆದ್ಯಕರ್ತವ್ಯ. ಆದಕ್ಕೋಸ್ಕರ ಹಣ ಇಲ್ಲವಲ್ಲಾ ಎಂದು ನಾನು ಕೈಕಟ್ಟಿ ಕೂತಿಲ್ಲ. ಈಗಾಗಲೇ ನಾನು ಹಣಕಾಸಿನ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ನೀವು ಏನಾದರೂ ಮಾಡಿ ಇದಕ್ಕೆ ಹಣ ಕೊಟ್ಟೇಕೊಡಬೇಕು, ನೀವು ಈ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಹೇಳಿದ್ದೇನೆ. ಆದರ ಜೊತೆಗೆ ಅವರ ಔದಾರ್ಯವಷ್ಟೇ ಅಲ್ಲದೆ ಇದಕ್ಕೆ ಒಂದು ಖಾಯಂ ಉತ್ಪತ್ತಿ ಇರಬೇಕು ಎನ್ನುವುದೂ ಕೂಡ ಒಂದು ಯೋಜನೆ ಇದೆ. ಈ ಹೊತ್ತಿನ ದಿವಸ ೫೦ ಮೈಲಿ ರಸ್ತೆ ಮಾಡಿದರೆ ರಸ್ತೆ ಕೆಲಸವೆಲ್ಲಾ ಮುಗಿಯಿತು. ಅಂತಲ್ಲ. ನಮ್ಮ ರಾಜ್ಯದಲ್ಲಿ ಎಲ್ಲಾ ರಸ್ತೆ ಕೆಲಸವನ್ನು ತೆಗೆದುಕೊಳ್ಳಬೇಕಾದರೆ ನಮಗೆ ೧೧೦ ಕೋಟಿ ರೂಪಾಯಿ ಬೇಕಾಗುತ್ತದೆ. ರಾಜ್ಯದ ಎಲ್ಲಾ ಹಳ್ಳಿಗಳಲ್ಲೂ ಕೂಡ ಉತ್ತಮವಾದ ರಸ್ತೆ ಆಗಬೇಕು ಅದು ಈಗಾಗಲೇ ಆಗದಿದ್ದರೂ ಕೆಲವು ವರ್ಷಗಳಿಂದ ಮೇಲಾದರೂ ಆಗಬೇಕು. ಆದಕ್ಕೋಸ್ಕರ ನಾವು ಒಂದು ಯೋಜನೆ ಮಾಡುತ್ತಿದ್ದೇವೆ. ಅದು ಈಗಲೇ ಸಫಲವಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಇದಕ್ಕೆ ಒಂದು ರೋಲಿಂಗ್ ಫಂಡ್ ಇರಬೇಕು ಎಂದು ಯೋಜನೆ ಹಾಕಿಕೊಂಡಿದ್ದೇವೆ. ಪ್ರತಿಯೊಂದು ಜಿಲ್ಲೆಯಲ್ಲೂ ಯಾವ ಯಾವ ರಸ್ತೆಗಳನ್ನು ತೆಗೆದುಕೊಳ್ಳುತ್ತೇವೊ. ಅದನ್ನು ಡೆವಲಪ್ ಮಾಡಬೇಕಾದರೆ ಆಯಾಯಾ ಜಿಲ್ಲೆಯಲ್ಲಿ ಡೆವಲಪ್‌ಮೆಂಟ್ ಕಮಿಟಿಗಳು ಏನು ಇರುತ್ತದೋ ಅವರು ಹಣ ಹಾಕಿ ಖರ್ಚು ಮಾಡಬೇಕು. ಅದಕ್ಕೆ ಖಾಯಂ ರಿಸೋರ್ಸಸ್ ಬರಬೇಕಾದರೆ ಏನು ಮಾಡಬೇಕು ಎಂದು ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಅನೇಕ ಸುಧಾರಣೆಗಳನ್ನು ಕೊಟ್ಟಿದ್ದಾರೆ. ಆ ಬಗ್ಗೆ

(ಶ್ರೀ ಹೆಚ್. ಎಂ. ಚನ್ನಬಸಪ್ಪ)

ಹೇಳುವುದಾದರೆ ನಾವು ಕೆಲವು ಕಡೆ ಬ್ರಿಡ್ಜಸ್‌ಗಳನ್ನು ಏನು ಕಟ್ಟಿಕೊಟ್ಟಿದ್ದೇವೋ ಅದನ್ನು ಬಿಸಿನೆಸ್ ಟ್ರೇಡ್‌ನವರು ಯೂಸ್ ಮಾಡುವುದರಿಂದ ಅದರ ಮೇಲೆ ಟೋಲ್ ಹಾಕುವುದಾದರೆ ಅದರಿಂದ ೧-೧½ ಕೋಟಿ ಖಾಯಂ ಉತ್ಪತ್ತಿ ಬರಬಹುದೆಂದು ನಿರೀಕ್ಷಣೆ ಇದೆ. ಅಷ್ಟೇ ಅಲ್ಲದೆ ಮಾರ್ಕೆಟ್‌ಗೆ ಬ್ರಿಡ್ಜಸ್ ಮೇಲೆ ಬರುವಂತೆ ಲಾರಿಗಳ ಮತ್ತು ಬ್ರಿಡ್ಜಸ್ ಮೇಲೆ ಬರುವಂಥ ಸಾಮಾನುಗಳ ಮೇಲೆ ಟೋಲ್ ಹಾಕುವುದಾದರೆ ಅದರಿಂದಲೂ ಕೂಡ ಸ್ವಲ್ಪ ಹಣ ಬರಲು ಸಾಧ್ಯ. ಹೀಗೆ ನಾನಾ ರೀತಿಯಲ್ಲಿ ಯೋಜನೆ ಮಾಡಿ ಒಂದು ಖಾಯಂ ಉತ್ಪತ್ತಿ ಬರುವ ಹಾಗೆ ಮಾಡಬೇಕು. ಇದರ ಜೊತೆಗೆ ಸರ್ಕಾರದವರು ಕೂಡ ಬಜೆಟ್‌ನಲ್ಲಿ ಏಷ್ಟು ಕೊಡುತ್ತಾರೋ ಅದನ್ನೂ ಕೂಡ ಈ ರೋಲಿಂಗ್ ಫಂಡ್‌ಗೆ ಕೊಡಬೇಕು ಎಂದು ಯೋಜನೆ ಮಾಡಿದ್ದೇವೆ. ಈ ರೀತಿಯಾದ ಒಂದು ವ್ಯವಸ್ಥೆಯನ್ನು ಇದರಲ್ಲಿ ಮಾಡುತ್ತಿದ್ದೇವೆ ಆದುದರಿಂದ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ ಇದನ್ನು ಸ್ಟೆಬಲೈಸ್ ಮಾಡುವುದಕ್ಕೆ ತಾವು ಏನೇನು ರಚನಾತ್ಮಕ ಸಲಹೆಗಳನ್ನು ಕೊಡುತ್ತೀರೋ ಅವೆಲ್ಲವನ್ನೂ ಕೊಡಬೇಕಾಗಿ ಪ್ರಾರ್ಥನೆ ಮಾಡುತ್ತೇನೆ.

ಬ್ರಿಡ್ಜ್ ಕಾರ್ಪೊರೇಷನ್ ರಸ್ತೆಗಳಿಗೆ ಸಂಬಂಧಪಟ್ಟದ್ದು. ಬ್ರಿಡ್ಜಸ್ ನಮ್ಮಲ್ಲಿ ಬೇಕಾದಷ್ಟು ಆಗಬೇಕು. ಅದರಲ್ಲೂ ಮಲೆನಾಡಿನಲ್ಲಿ ಬ್ರಿಡ್ಜ್‌ಗಳ ಪ್ರಶ್ನೆ ಬಹಳ ಹೆಚ್ಚು ಇದೆ. ಮಲೆನಾಡು ಅಂದರೆ ನಾರ್ತ್ ಕೆನರಾ, ಸೌತ್ ಕೆನರಾ ಅಲ್ಲದೆ ಬೇರೆ ಕಡೆಗಳಲ್ಲೂ ಈ ಪ್ರಶ್ನೆ ಇದೆ. ಅಲ್ಲಿ ಅವುಗಳನ್ನು ಮಾಡದೇ ಹೋದರೆ ಆರ್ಥಿಕ ಪ್ರಗತಿ ಆಗುವುದಿಲ್ಲ. ಆದರೆ ಏಕಕಾಲದಲ್ಲಿ ಎಲ್ಲವನ್ನೂ ಮಾಡಬೇಕೆಂದರೆ ಕೋಟಿಗಟ್ಟಲೆ ಹಣ ಬೇಕಾಗುತ್ತದೆ. ನಮ್ಮ ಹಣಕಾಸಿನ ಪರಿಸ್ಥಿತಿಯಲ್ಲಿ ವರ್ಷಕ್ಕೆ ೩ ಬ್ರಿಡ್ಜ್‌ಗಳನ್ನು ಮಾಡುವುದೇ ಕಷ್ಟವಾಗುತ್ತದೆ. ಬೇಗ ಬೇಗ ಮಾಡುವುದಕ್ಕೆ ಆಗುವುದಿಲ್ಲ. ನಮಗೆ ಹಣಕಾಸಿನ ತೊಂದರೆ ಇದೆ. ಇದಕ್ಕೆ ಸ್ಪೆಷಲ್ ನಾಲೆಡ್ಜ್ ಬೇಕು, ಸ್ಪೆಷಲ್ ಎಕ್ವಿಪ್‌ಮೆಂಟ್ ಬೇಕು. ಅದಕ್ಕೋಸ್ಕರ ವಾಗಿ ಬ್ರಿಡ್ಜ್ ಕಾರ್ಪೊರೇಷನ್ ಮಾಡಿ ಹಣವನ್ನು ತಮ್ಮಲ್ಲಿ ತಾವೇ ಉತ್ಪನ್ನ ಮಾಡಿಕೊಳ್ಳುವ ವ್ಯವಸೆ ಮಾಡಿ ಸಾಲಸೋಲಗಳು ಕಳೆದು ವಾಪಸ್ಸು ಕೊಡತಕ್ಕ ವ್ಯವಸ್ಥೆ ಮಾಡಬೇಕು ಎಂದು ಸಭೆಯಲ್ಲಿ ಹೇಳಿದೆ. ಮಾನ್ಯ ಸದಸ್ಯರ ಕಾತುರತೆಗೆ ನನ್ನ ಮನ್ನಣೆ ಇದೆ. ಇದರ ಬಗ್ಗೆ ಈಗ ರಿಪೋರ್ಟ್ ಬಂದಿದೆ. ನನಗೆ ಈಗಾಗಲೇ ೧೦-೧೫ ದಿವಸಗಳಿಂದ ಶರೀರಕ್ಕೆ ಸ್ವಸ್ಥ ಇಲ್ಲದ ಕಾರಣ ಇದನ್ನು ವಿಚಾರ ಮಾಡು ವುದಕ್ಕೆ ಆಗದೆ ಹಾಗೆಯೇ ನಿಂತಿದೆ. ೨-೩ ದಿವಸಗಳಿಂದ ಚೇತರಿಸಿಕೊಂಡಮೇಲೆ ಇದರ ಬಗ್ಗೆ ಹೆಚ್ಚಿನ ಕಾತುರತೆಯನ್ನು ತೋರಿಸಿ ಬ್ರಿಡ್ಜ್ ಕಾರ್ಪೊರೇಷನ್ ಮೂಲಕ ಸೇತುವೆ ರಸ್ತೆಗಳನ್ನು ಮಾಡುವ ವಿಷಯಕ್ಕೆ ಮನಸ್ಸನ್ನು ಹರಿಸಿ ಯೋಗ್ಯ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಆಸೆ ಇದೆ. ಇದರ ಜೊತೆಗೆ ಮೈಂಟೆನೆನ್ಸ್ ಗ್ರಾಂಟ್ ಕೊಡತಕ್ಕದ್ದರಲ್ಲಿ ೬ ಕೋಟಿ ರೂಪಾಯಿಗಳು ಕೊಟ್ಟಿದ್ದರಲ್ಲಿ, ಒಂದೂಕಾಲು, ಒಂದೂವರೆ ಕೋಟಿ ರೂಪಾಯಿ ಗ್ಯಾಂಗ್‌ಮೆನ್‌ಗಳ ಸಂಬಳಕ್ಕೇ ಹೋಗುತ್ತದೆ. ರಸ್ತೆ ರಿಪೇರಿ ಮಾಡುವುದಕ್ಕೆ ದುಡ್ಡು ಸಾಲದೇ ಬರುತ್ತದೆ. ಆದುದರಿಂದ ಈ ಗ್ಯಾಂಗ್‌ಮೆನ್‌ಗಳನ್ನು ಯಾವರೀತಿ ಉಪಯೋಗ ಮಾಡುವುದು ಎನ್ನುವುದರ ಬಗ್ಗೆ ಯೋಚನೆ ಮಾಡುತ್ತೇನೆ.

ಇನ್ನು ಸಾಲುಮರಗಳನ್ನು ಹಾಕತಕ್ಕ ಬಗ್ಗೆ ಸಲಹೆ ಕೊಟ್ಟಿದ್ದಾರೆ. ನಾನು ಪಿ.ಡಬ್ಲ್ಯು.ಡಿ.ಗೆ ಈಗಾಗಲೇ ಆಜ್ಞೆ ಮಾಡಿದ್ದು ಅವರು ಈ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಈ ಮಳೆಗಾಲ ನಲ್ಲಿ ಎಲ್ಲೆಲ್ಲಿ ನಮ್ಮ ರಸ್ತೆಗಳಿವೆ, ಅಲ್ಲೆಲ್ಲಾ ಒಳ್ಳೆಯ ಯೋಗ್ಯವಾದ ಮರಗಳನ್ನು ತಕ್ಷಣ ಹಾಕಬೇಕು ಎಂದು ಆಜ್ಞೆ ಮಾಡಿದ್ದೇನೆ. ಬಹುಶ ಇನ್ನುಮೇಲೆ ಮರಗಳನ್ನು ಹಾಕುವ ಕೆಲಸ ಪ್ರಾರಂಭವಾಗುತ್ತದೆ.

ಮತ್ತೊಂದು ವಿಷಯ ಹೇಳಿದರು. ಇಬ್ಬರು ಅಸಿಸ್ಟೆಂಟ್ ಇಂಜನಿಯರ್‌ಗಳ ಹೆಂಡತಿಯರು ಯಾವುದೋ ಬಜಾರನ್ನು ರನ್ ಮಾಡುತ್ತಾ ಇದ್ದಾರೆ ಎಂದು. ಇಬ್ಬರು ಅಸಿಸ್ಟೆಂಟ್ ಇಂಜನಿಯರ್‌ಗಳು ಹೆಂಡತಿಯರು ಕೆನರಾ ಬ್ಯಾಂಕ್‌ನಿಂದ ೧೦-೨೦ ಸಾವಿರ ರೂಪಾಯಿಗಳನ್ನು ಸಾಲ ತೆಗೆದುಕೊಂಡು ಒಂದು ಕಾಸ್ಮೆಟಿಕ್ ಸ್ಟೋರ್ ಎಂದು ಮಾಡಿಕೊಂಡಿದ್ದರು. ಅದನ್ನು ಚೀಫ್ ಇಂಜನಿಯರ್‌ರವರಿಗೂ ಬರೆದಾಗ ಅಧಿನಿಯಮವನ್ನು ಅನುಸರಿಸಿ ಏನು ಬೇಕಾದರೂ ಮಾಡಬಹುದೆಂದು ಹೇಳಿದರು. ಆದರೆ ಈಗ ಅದು ಅಲ್ಲಿ ಇಲ್ಲ. ಲಾಲ್‌ಬಾಗ್ ಕೆರೆ ವಿಷಯವನ್ನು ಮಾನ್ಯ ಪುಟ್ಟಸ್ವಾಮಯ್ಯ ಅವರು ಎತ್ತಿ ದ್ದಾರೆ ಎಂದು ಕಾಣುತ್ತದೆ. ಅದಕ್ಕೆ ೨,೮೦,೦೦೦ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದರ ಮಾಹಿತಿಯನ್ನೂ ತರಿಸಿದ್ದೇನೆ. ಒಟ್ಟು ಅಂದಾಜು ೨,೭೯.೦೦೦ ರೂಪಾಯಿ. ಇದರಲ್ಲಿ ಡೀ ಸಿಲ್ಟಿಂಗ್‌ಗೆ ೧,೮೭,೫೦೦ ರೂಪಾಯಿ, ಮತ್ತೆ ರೀಟೇನಿಂಗ್ ವಾಲ್‌ಗೆ ೮೫ ಸಾವಿರ ರೂಪಾಯಿ ಇದೆ. ಫ್ಲಕು ಯೇಷನ್ ೬,೫೦೦ ರೂಪಾಯಿ, ಟೋಟಲ್ ೨,೭೯,೦೦೦ ರೂಪಾಯಿ. The work has been taken up an places work system through several piecg workers

and also though Agro Industries Corporation as per orders of Government. ಅದರಲ್ಲಿ ಈಗ ಖರ್ಚಾಗಿರುವುದು ೧,೧೦,೯೯೪ ರೂಪಾಯಿಗಳು. ಡೀ ಸಿಲ್ಟಿಂಗ್‌ಗೆ ಹೆವಿ ಎಕ್ಸ್‌ಪೆಂಡಿಚರ್ ಆಗಿದೆ. ಅದಕ್ಕೆ ಎಷ್ಟು ಖರ್ಚಾಗಿದೆ ಎಂಬ ಮಾಹಿತಿಯನ್ನು ಅಲ್ಪಕಾಲದಲ್ಲಿ ತರಿಸಿಕೊಳ್ಳುವುದಕ್ಕೆ ಆಗಲಿಲ್ಲ. ಬೇಕಾದರೆ ಆಮೇಲೆ ತರಿಸಿಕೊಡುತ್ತೇನೆ. ಇದನ್ನು ವಿಜಿಲೆನ್ಸ್‌ಗೆ ರೆಫರ್ ಮಾಡಿಲ್ಲ. ನಿನ್ನೆ ಸಾಯಂಕಾಲ ಮಾನ್ಯ ಸದಸ್ಯರು ಹೇಳಿದರು. ಈ ಅಲ್ಪ ಕಾಲದಲ್ಲಿ ಮಾಹಿತಿ ತರಿಸಬೇಕಾದರೆ ಎಷ್ಟು ಶ್ರಮವಾಗಿದೆ ಎಂಬುದನ್ನು ತಾವು ತಿಳಿಯಬಹುದು. ಇದರ ಬಗ್ಗೆ ಹೆಚ್ಚು ಮಾಹಿತಿ ಬೇಕಾದರೆ ಅಗತ್ಯವಾಗಿ ತರಿಸಿಕೊಡುತ್ತೇನೆ. ಈಗ ನನಗೆ ನೇರವಾಗಿ ಬಂದಿರುವ ಇನ್‌ಫರ್ಮೇಷನ್ ಕೊಡುತ್ತಾ ಇದ್ದೇನೆ. ಮತ್ತೆ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಏತಕ್ಕೆ ಕೆಲಸ ಕೊಟ್ಟಿಲ್ಲ ಎಂದು ಪ್ರಶ್ನೆ ಮಾಡಿದರು. ಒಟ್ಟು ೧೦ ಕೆಲಸಕ್ಕೆ ಟೆಂಡರ್ ಕಾಲ್ ಫರ್ ಮಾಡಿದ್ದೇವೆ. ಅದರ ವೆಚ್ಚ ೨೩.೪ ಕೋಟಿ ರೂಪಾಯಿ ಕನ್‌ಸ್ಟ್ರಕ್ಷನ್‌ಗೋಸ್ಕರ ೩ ಕೆಲಸಕ್ಕೆ ಮಾತ್ರ ಅವರು ಟೆಂಡರ್ ಹಾಕಿದ್ದರು. ಅದು ೪.೧೦ ಕೋಟಿ ಮಾತ್ರ. ಪ್ರತಿಯೊಂದು ಟೆಂಡರ್ ಕೂಡ ಲೋಯಸ್ಟ್ ಟೆಂಡರ್. ಇದರಿಂದ ಶೇಕಡ ೮.೫ ಹೆಚ್ಚಾಗಿದೆ. ಒಂದಕ್ಕೆ ಶೇಕಡ ೩೨½ ಗಿಂತ ಹೆಚ್ಚಿನ ಟೆಂಡರ್ ಹಾಕಿದರು. ನಾನೇ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನವರನ್ನು ಕರೆಸಿ ಏತಕ್ಕೆ ಹೀಗೆ ಮಾಡುತ್ತೀರಿ, ಕೆಲಸ ಜೋರಾಗಿ ಮಾಡಿ ನಾವು ಎನ್‌ಕರೇಜ್ ಕೊಡಬೇಕು ಎಂದಿದ್ದೇವೆಂದು ಹೇಳಿದ ನನ್ನ ಅಭಿಪ್ರಾಯ ಅಲ್ಪಸ್ವಲ್ಪ ಹೆಚ್ಚು ಕಡಿಮೆ ಆದರೂ ಚಿಂತೆ ಇಲ್ಲ. ಕೆಲಸ ಮಾಡತಕ್ಕ ಶಕ್ತಿ ಇದ್ದರೆ ಅವರಿಗೇ ಕೊಡಬೇಕು ಎನ್ನುವುದು. ಆಗ ಅವರು ಯಾವ ಯಾವ ಕೆಲಸಕ್ಕೆ ಟೆಂಡರ್ ಮಾಡಿದ್ದರು ಅದಕ್ಕಿಂತ ಕಡಿಮೆ ಆಗುವುದಿಲ್ಲ ಎಂದು ಹೇಳಿದರು. ಜೊತೆಗೆ ಅಷ್ಟು ಪ್ರಮಾಣದಲ್ಲಿ ಶಕ್ತಿ ಇಲ್ಲವೆಂದು ಒಪ್ಪಿಕೊಂಡರು. ಅದರ ಮೇಲೆ ನಾವು ಅವರಿಗೆ ಕೊಡುವುದಕ್ಕೆ ಸಾಧ್ಯ ಆಗಲಿಲ್ಲ, ಇನ್ನು ಕತವಾಯಿ ಹಳ್ಳ ಪ್ರಾಜೆಕ್ಟ್. ೭೩-೭೪ರ ಷೆಡ್ಯೂಲು ರೇಟ್ ಪ್ರಕಾರ ಇದರ ಅಂದಾಜು ೩ ಲಕ್ಷ ೨೫ ಸಾವಿರ. ಇದನ್ನು ಬಡ್ಜೆಟ್‌ನಲ್ಲಿ ಸೇರಿಸಿಲ್ಲ ಈ ಬ್ರಿಡ್ಜಿನ ಅವಶ್ಯಕತೆ ಇದೆ. ಆದುದರಿಂದ ಇದನ್ನು ಬ್ರಿಡ್ಜ್ ಕಾರ್ಪೊರೇಷನ್‌ಗೆ ಹಾಕುವ ಯೋಚನೆ ಇದೆ. ಚೀಫ್ ಇಂಜನಿಯರನ್ನು ಎಂ. ಪಿ. ಸಿ ಯಲ್ಲಿ ಏತಕ್ಕೆ ಮಾಡಿದೆವು ಎಂಬ ಪ್ರಶ್ನೆ ಕೇಳಿದರು. ಅದಕ್ಕೆ ಕೇಂದ್ರ ಸರ್ಕಾರದವರು ಹಣ ಕೊಡುತ್ತಾರೆ. ಬೇಡತಿ, ವಾರಾಹಿ ಮತ್ತು ಇತರ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಲು ತಕ್ಕ ಪ್ರಿಪರೇಷನ್ ಮಾಡಬೇಕು. ಒಬ್ಬನೇ ಡಿಸೈನ್ ಮತ್ತು ಎಲ್ಲಾ ಕೆಲಸವನ್ನೂ ಮಾಡುವುದರಿಂದ ಕೆಲಸ ನಿಧಾನವಾಗುತ್ತದೆ, ಬಹಳ ವೇಗವಾಗಿ ಹೋಗಬೇಕು, ಡಿಸೈನ್ಸ್ ಹೆಚ್ಚು ಕಡಿಮೆ ಆದರೆ ಅನೇಕ ತೊಂದರೆಗಳು ಬರುತ್ತವೆ- ಅದಕ್ಕೋಸ್ಕರ ಎಲ್ಲಾ ಪ್ರಾಜೆಕ್ಟ್‌ಗಳಿಗೂ ಡಿಸೈನ್ ಮಾಡುವುದಕ್ಕೋಸ್ಕರ ಒಬ್ಬರು ಅಲಾಯಿದ ಚೀಫ್ ಇಂಜನಿಯರ್ ಇರಬೇಕೆಂದು ಮಾಡಿದ್ದೇವೆ. ಯಾವ ಕಾಲಕ್ಕೆ ದುಡ್ಡು ಬರುತ್ತದೋ. ದುಡ್ಡು ಬಂದಮೇಲೆ ಡಿಸೈನ್ ಮಾಡಲು ೮ ತಿಂಗಳು ತೆಗೆದುಕೊಂಡರೆ ಪ್ರಯೋಜನವಾಗುವುದಿಲ್ಲ ಇರತಕ್ಕ ಹೈಡ್ರೋ ಎಲೆಕ್ಟ್ರಿಕ ಪ್ರಾಜೆಕ್ಟ್‌ಗಳ ಕೂಡ ಡಿಸೈನ್ಸ್ ಮತ್ತೊಂದು ತಯಾರು ಮಾಡಿ ಸಿದ್ಧಪಡಿಸಿಕೊಳ್ಳಬೇಕೆಂದು ಡಿಸೈನ್ಸ್ ಚೀಫ್ ಇಂಜನಿಯರ್ ನೇಮಕ ಮಾಡಿದ್ದೇವೆ. ರಸ್ತೆಗಳ ವಿಷಯದಲ್ಲಿ ಹಳೇ ಮೈಸೂರಿಗೂ, ಹೊಸ ಮೈಸೂರಿಗೂ ತಾರತಮ್ಯ ಮಾಡಿದ್ದಾರೆಂದು ಸದಸ್ಯರ ಹೇಳಿದ್ದಾರೆ. ಅದರ ಬಗ್ಗೆ ಫಿಗರ್ಸ್ ಕೊಡುತ್ತೇನೆ. ಓಲ್ಡ್ ಮೈಸೂರಿನಲ್ಲಿ ೩ ಸರ್ಕಲ್‌ಗಳಿವೆ. ಅಂದರೆ ಮೈಸೂರು, ಬೆಂಗಳೂರು ಮತ್ತು ಶಿವಮೊಗ್ಗ. ಹೊಸ ಮೈಸೂರಿನಲ್ಲಿ ೪ ಸರ್ಕಲ್‌ಗಳಿವೆ; ಅಂದರೆ ಧಾರವಾಡ, ಬೆಳಗಾಂ, ಗುಲ್ಬರ್ಗ, ಮಂಗಳೂರು. ೧೯೭೧-೭೨ರಲ್ಲಿ ಹಳೇ ಮೈಸೂರಿಗೆ ೧೫ ಕೋಟಿ ರೂಪಾಯಿ, ಹೊಸ ಮೈಸೂರಿಗೆ ೧೯ ಕೋಟಿ ರೂಪಾಯಿ, ೧೯೭೨-೭೩ರಲ್ಲಿ ಹಳೇ ಮೈಸೂರಿಗೆ ೧೬ ಕೋಟಿ ರೂಪಾಯಿ, ಹೊಸ ಮೈಸೂರಿಗೆ ೧೬.೬೫ ಕೋಟಿ ರೂಪಾಯಿ. ೧೯೭೩-೭೪ರಲ್ಲಿ ಹಳೇ ಮೈಸೂರಿಗೆ ೧೬ ಕೋಟಿ ರೂಪಾಯಿ, ಹೊಸ ಮೈಸೂರಿಗೆ ೯ ಕೋಟಿ ರೂಪಾಯಿ ಕೊಟ್ಟಿದೆ.

ಇನ್ನು ರೈಲ್ವೆ ವಿಷಯದಲ್ಲಿ ಬಹಳ ಚರ್ಚೆ ನಡೆದಿರುತ್ತದೆ. ಕರ್ನಾಟಕಕ್ಕೆ ಬಹಳ ಅನಾದರಣೆ ತೋರಿಸುತ್ತಿದ್ದಾರೆ ಎಂದು ಹೇಳಿದರು. ಮಾನ್ಯ ಸದಸ್ಯರ ಧ್ವನಿಯಲ್ಲಿ ನನ್ನ ಧ್ವನಿಯನ್ನೂ ಕೂಡಿಸುತ್ತೇನೆ. ರೈಲ್ವೆ ಡಿಪಾರ್ಟ್‌ಮೆಂಟ್ ಡೆವಲಪ್‌ಮೆಂಟ್ ನಮ್ಮಲ್ಲಿ ಸಾಕಷ್ಟು ಆಗಿಲ್ಲ. ಈ ವಿಷಯದಲ್ಲಿ ದೆಲ್ಲಿಗೆ ಹೋದಾಗ, ಬಂದಾಗಲೆಲ್ಲಾ ಸೂಕ್ತ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ತಾವು ಆಗ್ರಹ ಪೂರ್ವಕವಾಗಿ ಹೇಳಿದಮೇಲೆ ನಾವೂ ಆಗ್ರಹ ಪೂರ್ವಕವಾಗಿ ಕಾರ್ಯಕ್ರಮ ತೆಗೆದುಕೊಂಡು ಪ್ರಾಮುಖ್ಯವಾಗಿ Broedga ge of Baugalore Mysore line broadgauging of Hassan Mangalore line, Hubli Karwar line ಆದಷ್ಟು ಬೇಗ ಆಗಬೇಕೆಂದು ಒತ್ತಾಯಪಡಿಸುತ್ತೇನೆ,

ಚಿಕ್ಕಹೊಳೆ ಡ್ಯಾಂ ವಿಷಯದಲ್ಲಿ ಪ್ರಶ್ನೆ ಮಾಡಿದರು. ಈಗ ಡಿಸೈನ್ಸ್ ಎಲ್ಲಾ ಕಂಪ್ಲೀಟ್ ಆಗಿದೆ. ಎಸ್ಟಿಮೇಟ್ ರೆಡಿಯಾಗಿದೆ ಸಬ್ ಡಿವಿಜನ್ ಪ್ರಾರಂಭ ಮಾಡಿದ್ದೇವೆ. ಈಗ ಕೆಲಸ ತೆಗೆದುಕೊಂಡಿ

(ಶ್ರೀ ಹೆಚ್. ಎಂ. ಚನ್ನಬಸಪ್ಪ)

ದ್ದೇವೆ. ರಿಪೋರ್ಟ್ ಏನಿದೆ ಎನ್ನತಕ್ಕದ್ದದನ್ನು ಈ ಸಭೆಯ ಮುಂದೆ ಇಡಬೇಕೆಂದು ಕೆಲವು ಸದಸ್ಯರು ಕೇಳಿದರು. ರಿಪೋರ್ಟಿನಲ್ಲಿ ಯಾರು ಯಾರು ಜವಾಬ್ದಾರರು ಎಂದು ಹೇಳಿದ್ದಾರೆ. ಅವರಿಂದ ಸಮಜಾಯಿಷಿ ಕೇಳಿದ್ದೇ, ಅವರಿಂದ ಅದು ಬಂದು, ತೀರ್ಮಾನ ತೆಗೆದುಕೊಂಡಮೇಲೆ, ರಿಪೋರ್ಟನ್ನು ಸಭೆಯ ಮುಂದೆ ಇಡುವುದಕ್ಕೆ ಅಡ್ಡಿ ಇಲ್ಲ.

ರೂರಲ್ ಎಲೆಕ್ಟ್ರಿಫಿಕೇಷನ್ ಮತ್ತು ಐ. ಪಿ. ಸೆಟ್ ವಿಷಯದಲ್ಲಿ ಅನೇಕ ಸದಸ್ಯರು ಆಗ್ರಹಪೂರ್ವಕವಾಗಿ ಹೇಳಿದ್ದಾರೆ. ಅವರಲ್ಲಿ ನಾನು ಬಹಳ ವಿನಯದಿಂದ ಅರಿಕೆ ಮಾಡಿಕೊಳ್ಳುವುದಕ್ಕೆ ನಮ್ಮಲ್ಲಿ ಕೆಲವು ಕಾಲ ಸ್ವಲ್ಪ ಹಣದ ಕೊರತೆ ಇದಕ್ಕೆ ಅಡ್ಡಿಯಾಗಿಲ್ಲ. ನಮಗೆ ಇದ್ದ ದೊಡ್ಡ ಕೊರತೆ ಎಂದರೆ, ಪದಾರ್ಥಗಳ ಅಭಾವದ ಪ್ರಶ್ನೆ, ಈ ಪದಾರ್ಥಗಳ ಅಭಾವದಿಂದ ನಾವು ಎಷ್ಟು ಕೆಲಸ ಆಗಬೇಕೆಂದು ನಿರೀಕ್ಷಣೆ ಮಾಡಿದ್ದೆವೋ ಅಷ್ಟು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಈ ಪದಾರ್ಥಗಳ ಅಭಾವದಲ್ಲಿ ಅಲ್ಯೂಮಿನಿಯಂ ಕಂಡಕ್ಟರ್ಸ್, ಆ್ಯಂಗಲ್ ಐರನ್, ಸ್ಟೀಲ್, ಸಿಮೆಂಟ್ ಎಲ್ಲಾ ಇದೆ. ನಮ್ಮ ಕಾರ್ಯಕ್ರಮಗಳು ದೊಡ್ಡದಾಗಿವೆ. ಆದರೆ ಇರತಕ್ಕ ಕುಂದುಕೊರತೆಗಳಿಂದ ಪ್ರಗತಿ ಸ್ವಲ್ಪಮಟ್ಟಿಗೆ ಕುಂಟುತ್ತಾ ಇದೆ. ಇನ್ನು ೨-೩ ತಿಂಗಳಲ್ಲಿ ರೂರಲ್ ಎಲೆಕ್ಟ್ರಿಫಿಕೇಷನ್ ನಿಂತರೂ ಚಿಂತೆಯಿಲ್ಲ. ಇಂತಹ ಸಾಮಾನುಗಳಿಂದ ಐ.ಪಿ. ಸೆಟ್ಟುಗಳನ್ನು ಹಾಕಿಕೊಂಡಿದ್ದಾರೋ ಅಂಥ ಕಡೆ ಮೊದಲು ಕೊಡಿ ಎಂದು ಆಜ್ಞೆ ಮಾಡಿದ್ದೇವೆ, ಅನೇಕ ಜನ ಸಾಲ ಸೋಲ ಮಾಡಿಕೊಂಡು ಯಾರ ಪಂಪ್‌ಸೆಟ್ಟು ಹಾಕಿಕೊಂಡಿದ್ದಾರೋ ಅಂಥವರಿಗೆ ಈ ಆಜ್ಞೆಯಿಂದ ಅನುಕೂಲ ದೊರೆಯುತ್ತದೆ ರೂರಲ್ ಎಲೆಕ್ಟ್ರಿಫಿಕೇಷನ್‌ನಲ್ಲಿ ಎಷ್ಟು ಪ್ರೋಗ್ರೆಸ್ ನಡೆದಿದೆ ಎಂದು ಸದಸ್ಯರು ಕೇಳಿದ್ದಾರೆ. ಸ್ಕೇರ್ಸಿಟಿ ರಿಲೀಫ್ ವರ್ಕ್ಸ್ ಕೆಳಗೆ ಈಗ ೫,೦೫,೩೦,೦೦೦ ರೂಪಾಯಿಗಳ ಕೆಲಸ ನಡೆದಿದೆ, ೮,೧೫೦ ಕಿಲೋಮೀಟರ್ ಟ್ರ್ಯಾಕಲ್ ಮಾಡಿದ್ದೇವೆ. ನಾನು ಆಗಲೇ ಹೇಳಿದಂತೆ ಸರ್‌ಚಾರ್ಜ್ ಆನ್ ವೆಹಿಕಲ್ ಟ್ಯಾಕ್ಸ್ ಸುಮಾರು ಒಂದೂವರೆ ಕೋಟಿ ರೂಪಾಯಿಗಳೆಂದು ಅಂದಾಜು ಮಾಡಿದೆ ಸರ್‌ಚಾರ್ಜ್ ಆನ್ ಮಾರ್ಕೆಟ್ ಟರ್ನ್ ಓವರ್‌ನಿಂದ ಸುಮಾರು ಎರಡು ಕೋಟಿ ರೂಪಾಯಿ ಬರುತ್ತದೆ. ಒಟ್ಟು ಮೂರುವರೆ ಕೋಟಿ ಮತ್ತು ನಮ್ಮ ಸರ್ಕಾರದವರು ಅರ್ಧ ಕೋಟಿ ಕೊಟ್ಟರೆ, ಒಟ್ಟು ನಾಲ್ಕು ಕೋಟಿ ಪ್ರತಿ ವರ್ಷ ಈ ಕೆಲಸಗಳಿಗೆ ದೊರೆತರೆ, ಇನ್ನು ೪-೫ ವರ್ಷಗಳಲ್ಲಿ ಹಳ್ಳಿಗಳಿಗೆ ಬೇಗ ರಸ್ತೆಗಳನ್ನು ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನಂಬಿದ್ದೇನೆ ಬೆಂಗಳೂರು ವಿಭಾಗದಲ್ಲಿ ಇಬ್ಬರು ಅಸಿಸ್ಟೆಂಟ್ ಇಂಜನಿಯರ್ ಮತ್ತು ಒಬ್ಬರು ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರ ಅಸೆಟ್ಸ್ ಮತ್ತು ಲಯಬಿಲಿಟೀಸನ್ನು ತೋರಿಸಬೇಕು ಎಂದು ಹೇಳಿದ್ದಾರೆ, ಅದನ್ನು ತಕ್ಷಣ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದರ ಬಗ್ಗೆ ಮಾನ್ಯ ಸದಸ್ಯರು ಏನು ಆಗ್ರಹಪೂರ್ವಕವಾಗಿ ಹೇಳಿದ್ದಾರೆ, ಅದರ ಕಡೆ ವಿಶೇಷ ಗಮನಕೊಟ್ಟು ವಿಚಾರ ಮಾಡುತ್ತೇನೆ.

ಇನ್ನು ಕಬಿನಿ ಕ್ಯಾನಲ್ ವಿಷಯದ ಬಗ್ಗೆ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ಮೂರನೇ ವ್ಯಾಲಿಯಲ್ಲಿ ಇನ್‌ವೆಸ್ಟಿಗೇಟ್ ಮಾಡಿದಾಗ, ಫಾಲ್ಸ್ ಮೇಷರ್‌ಮೆಂಟ್ಸ್‌ನಿಂದ ೩,೦೫,೦೦೦ ರೂಪಾಯಿ ಹೆಚ್ಚು ಹಣ ಹೋಗಿದೆ ಎಂಬ ವಿಷಯ ಗೊತ್ತಾಗಿದೆ ಮತ್ತೆ ತಕ್ಷಣದಲ್ಲಿ ಅದಕ್ಕೆ ಸಂಬಂಧಪಟ್ಟವರನ್ನು ವರ್ಗ ಮಾಡಬೇಕು ಎಂದು ಕೆಲವು ಸದಸ್ಯರಿಂದ ಸಲಹೆ ಬಂತು. ಅದನ್ನು ಮಾಡಿದ್ದೇವೆ. ಇದರಲ್ಲಿ ೧೭ ಜನ ಇನ್‌ವಾಲ್ವ್ ಆಗಿದ್ದಾರೆ. ಅಂದರೆ, ೩ ಜನ ಎಕ್ಸಿಕ್ಯೂಟೀವ್ ಇಂಜಿನಿಯರುಗಳು, ೪ ಜನ ಅಸಿಸ್ಟೆಂಟ್ ಇಂಜಿನಿಯರುಗಳು, ೯ ಜನ ಜೂನಿಯರ್ ಇಂಜಿನಿಯರ್‌ಗಳು ಮತ್ತು ಒಬ್ಬ ಅಕೌಂಟೆಂಟ್. ಇದರ ಬಗ್ಗೆ ವಿಜಿಲೆನ್ಸ್ ಕಮಿಷನ್ನಿನ ರಿಪೋರ್ಟ್ ಇನ್ನೂ ನಮಗೆ ಬಂದಿಲ್ಲ. ಬಂದಕೂಡಲೇ ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಇದರಲ್ಲಿ ಸ್ವಲ್ಪ ಮಾತ್ರವೇ ಪರೀಕ್ಷೆ ಮಾಡಿರುವುದು ಇನ್ನೂ ಬಹಳ ಮಟ್ಟಿಗೆ ಪರೀಕ್ಷೆ ಮಾಡತಕ್ಕದ್ದು ಇದೆ ಎಂದು ನನಗೆ ಗೊತ್ತಾಗಿದೆ. ಇದರ ಬಗ್ಗೆ ವಿಜಿಲೆನ್ಸ್ ಕಮಿಷನ್‌ನವರು ಹೆಚ್ಚು ಸಿಬ್ಬಂದಿ ಬೇಕು ಎಂದು ಕೇಳಿದ್ದಾರೆ, ಸಿಬ್ಬಂದಿಯನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಇನ್ನು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನ ವಿಷಯವನ್ನು ಕೆಲವು ಸದಸ್ಯರು ಪ್ರಸ್ತಾಪ ಮಾಡಿದರು ಇದರ ಬಗ್ಗೆ ವಿಜಿಲೆನ್ಸ್ ಕಮಿಷನ್ನಿನವರು ೩೪ ಲಕ್ಷ ರೂಪಾಯಿ ನಷ್ಟವಾಗಿದೆ ಎಂದು ವರದಿ ಕೊಟ್ಟರು ಆದರೆ ಚೀಫ್ ಇಂಜಿನಿಯರ್‌ರವರು ೫ ಲಕ್ಷ ರೂಪಾಯಿ ಎಂದು ಹೇಳಿದ್ದಾರೆ. ಈ ವ್ಯತ್ಯಾಸ ಏಕೆ ಎನ್ನತಕ್ಕದ್ದನ್ನು ತಿಳಿಸಬೇಕೆಂದು ಕೇಳಿದಿರಿ, ಈಗ ನನಗೆ ಅತ್ಯಲ್ಪ ಕಾಲದಲ್ಲಿ ಮಾಹಿತಿಯನ್ನು ತರಿಸಿದ ಮೇಲೆ ಇವೆರಡೂ ನಿಜ ಎಂದು ಗೊತ್ತಾಗಿದೆ ಇದರಲ್ಲಿ ವಿಜಿಲೆನ್ಸ್ ಕಮಿಷನ್ನಿನವರು ಮೊದಲು ಟೆಂಡರ್ ಕ್ವಾಂಟಿಟಿ ಎಷ್ಟು ಇದೆ, ಇದರ ಮೇಲೆ ೧೦ ಪರ್ಸೆಂಟ್ ಹೆಚ್ಚು ಹಾಕಿ ಲೆಕ್ಕ ಹಾಕಿ ೩೪ ಲಕ್ಷ ರೂಪಾಯಿ ಎಂದು ವರದಿ ಕೊಟ್ಟರು. On further examination the Vigilance

Commission found that the schedule of rate is not applicable and the date rates are not to be paid for the work done as the actual description of the work does not tally with the description of the items of work that is prescribed. ಡಿಸ್ಕ್ರಿಪ್ಷನ್ ಆಫ್ ದಿ ವರ್ಕ್ಸ್‌ಗೂ ಎಸ್. ಆರ್. ರೇಟ್ ಐಟಂಗೂ ಟ್ಯಾಲಿ ಆಗಿಲ್ಲ ಆ ಐಟಂ ಬೇರೆ, ಈ ಐಟಂ ಬೇರೆ ಅದನ್ನು ಕಾನೂನು ಇಲಾಖೆಗೆ ಕಳುಹಿಸಿಕೊಟ್ಟರು. ಈ ಮಧ್ಯೆ ಚೀಫ್ ಇಂಜಿನಿಯರ್ ವಿಚಾರ ಮಾಡಿದ್ದರಲ್ಲಿ, ಅವರು ಸ್ಪೆಸಿಫಿಕೇಷನ್ ಲೆಕ್ಕದ ಮೇಲೆ ೫ ಲಕ್ಷ ಆಗುತ್ತದೆ ಎಂದು ಕಳುಹಿಸಿಕೊಟ್ಟರು. ಎಕ್ಸೆಸ್ ಡ್ರಾನ್ ಇನ್ ಬಳ್ಳಾರಿ ಬಗ್ಗೆ ಲೆಟರ್ ಆಫ್ ಕ್ರೆಡಿಟ್ ಮೇಲೆ ಎಷ್ಟು ಡ್ರಾ ಮಾಡಿದ್ದಾರೆ, ಅದರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ಕೇಳಿದ್ದೀರಿ. ಶ್ರೀ ಕೃಷ್ಣಪ್ಪನವರೂ ಕೂಡ ಇದರ ಬಗ್ಗೆ ಹಿಂದೆ ಪ್ರಸ್ತಾಪ ಮಾಡಿದ್ದಾರೆ. ಅವರಿಗೂ ಕೂಡ ಈಗ ಉತ್ತರ ಕೊಡುತ್ತೇನೆ. ಲೆಟರ್ ಆಫ್ ಕ್ರೆಡಿಟ್ ಕೊಟ್ಟಿರುವುದು ಒಂಬತ್ತುವರೆ ಲಕ್ಷ ರೂಪಾಯಿಗೆ. ಖರ್ಚಾಗಿರುವುದು ೨೫.೮೬ ಲಕ್ಷ ರೂಪಾಯಿ, ಎಕ್ಸೆಸ್ ೧೬ ಲಕ್ಷ ರೂಪಾಯಿ ಎಂದು ವಿಜಿಲೆನ್ಸ್ ಕಮಿಷನ್ನಿನವರು ಕಳುಹಿಸಿದ್ದಾರೆ. They are seized of the matters. ೧,೮೩೫ ಬಿಲ್‌ಗಳು ಪಾಸ್ ಆಗಿವೆ. ವಿಜಿಲೆನ್ಸ್ ಕಮಿಷನ್ ರಿಪೋರ್ಟ್ ಬಂದಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಒಂದೋ ಎರಡೋ ವಿಜಿಲೆನ್ ಕಮಿಷನ್‌ಗೆ ಹಾಕುವುದು.

ಶ್ರೀ ಹೆಚ್. ಎಂ ಚನ್ನಬಸಪ್ಪ.—ಒಂದಲ್ಲ, ಎರಡಲ್ಲ. ಹತ್ತಾದರೂ, ಸರಿಪಡಿಸಬೇಕು ನನ್ನ ಮೇಲೆ ಎಷ್ಟು ಜವಾಬ್ದಾರಿ ಇದೆಯೋ ತಮ್ಮ ಮೇಲೂ ಅಷ್ಟೇ ಜವಾಬ್ದಾರಿ ಇದೆ ಎಂದು ಕಳಕಳಿಯಿಂದ ವಿನಂತಿ ಮಾಡುತ್ತೇನೆ. ಅಡ್ಮಿನಿಸ್ಟ್ರೇಷನ್ ಮಾರಿಫೈ ಆಗಬೇಕು ಎಂಬುದನ್ನು ನಾನು ಒಪ್ಪುತ್ತೇನೆ.

ಇನ್ನು ಪ್ರಮೋಷನ್ ಆಫ್ ಡ್ರಾಫ್ಟ್‌ಮೆನ್ ವಿಚಾರ ಹೇಳಿದ್ದಾರೆ. ಡ್ರಾಫ್ಟ್‌ಮೆನ್‌ಗೆ ಪ್ರೊಮೋಷನ್ ಅವಕಾಶ ಇರಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ಯಾವ ರೀತಿ ಮಾಡಬೇಕು ಎಂದು ಬೋರ್ಡ್ ಆಫ್ ಚೀಫ್ ಇಂಜಿನಿಯರ್ಸ್‌ನ್ನು ಕೇಳಿದೆವು. The Board of Chief Engineers have recommended that the Draftmen holding three year in the cadre of Junior Engineers. Deiploma be included. ಮಧ್ಯವರ್ತಿ ಗ್ರೇಡ್ ಮಾಡುವುದು ಸಾಧ್ಯವೇ ಎಂಬುದನ್ನು ಸರಕಾರ ಪರಿಶೀಲನ ಮಾಡುತ್ತಿದೆ The two things are before Government and we will take appropriate action.

ಆಮೇಲೆ ವರ್ಕ್ಸ್‌ಚಾರ್ಜ್ ಎಸ್ಟಾಬ್ಲಿಷ್‌ಮೆಂಟ್ ವಿಷಯದ ಬಗ್ಗೆ ಅನೇಕ ಸಾರಿ ಈ ಸಭೆಯಲ್ಲಿ ಹೇಳಿದ್ದಾರೆ. ನನಗೆ ಅಸಾಧಾರಣೆ ಇದೆ ಎಂದು ನನ್ನ ಮೇಲೆ ಆರೋಪಣೆ ಮಾಡಿದ್ದಾರೆ. ಕೆಳಮಟ್ಟದಲ್ಲಿ ಕೆಲಸ ಮಾಡುವವರಿಗೆ ಅನಾನುಕೂಲ ಮಾಡಿದರೆ ಪಾಪವಾಗುತ್ತದೆ ಎನ್ನುವ ಭಾವನೆಯುಳ್ಳವನು ನಾನು. ಈ ವರ್ಕ್ ಚಾರ್ಜ್ ಎಸ್ಟಾಬ್ಲಿಷ್‌ಮೆಂಟಿನಲ್ಲಿ ಒಂದು ಕಷ್ಟ ಇದೆ, ಯಾವುದೋ ವರ್ಕ್‌ಚಾರ್ಜ್ ಮಾಡಿ ತೆಗೆದುಕೊಂಡಿರುತ್ತಾರೆ, ಅವರ ಕೆಲಸ ಮುಗಿದು ಹೋದಮೇಲೆ ಅವರನ್ನು ಏನು ಮಾಡಬೇಕೆಂಬ ಪ್ರಶ್ನೆ ಉದ್ಭವವಾಗುತ್ತದೆ. ಅವರು ಯಾವುದೋ ವರ್ಕ್‌ನಲ್ಲಿ ಟ್ರೇನ್ ಆಗಿರುತ್ತಾರೆ ಟ್ರೈನಿಂಗ್ ಇರತಕ್ಕ ಕೆಲಸಗಳು ಸಿಕ್ಕಿದರೆ ಅವರನ್ನು ತಕ್ಷಣ ಅಲ್ಲಿಗೆ ಕಳುಹಿಸಬಹುದು. ಇಲ್ಲದೇ ಹೋದರೆ, ಅದು ಕಷ್ಟವಾಗುತ್ತದೆ. ಹಾಗೂ ಹೀಗೂ ವರ್ಕ್‌ಚಾರ್ಜ್ ಎಸ್ಟಾಬ್ಲಿಷ್‌ಮೆಂಟಿನಲ್ಲಿ ೧೫ ಸಾವಿರ ಜನ ಆಗಿದ್ದಾರೆ. ಈ ೧೫ ಸಾವಿರ ಜನಗಳನ್ನು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ಅಬ್ಸಾರ್ಬ್ ಮಾಡಿ ಎಂದರೆ ಈ ಸಭೆಯ ಮಾನ್ಯ ಸದಸ್ಯರೇನೋ ಒಪ್ಪುತ್ತಾರೆ ಆದರೆ ಸರ್ಕಾರದವರು ಇದನ್ನು ಒಪ್ಪುವುದು ಕಷ್ಟವಾಗುತ್ತದೆ. ಆದರೆ ಈ ಟೆಂಪರರಿ ವರ್ಕರ್ಸ್‌ಗೆ ಕೆಲವು ಸವಲತ್ತುಗಳನ್ನು ಕೊಡುವುದು ಅವಶ್ಯಕ. ಅವರಿಗೆ ಕೆಲವು ಸೆಕ್ಯುರಿಟಿ, ಮತ್ತು ಏನೇನು ಸವಲತ್ತುಗಳನ್ನು ಕೊಡಬಹುದು ಎನ್ನುವುದನ್ನು ಈಗ ಇರತಕ್ಕ ಸನ್ನಿವೇಶದಲ್ಲಿ ಉದಾರತೆಯಿಂದ ಪರಿಶೀಲನೆ ಮಾಡುತ್ತೇನೆ. ಈ ಬಗ್ಗೆ ಸ್ವಲ್ಪ ಉದಾರವಾಗಿ ಇರಬೇಕು ಎನ್ನತಕ್ಕಂಥಾದ್ದು ನನ್ನ ಮನಸ್ಸು ಇದೆ. ಆದ್ದರಿಂದ ಅನೇಕ ಸವಲತ್ತುಗಳನ್ನು ಪಟ್ಟಿ ಮಾಡಿ ಅವರು ಕೇಳುತ್ತಿದ್ದಾರೆ. ಅವುಗಳನ್ನು ಪರೀಕ್ಷೆ ಮಾಡಿ ಶಿಫಾರಸ್ಸು ಮಾಡಬೇಕೆಂದು ಬೋರ್ಡ್ ಆಫ್ ಚೀಫ್ ಇಂಜಿನಿಯರಿಗೆ ಕೊಡಲಾಗಿತ್ತು ಅವರಿಂದ ಶಿಫಾರಸ್ಸು ಬಂದಿರಬಹುದು. ಅವುಗಳಲ್ಲಿ ಎಷ್ಟು ಮಾಡುವುದಕ್ಕೆ ಸಾಧ್ಯ ಅದನ್ನು ಸಹಾನುಭೂತಿಯಿಂದ ಮಾಡುವುಕ್ಕೆ ಅಡ್ಡಿ ಇಲ್ಲ ಎಂದು ಇಷ್ಟು ಮಾತ್ರ ಹೇಳುತ್ತೇನೆ.

(ಶ್ರೀ ಹೆಚ್. ಎಂ. ಚನ್ನಬಸಪ್ಪ)

11-00 A.M.

ಡಿಪ್ಲೊಮಾ ಹೋಲ್ಡರ್ಸ್ ಪ್ರಮೋಷನ್ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ One-tenth of the total Permanent strength ಸೆಲೆಕ್ಷನ್ ಗ್ರೇಡ್ ಮಾಡಬೇಕೆಂದು ಬೋರ್ಡ್ ಆಫ್ ಚೀಫ್ ಇಂಜಿನಿಯರ್ಸ್ ಒಂದು ಶಿಫಾರಸ್ಸನ್ನು ಮಾಡಿದ್ದಾರೆ. ಅದನ್ನು ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ. ಅವರು ೩ ಸಾವಿರ ಜನ ೪ ಸಾವಿರ ಜನ ಇದ್ದಾರೆ. ಅವರಿಗೆ ಪ್ರಮೋಷನಲ್ ಆಪರ್‌ಚ್ಯುನಿಟಿ ಕೊಡಬೇಕು. ಆದರೆ ಅವರನ್ನು ಎಗ್ಜಿಕ್ಯುಟೀವ್ ಇಂಜನಿಯರುಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಅಸಿಸ್ಟೆಂಟ್ ಇಂಜನಿಯರನ್ನೂ ಮಾಡುವುದು ಕಷ್ಟ. ಇವೆಲ್ಲವನ್ನೂ ದೃಷ್ಟಿಯಲ್ಲಿಟ್ಟು ಕೊಂಡು ಎಷ್ಟರಮಟ್ಟಿಗೆ ಅವರಿಗೆ ಸಹಾನುಭೂತಿಯನ್ನು ತೋರಿಸಬಹುದು ಎಂಬುದನ್ನು ಯೋಚನೆ ಮಾಡುತ್ತೇನೆ.

ಈಗ ನಮ್ಮಲ್ಲಿ ೧೭ ಜನ ಚೀಫ್ ಇಂಜನಿಯರುಗಳು ಇದ್ದಾರೆ. ಇದರಲ್ಲಿ ೧೦ ಜನ ಮಾತ್ರ ಪಿ.ಡಬ್ಲ್ಯೂ. ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ೭ ಜನ ಡೆಪ್ಯುಟೇಷನ್ ಮೇಲೆ ಕೆಲಸ ಮಾಡುತ್ತಿದ್ದಾರೆ. ಬೆಂಗಳೂರು ಸಿಟಿ ಕಾರ್ಪೊರೇಷನ್‌ನಲ್ಲಿ ಒಬ್ಬರು, ಮಂಗಳೂರು ಹಾರ್ಬರ್ ಪ್ರಾಜೆಕ್ಟ್‌ನಲ್ಲಿ ಒಬ್ಬರು, ಮೈಸೂರು ಹೌಸಿಂಗ್ ಬೋರ್ಡಿನಲ್ಲಿ ಒಬ್ಬರು ಬೆಂಗಳೂರು ವಾಟರ್ ಸಪ್ಲೈ ಸೀವರೇಜ್ ಬೋರ್ಡಿನಲ್ಲಿ ಒಬ್ಬರು, ವಿಜಿಲೆನ್ಸ್ ಕಮಿಷನ್‌ನಲ್ಲಿ ಒಬ್ಬರು, ಮೈಸೂರು ಪವರ್ ಕಾರ್ಪೊರೇಷನ್‌ನಲ್ಲಿ ಒಬ್ಬರು, ಡಬ್ಲ್ಯೂ ಆರ್.ಡಿ.ಓ.ನಲ್ಲಿ ಒಬ್ಬರು ಸಿ.ಬಿ.ಸಿ. ಅಂಡ್ ಬಿ. ಸೌತ್ ಮೈನರ್ ಇರಿಗೇಶನ್ ಮೇಜರ್ ಇರಿಗೇಷನ್ ಸೌತ್ ಅಂಡ್ ನಾರ್ತ್ ಒಬ್ಬರು ತುಂಗಭದ್ರಾ ಬೋರ್ಡ್‌ನಲ್ಲಿ ಒಬ್ಬರು, ಜಾಯಿಂಟ್ ಸೆಕ್ರೆಟರಿ ಪ್ಲಾನಿಂಗ್ ಒಬ್ಬರು ನ್ಯಾಷನಲ್ ಹೈವೇ ಒಬ್ಬರು, ಅಡಿಷನಲ್ ಸೆಕ್ರೆಟರಿ ಒಬ್ಬರು ಹೀಗೆ ಚೀಫ್ ಇಂಜಿನಿಯರುಗಳು ಕೆಲಸ ಮಾಡುತ್ತಿದ್ದಾರೆ. ಇದನ್ನು ಯಾವರೀತಿ ಆರ್ಗನೈಜ್ ಮಾಡಬೇಕೆಂಬುದನ್ನು ಮಾನ್ಯ ಸದಸ್ಯರು ತಿಳಿಸಬೇಕು. ವರ್ಕ್‌ಲೋಡಿಗೆ ತಕ್ಕಂತೆ ಕೆಲಸಗಳು ಆಗುತ್ತಿವೆ. ಈಗ ಇರತಕ್ಕ ಇಂಜಿನಿಯರುಗಳನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು ಎನ್ನುವ ವಿಷಯದಲ್ಲಿ ಯಾರು ಯಾವತರಹ ಸಲಹೆ ಕೊಟ್ಟರೂ ಕೂಡ ನಾನು ಅದನ್ನು ವಿಶ್ವಾಸದಿಂದ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಗಳಿಗೆ ಸಿದ್ದನ ವ್ಯವಹಾರ ಬೇಡಿ. ಇದ್ದದ್ದು ಹೇಳಿ ತಾವು ಅಧಿಕಾರಕ್ಕೆ ಬಂದ ಮೇಲೆ ಬಡ್ಜೆಟ್ಟಿನಲ್ಲಿ ಇನ್‌ಕ್ಲೂಡ್ ಆಗಿರುವ ಕೆಲಸಗಳ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಅನ್ಯಾಯವಾಗಿದೆ. ಈ ಬಗ್ಗೆ ಮುಂದೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—೧೯೭೧, ೧೯೭೨, ೧೯೭೩-೭೪ ರಲ್ಲಿ ಹಳೆಯ ಮೈಸೂರಿಗೆ ಎಷ್ಟೆಷ್ಟು ಖರ್ಚಾಗಿದೆ ಎಂಬುದನ್ನು ನಾನು ಮೊದಲೇ ತಿಳಿಸಿದ್ದೇನೆ. ಹಳೆಯ ಮೈಸೂರು ಪ್ರಾಂತ್ಯದಲ್ಲಿ ಕೆರೆ, ಕಟ್ಟೆ ಮತ್ತು ರಸ್ತೆಗಳ ಬಗ್ಗೆ ಸ್ವಲ್ಪ ಅನಾದರಣೆ ಇದೆ ಎನ್ನುವ ಭಾವನೆ ಇದೆ. ಆ ಭಾವನೆಗೆ ಸಾಕಷ್ಟು ಕಾರಣಗಳು ಇವೆ ಎಂಬುದನ್ನು ಒಪ್ಪಿಕೊಂಡಿದ್ದೇನೆ. ಇದರ ಮೇಲೆ ಏನು ಮಾಡಬೇಕೆಂಬುದನ್ನು ಊಹೆ ಮಾಡಬಹುದು.

ಮತ್ತು ನಿನ್ನೆಯ ದಿವಸ ಅನೇಕ ಮಾನ್ಯ ಸದಸ್ಯರು ಉಗ್ರವಾದ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಅನೇಕರು ನಾನು ನಿಸ್ಸಹಾಯಕನಾಗಿ ಕುಳಿತುಕೊಂಡಿದ್ದೇನೆ; ಕೆಲವರು ನಿಮ್ಮ ಕೋವಿಗೆ ಮದ್ದೇ ಕಂಡಿಲ್ಲ; ಕೆಲವರು ನೀವು ಹೆಸರಿಗೆ ಮಾತ್ರ ಮಂತ್ರಿಗಳಾಗಿದ್ದೀರಿ; ದುರಾಚಾರಿಗಳನ್ನು ಮೆಟ್ಟುವುದಕ್ಕೆ ನಿಮಗೆ ಧೈರ್ಯವಿಲ್ಲ; ಮತ್ತು ರಾಜಕಾರಣಿಗಳ ಕೈಯಲ್ಲಿ ಸಿಕ್ಕಿಕೊಂಡಿದ್ದೀರಿ ಇತ್ಯಾದಿ ಇತ್ಯಾದಿ ನಾನಾರೀತಿಯಲ್ಲಿ ಅವರವರಿಗೆ ಯಾವರೀತಿ ಭಾವನೆ ಬರುತ್ತದೆಯೋ ಆರೀತಿ ಹೇಳಿದ್ದಾರೆ. ಅವರು ಆ ರೀತಿ ಹೇಳಿದರು ಎಂದು ನಾನು ಆಕ್ಷೇಪಣೆ ಮಾಡುತ್ತಿಲ್ಲ. ಒಂದುವೇಳೆ ಅವರು ಆ ರೀತಿ ಹೇಳಿದರೂ ಕೂಡ ಅದರಲ್ಲಿ ಏನು ಸತ್ಯಾಂಶ ಇದೆ ಎಂಬುದನ್ನು ಹುಡುಕಿ ನೋಡುವವನು ನಾನು. ಶ್ರೀಮಾನ್ ಕೆ ಎಚ್. ಹನುಮೇಗೌಡರು ಸ್ವಲ್ಪ ಉತ್ಸಾಹದಿಂದ ರಾಜೀನಾಮೆ ಕೊಡಿ ಎಂದು ಹೇಳಿದರು. ಆ ರೀತಿ ಕೊಡುವುದರಲ್ಲಿ ನನ್ನದೇನೂ ಅಡ್ಡಿ ಇಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನೋಡಿ ಮಾಡಿದರೂ ನೀವು ರಾಜೀನಾಮೆ ಕೊಡುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ನಾನು ರಾಜೀನಾಮೆಯನ್ನು ಕೊಡುವುದರಿಂದ ಎಲ್ಲಾ ಸಮಸ್ಯೆಗಳೂ ಬಗೆಹರಿದು ದೇಶಕ್ಕೆ ಒಳ್ಳೆಯದಾಗುತ್ತದೆ ಎನ್ನುವ ಕಾಲದಲ್ಲಿ ನಾನು ರಾಜೀನಾಮೆಯನ್ನು

ಕೊಟ್ಟುಬಿಡುತ್ತೇನೆ ಮಾನ್ಯ ಸದಸ್ಯರು ಕೆಲಸಕಾರ್ಯಗಳು ಆಗಿಲ್ಲ ಸ್ವಲ್ಪ ಕೆಲಸಗಳು ಆಗಿದ್ದರೂ ಅವು ಪ್ರಾಮಾಣಿಕತೆಯಿಂದ ಆಗಿಲ್ಲ ಎನ್ನುವ ಅಂಶವನ್ನು ಹೇಳಿದ್ದಾರೆ. ಇದು ಅವರ ಆತುರ ಎಷ್ಟಿದೆ ಎಂಬುದನ್ನು ತೋರಿಸುತ್ತರೆ. ಆತುರತೆಯ ಒಂದು ಮನೋವೇಗದಿಂದ ಅವರು ಆ ರೀತಿ ಹೇಳಿದ್ದಾರೆ ಎಂದು ನಾನು ಭಾವನೆ ಮಾಡುತ್ತೇನೆ ವಾಸ್ತವಿಕವಾಗಿ ಅವರ ಅಭಿಪ್ರಾಯ ನಿಜವಾದ ಅಭಿಪ್ರಾಯ ಎಂದು ನಾನು ಭಾವಿಸುವುದಿಲ್ಲ ಈ ಸಂದರ್ಭದಲ್ಲಿ ನಾನು ತಮಗೆ ಸ್ವಲ್ಪ ಹಿನ್ನೆಲೆಯನ್ನು ಕೊಡಬೇಕು. ೧೯೫೫ ರಿಂದ ೧೯೬೨ರ ವರೆಗೆ ನಾನು ಪಬ್ಲಿಕ್ ವರ್ಕ್ಸ್ ಮತ್ತು ಗೃಹ ಮಂತ್ರಿಯಾಗಿದ್ದಾಗ ಬಹಳ ಜನ ನನ್ನ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕೋಸ್ಕರ ನಾನು ಅವರಿಗೆ ಕೃತಜ್ಞನಾಗಿದ್ದೇನೆ ನಿಜ ನನ್ನದು ಸ್ವಲ್ಪ ಬಿಗಿ ಮುಷ್ಟಿ. ಅಧಿಕಾರದಲ್ಲಿದ್ದರೂ ಬಿಗಿ ಮುಷ್ಟಿ ಅಧಿಕಾರದಲ್ಲಿಲ್ಲದಿದ್ದರೂ ಅಷ್ಟೆ ಬಿಗಿ ಮುಷ್ಟಿ. ಬಿಗಿಮುಷ್ಟಿಯಿಂದ ಅಸಂತುಷ್ಟರಾಗತಕ್ಕ ಜನರನ್ನು ರೂಲ್ ಔಟ್ ಮಾಡುವು ದಕ್ಕಾಗುವುದಿಲ್ಲ. ಅವರೆಲ್ಲರನ್ನೂ ಪ್ರೇಮದಿಂದ ಆಲಿಂಗನ ಮಾಡುತ್ತೇನೆ ಎಂದರೂ ಅವರು ಬರುವುದಿಲ್ಲ ಅವರೆಲ್ಲರೂ ಕೂಡ ಏನಾದರೂ ಮಾಡಿ ಸಡಿಲ ಮಾಡೋಣ ಎನ್ನುವ ಯೋಚನೆ ಮಾಡುವ ಜನ ಇದ್ದಾರೆ. ಅಧಿಕಾರದಲ್ಲಿ ಕಟ್ಟು ನಿಟ್ಟಾಗಿದ್ದರೆ ಇವೆಲ್ಲಾ ಆಗುತ್ತವೆ. ೧೯೫೮ ರಿಂದ ೬೨ರ ವರೆಗೆ ಬಂದು ವಾತಾವರಣ ಇತ್ತು ಗುಣಕ್ಕೆ ಬೆಲೆ ಕೊಡತಕ್ಕ ಜನಾಭಿಪ್ರಾಯ ಇತ್ತು ಇವೊತ್ತಿನ ಪರಿಸ್ಥಿತಿಗೂ ಅವೊತ್ತಿನ ಪರಿಸ್ಥಿತಿಗೂ ವ್ಯತ್ಯಾಸ ಇದೆ. ದುಷ್ಟ ಶಕ್ತಿಗಳನ್ನು ಖಂಡಿಸತಕ್ಕ ಪ್ರಜಾ ನೀತಿ ಅಂದು ಇತ್ತು. ಆ ಶಕ್ತಿ ಇವೊತ್ತು ಇಲ್ಲ. ಇವೊತ್ತು ೨-೩ ವಿಷಯಗಳನ್ನು ಜ್ಞಾಪಿಸಿಕೊಳ್ಳಬೇಕಾಗಿದೆ ಅದೇನೆಂದರೆ ನೀತಿಯ ವಿಷಯದಲ್ಲಿ ಭಿನ್ನಾಭಿಪ್ರಾಯ ಬಂದ ಕಾಲದಲ್ಲಿ ಎರಡು ಸಾರಿ ನಾನು ಮಂತ್ರಿ ಪದವಿಗೆ ರಾಜೀನಾಮೆ ಯನ್ನು ಕೊಟ್ಟಿದ್ದೇನೆ. ಅದನ್ನು ತಾವು ಇಲ್ಲಿ ಸ್ಮರಿಸಿಕೊಳ್ಳಬಹುದು. ಒಂದು ಕಾಲದಲ್ಲಿ ಇಬ್ಬರು ಚೀಫ್ ಇಂಜನಿಯರುಗಳನ್ನು ಸಸ್ಪೆಷನ್ ಮಾಡುವ ವಿಚಾರದಲ್ಲಿ ಮಂತ್ರಿ ಪದವಿಗೆ ರಾಜೀನಾಮೆಯನ್ನು ಕೊಟ್ಟಿದ್ದೇನೆ. ಇನ್ನೊಂದು ಸಾರಿ ಕೃಷ್ಣಾ ನದಿಯ ನೀರಿನ ವ್ಯವಹಾರ ನಡೆವ ಕಾಲದಲ್ಲಿ ಅಧ್ಯಕ್ಷರಿಗೂ ನನಗೂ ಭಿನ್ನಾಭಿಪ್ರಾಯ ಬಂದು ಪೋರ್ಟ್‌ಫೋಲಿಯೋವನ್ನು ಬದಲಾವಣೆ ಮಾಡಿದ್ದು ಒಂದು ದಿವಸ. ದೇಶದ ಹಿತದೃಷ್ಟಿಯಿಂದ ಕೊಡಬೇಕಾಗಿ ಬಂತು. ಆದ್ದರಿಂದ ನೀವು ಹೇಳುವ ರೀತಿಯಲ್ಲಿ ನೀವು ತಿಳಿದುಕೊಂಡಿರುವ ರೀತಿಯಲ್ಲಿ ನಾನು ಇಳಿ ಕೇಳಿತಿದ್ದೇನೆಂದು ತಿಳಿದಿದ್ದರೆ ಅದು ತಪ್ಪು. ಒಂದು ವಿಚಾರ ತಮಗೆ ಚೆನ್ನಾಗಿ ಗೊತ್ತಿದೆ. ಹಿಂದೆ ಪಾನ ನಿರೋಧ ಯಶಸ್ವಿಯಾಗಿ ಮಾಡುವ ಕಾಲದಲ್ಲಿ ಕಳ್ಳಬಟ್ಟಿ ಸಾರಾಯಿಯ ಕುಬೇರರಿದ್ದರು. ಅಂತಹವರ ಕೂಡ ಎದೆಗೊಟ್ಟು ಕೆಲಸಮಾಡಿದ್ದೇನೆ. ಆಗ ಮಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ಯಲ್ಲಿಯೂ ಒಂದು ತೊಟ್ಟು ಕಳ್ಳಭಟ್ಟಿ ಸಾರಾಯಿ ಮತ್ತು ನಿಜವಾದ ಸಾರಾಯಿ ಸಿಗದಂತೆ ಮಾಡಿದ್ದನ್ನು ತಾವು ನೋಡಿದ್ದೀರಿ. ಇದು ಸುಳ್ಳೇ ? ಇದೇನೂ ಮಾಯ, ಮಂತ್ರವಲ್ಲ ಹಿಂದೆ ಒಂದು ಸಾರಿ ಲಂಚಗುಳಿತನದ ಒಂದು ಆರೋಪಣೆಗಾಗಿ ೧೨ ಜನ ಪೋಲೀಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಅಲ್ಲಿ ಅದನ್ನು ಒಂದು ಹತೋಟಿಗೆ ತಂದುದು ತಮಗೆಲ್ಲರಿಗೂ ಚೆನ್ನಾಗಿ ಜ್ಞಾಪಕವಿರಬೇಕು. ೬೦-೭೦ ಜನ ಮೇಲಧಿಕಾರಿಗಳು ಆಚಾರ ಹೀನರಾಗಿ ದ್ದುದರಿಂದ ಅವರನ್ನು ಏಕ ಕಾಲದಲ್ಲಿ ನಿವೃತ್ತಿಮಾಡಿ ಈ ರಾಜ್ಯದಲ್ಲಿ ಪ್ರಾಮಾಣಿಕ ಸರ್ಕಾರ ಕೊಡಬೇಕಾದುದು ಅವಶ್ಯಕವೆಂದು ತಿಳಿದು ನನ್ನ ಜೀವನವನ್ನೇ ಒತ್ತೆ ಇಟ್ಟಹಾಗೆ ಕೆಲಸಮಾಡಿದ್ದೇನೆ. ಆಗ ಎಷ್ಟೋ ಜನರು ನನ್ನನ್ನು ಕೊಲೆ ಮಾಡಬೇಕೆಂದು ಯೋಚನೆ ಮಾಡಿದ್ದರು. ಆಗ ಇಷ್ಟೊಂದು ದಿಟ್ಟತನದಿಂದ ಹಾಗೂ ಧೈರ್ಯದಿಂದ ಕೆಲಸಮಾಡಿದ್ದರೂ ಇವತ್ತು ನನ್ನನ್ನು ಏಕೆ ಸುಮ್ಮನೆ ಇದ್ದೀರಿ ಎನ್ನುವುದು ನೀವು ಕೇಳುವ ಪ್ರಶ್ನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಬೋಡಮ್ಮ ತುರುಬು ನೆನೆಸಿಕೊಂಡಂತಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಸಭೆಯ ಆಹ್ಲಾದಕ್ಕಾಗಿ ನಮ್ಮ ಮಾನ್ಯ ಶ್ರೀ ಪುಟ್ಟಸ್ವಾಮಿ ಯವರು ಆಗಾಗ್ಗೆ ಆ ರೀತಿಯಾಗಿ ಮಾತನಾಡುತ್ತಾರೆ. ಅದಿರಲಿ ಕಾರಣವಿಷ್ಟೇ. ಅವತ್ತಿನ ಪರಿಸ್ಥಿತಿ ಇವತ್ತು ಇಲ್ಲವೆಂದು ನಾನು ಮೊದಲೇ ಹೇಳಿದೆ. ಅವತ್ತಿನ ಜನರು ಇವತ್ತು ಇಲ್ಲ ಅವತ್ತು ಭ್ರಷ್ಟಾಚಾರವನ್ನು ಮಟ್ಟ ಹಾಕಬೇಕೆಂದು ಹೇಳುವ ಜನ ಹಾಗೂ ಅದಕ್ಕೆ ಪ್ರೋತ್ಸಾಹ ಕೊಡುವ ಜನರು ಇದ್ದರು ಪ್ರಜಾಭಿಪ್ರಾಯವೂ ಆ ರೀತಿಯಾಗಿ ಇತ್ತು. ವಾತಾವರಣವೂ ಸಹ ಆ ರೀತಿಯಾ ಗಿಯೇ ಇತ್ತು ಇನ್ನೊಬ್ಬ ಬೆರಳು ಎತ್ತಿ ತೋರಿಸುವಂತೆ ಏನೂ ಇರಲಿಲ್ಲ. ಆ ಕಾಲದಲ್ಲಿ ಏನೇ ಕ್ರಮಗಳನ್ನು ತೆಗೆದುಕೊಂಡರೂ, ನೀನು ಏಕೆ ಆ ರೀತಿಯಾಗಿ ಕ್ರಮ ತೆಗೆದುಕೊಂಡೆ ಎಂಬುದಾಗಿ ಕೇಳುತ್ತಿರಲಿಲ್ಲ. ತೆಗೆದುಕೊಂಡ ಕ್ರಮವನ್ನು ಭೇಷ್ ಎಂದು ಮೆಚ್ಚುವಂತಹ ಜನರಿದ್ದರು. ಇವತ್ತು ಏನಾಗಿದೆಯೆಂದರೆ, ದುಷ್ಟಶಕ್ತಿಗಳು ನಾನಾ ರೂಪದಲ್ಲಿ ಬರುವಂತಾಗಿವೆ. ಆ ದುಷ್ಟಶಕ್ತಿಗಳು ಎಲ್ಲೋ ಅಲ್ಪಸ್ವಲ್ಪ ಹಿಂದೆಯೂ ಇದ್ದರೂ ಇವತ್ತಿನಷ್ಟು ಹೆಚ್ಚಾಗಿ ಇರಲಿಲ್ಲ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ದುಷ್ಟಶಕ್ತಿಗಳೆಂದರೇನು, ಅವರು ಯಾರ್‍ಯಾರು ಎಂದು ಹೇಳಬೇಕು.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಅದನ್ನು ಡಿಕ್ಷನರಿಯಲ್ಲಿ ನೋಡಬೇಕು.

ಹಿಂದೆ ನಾಜಿ ಗೌರ್ನಮೆಂಟ್ ಇದ್ದಾಗ ಗೋಬೆಲ್ಸ್ ಎನ್ನುವವನು ಅಪಪ್ರಚಾರ ಮಾಡುತ್ತಾ ಇದ್ದ. ಅಪಪ್ರಚಾರ ಮಾಡತಕ್ಕ ಆ ಒಂದು ಶಕ್ತಿ ಅವನಲ್ಲಿದ್ದುದರಿಂದಲೇ ಅವನ ಕೈಮೇಲಾಗಿತ್ತು. ಅದರಂತೆ ಈಗ ಇಲ್ಲಿಯೂ ಇನ್ನೊಂದು ಹೊಸ ಕ್ಲಾಸ್ ಅಂದರೆ ಒಂದು ಹೊಸ ಶಕ್ತಿ, ಪಂಗಡ ಹುಟ್ಟಿದೆ. ಅದು ಈಗ ಇಡೀ ದೇಶದಲ್ಲಿಯೇ ಆಗಿದೆ. ಕೇವಲ ನಮ್ಮ ರಾಜ್ಯದಲ್ಲಿ ಮಾತ್ರವೇ ಅಲ್ಲ. ದುಡಿಯದೆ ಯಾವ ವೃತ್ತಿಯೂ ಇಲ್ಲದೆ, ಪರಸತಿ, ಪರಧನ ಪರದೇಶೀಯ ಮದ್ಯಗಳಿಂದ ವಿಲಾಸ ಜೀವನ ಮಾಡುವವರು ಭೋಗ ಜೀವನ ಮಾಡುವವರು, ಸುಖಜೀವನ ಮಾಡುವವರು, ಭೋಗ ಜೀವನದಿಂದ ವಿಲಾಸಿ ಜೀವನ ನಡೆಸಿಕೊಂಡು ಹೋಗುವವರು ಈಗ ಹೆಚ್ಚಿಗೆ ಇದ್ದಾರೆ. ಇದು ಈಗ ಇಡೀ ಭರತ ಖಂಡದಲ್ಲಿಯೇ ನಡೆಯುತ್ತಿದೆ. ಇದು ಕೇವಲ ನಮ್ಮ ಮೈಸೂರಿನಲ್ಲಿ ಮಾತ್ರವೇ ಅಲ್ಲ. ಮೈಸೂರಿನಲ್ಲಿಯೂ ಅಂತಹ ಗುಂಪುಗಳಿವೆ. ಒಂದೊಂದು ವೇಳೆ ಅವರವರಿಗೆ ಅನುಕೂಲಗಳು ದೊರೆತಂತೆಲ್ಲಾ ಸಂಯುಕ್ತ ಗುಂಪುಗಳೂ ಸಹ ಆಗುತ್ತವೆ. ಆದರೆ ಅವರಿಗೆ ಅನಾನುಕೂಲಗಳು ಆದಾಗ ಬೇರೆ ಬೇರೆ ಗುಂಪುಗಳೂ ಸಹ ಆಗುತ್ತವೆ. ಹಿಂದೆ ಬಸವಣ್ಣನವರು 'ಛಲ ಬೇಕು, ಛಲ ಬೇಕು ಪರಧನವನೊಲ್ಲದ, ಪರಸತಿ ಯನೊಲ್ಲದ' ಎಂಬುದಾಗಿ ಹೇಳಿದ್ದಾರೆ. ಅದು ಈಗ ಏನಾಗಿದೆಯೆಂದರೆ, 'ಛಲ ಬೇಕು, ಛಲ ಬೇಕು, ಪರಸತಿಯೆ ಬೇಕು, ಪರಧನವೇ ಬೇಕು, ಪರದೇಶೀಯ ಮದ್ಯವೇ ಬೇಕು' ಎಂದು ಹೇಳುವ ಚಟ ಇವತ್ತು ಇವರದಾಗಿದೆ. ಇದರ ದೆಸೆಯಿಂದ ಇವತ್ತು ಈ ದೇಶದಲ್ಲಿ ಏನಾಗಿದೆಯೆಂದರೆ, ಸತ್ಯ, ಧರ್ಮ, ನೀತಿ ನಿಯಮ, ಪ್ರಜಾಸತ್ತೆ ಎಲ್ಲವೂ ಅಪಾಯದಲ್ಲಿದೆ. ಇವುಗಳ ಮೇಲೆ ಎಲ್ಲರೂ ಹೋರಾಟ ನಡೆಸಲೇಬೇಕು. ಆದ್ದರಿಂದ ಅಂತಹ ದುಷ್ಟಶಕ್ತಿಗಳನ್ನು ಇವತ್ತು ನಾವು ನಿಷ್ಕ್ರಿಯರನ್ನಾಗಿ ಮಾಡದೇ ಹೋದರೆ ನಿಜವಾಗಿಯೂ ಈ ದೇಶದಲ್ಲಿ ಪ್ರಜಾ ಸರ್ಕಾರ ಉಳಿಯುವುದಿಲ್ಲ. ಪ್ರಜಾಸತ್ತೆ ಉಳಿಯುವುದಿಲ್ಲ. ಈಗ ಪ್ರಾಮಾಣಿಕತನ, ದಕ್ಷತೆ ಎಲ್ಲಿ ಹೋಯಿತೆಂದು ಪ್ರಶ್ನೆ ಮಾಡುತ್ತಾರೆ. ದಕ್ಷತೆ, ಶಕ್ತಿ, ಸಾಮರ್ಥ್ಯ, ಎಲ್ಲವೂ ನನ್ನಲ್ಲಿ ಅಚ್ಚಳಿಯದಂತೆ ಇದೆ. ಆದರೆ ಇವತ್ತು ನನ್ನಲ್ಲಿ ಮದ್ದು, ಗುಂಡು ಇಲ್ಲ. ಆ ಒಂದು ಶಕ್ತಿಯೂ ಇಲ್ಲವೆಂದು ಹೇಳಿದರು. ಅದು ಶುದ್ಧ ತಪ್ಪು. ನನ್ನಲ್ಲಿ ಎಲ್ಲವೂ ಇದೆ. ಮೇಲಾಗಿ ಅಖಂಡ ಶಕ್ತಿ ಇದೆ. ನನ್ನಲ್ಲಿ ಇರುವ ಅಸ್ತ್ರಗಳನ್ನು ಆವತ್ತು ಪ್ರಯೋಗ ಮಾಡಿದಂತೆ ಇವತ್ತು ಪ್ರಯೋಗ ಮಾಡಿದರೆ ನನ್ನ ಅಸ್ತ್ರಗಳೆಲ್ಲವೂ ಮೊಂಡಾಗುತ್ತದೆ. ಆ ಅಸ್ತ್ರಗಳನ್ನು ಯಾವಾಗಲೂ ದುಷ್ಟಶಕ್ತಿಗಳನ್ನು ನಿಗ್ರಹಮಾಡುವುದಕ್ಕೆ ಮತ್ತು ನಿಷ್ಕ್ರಿಯರನ್ನಾಗಿ ಮಾಡುವುದಕ್ಕೆ ಮಾತ್ರ ಉಪಯೋಗ ಮಾಡಬೇಕು. ಇನ್ನು ನಾನಾ ರೀತ್ಯ ಹೊಸ ರೂಪ ತಾಳಿರತಕ್ಕ ಗುಂಪುಗಳ ಮೇಲೆಯೂ ಅವನ್ನು ಪ್ರಯೋಗ ಮಾಡಬೇಕಾಗಿದೆ. ಈಗ ಪರಿಸ್ಥಿತಿಗೆ ತಕ್ಕಂತೆ ನನ್ನ ಮಾರ್ಗಗಳನ್ನೂ ಕೂಡ ನಾನು ಬದಲಾವಣೆ ಮಾಡಿಕೊಳ್ಳಬೇಕೆಂದು ಹೇಳಿದರೆ ನೀವೂ ಸಹ ಒಪ್ಪಿಕೊಳ್ಳುತ್ತೀರಿ. ಎಲ್ಲಕ್ಕೂ ಒಂದೇ ಮಾತು ಎಂಬುದಾಗಿ ಹೇಳಿದರೆ ಈಗಿರುವುದಕ್ಕಿಂತಲೂ ಅನರ್ಥ ಆಗಬಹುದು. ಆದಕಾರಣ ಕಾಲ, ಸನ್ನಿವೇಶ, ಪರಿಸ್ಥಿತಿ, ದುಷ್ಟಶಕ್ತಿಗಳ ತಂತ್ರ ಇವುಗಳನ್ನು ಅರಿತು ನನ್ನಲ್ಲಿರತಕ್ಕ ಅಸ್ತ್ರಗಳನ್ನು ಬಹಳ ಜಾಗರೂಕತೆಯಿಂದ ಪ್ರಯೋಗಮಾಡಬೇಕು. ಇಲ್ಲದಿದ್ದರೆ ಬಹುಶಃ ಆ ಅಸ್ತ್ರಗಳು ಮುರಿದು ಹೋಗುತ್ತವೆ. ದೇಶಕ್ಕೆ ಅನರ್ಥ ಆಗಬಹುದು. ಇಂದು ಬೆಳೆಯುತ್ತಿರುವ ದುಷ್ಟಶಕ್ತಿಗಳು ಅಸಾಧಾರಣ ವಾಗಿರುವವರು ಮತ್ತು ಅನೀತಿವಂತರಾಗಿರುವವರೂ ಆಗಿರುವುದರಿಂದ, ಅವು ಒಳ್ಳೆಯ ಶಕ್ತಿಗಳಾಗಿ ಹಾಗೂ ಪ್ರಬಲ ಶಕ್ತಿಗಳಾಗಿ ಸರಿಹೋಗುವಂತೆ ಮಾಡಲು ನಾವು ಮಾಡುವ ಕೆಲಸವನ್ನು ಎಲ್ಲರೂ ಸದಾ ನೆನಸಿಕೊಳ್ಳಲೇ ಬೇಕಾಗಿದೆ. ಅದಕ್ಕೆ ಸಹನೆ ಬೇಕು, ಸಾಧನೆ ಬೇಕು. ಆ ಸಾಧನೆ ಇವತ್ತು ನಾವು ಮಾಡದೇ ಹೋದರೆ ಈ ದೇಶಕ್ಕೆ ನಿಜವಾಗಿಯೂ ಕೆಟ್ಟದ್ದು ಆಗುತ್ತದೆ. ಆದ್ದರಿಂದ ನೀವು ನನ್ನ ಹೃದಯದಲ್ಲಿ ಏನೇನು ಬವಣೆಗಳು ಬೆಳೆಯುತ್ತಿದೆ ಎನ್ನುವುದನ್ನು ಒಳಹೊಕ್ಕು ನೋಡಬಹುದು. ನಾವು ಮಾರ್ಚ್ ೭೨ರಲ್ಲಿ ಅಧಿಕಾರಕ್ಕೆ ಬಂದೆವು. ಮೇ ತಿಂಗಳಲ್ಲಿಯೇ ೧೨ ಜನ ಆಫೀಸರುಗಳನ್ನು ಸಸ್‌ಪೆಂಡ್ ಮಾಡಿದ್ದು ತಮಗೆಲ್ಲರಿಗೂ ಜ್ಞಾಪಕವಿದೆ. ಇಬ್ಬರು ಸೂಪರಿಂಟೆಂಡಿಂಗ್ ಇಂಜನಿಯರ್‍ಸ್, ೭ ಜನ ಎಗ್ಜಿಕ್ಯುಟಿವ್ ಇಂಜನಿಯರ್‍ಸ್, ೪ ಜನ ಅಸಿಸ್ಟೆಂಟ್ ಇಂಜನಿಯರ್‍ಸ್, ೪ ಜನ ಸೀನಿಯರ್ ಇಂಜನಿಯರ್‍ಸ್—ಈ ಆಫೀಸರುಗಳನ್ನು ಯಾವತ್ತು ಸಸ್‌ಪೆಂಡ್ ಮಾಡಿತೋ ಅಂದಿನಿಂದಲೇ ಇವರುಗಳಿಗೆ ರಕ್ಷಣಾ ಸಮಿತಿ ಹುಟ್ಟಿತು. ಈ ಆಫೀಸರುಗಳಿಗೆ ರಕ್ಷಣೆ ಕೊಡುವ ಒಂದು ಗುಂಪು ಹುಟ್ಟಿತು. ಆದಕ್ಕೆ ಇಲ್ಲದಸಲ್ಲದ ಒತ್ತಡಗಳನ್ನು ನನ್ನಮೇಲೆ ಹಾಕುವುದಕ್ಕೆ ಪ್ರಯತ್ನ ಮಾಡಿದರು. ಆ ಒತ್ತಡಗಳು ನನ್ನಮೇಲೆ ಯಾವ ಪರಿಣಾಮವನ್ನೂ ಮಾಡುವುದಕ್ಕೂ ಸಾಧ್ಯವಾಗಲಿಲ್ಲ. ಇದರ ಜೊತೆಗೆ ಮಾಮೂಲಾಗಿ ನನ್ನಲ್ಲಿ ದೊರೆತುದು ಖಡಾಖಂಡಿತವಾದ ಮಾತು. ಇಂತಹ ಕೆಲಸಗಳಿಗೆ ಬರಬೇಡಿ ಎಂಬುದು. ಅದಕ್ಕೆ ನನಗೆ ಪ್ರತಿಕ್ರಿಯೆ, ಹಗಲಿರಳೂ ಇವತ್ತಿನದಿವಸ ಚನ್ನಬಸಪ್ಪನವರನ್ನು ಅಧಿಕಾರ

ದಿಂದ ಕಿತ್ತುಹಾಕಬೇಕೆಂಬುದಾಗಿದೆ. ಆವತ್ತಿನವರೆಗೆ ಇದರ ಬಗ್ಗೆ ಏನೇನೋ ಒಳಸಂಚು ನಡೆಯುತ್ತಲೇ ಇದೆ. ಇದಾದಮೇಲೆ ಏನು ನಡೆಯಿತೆಂದರೆ, ಯಾವಾಗ ನನ್ನಲ್ಲಿ ಅದಕ್ಕೆ ಆಸ್ಪದ ಸಿಗಲಿಲ್ಲವೋ ಆಗ ಎಚ್ಚರಿಕೆ, ಹುಷಾರು ಎಂದು ಹೇಳುವ ಪತ್ರವನ್ನು ನನಗೆ ನೇರವಾಗಿ ಕೊಡದಿದ್ದರೂ ನಮ್ಮ ಸೆಕ್ರೆಟರಿಗೆ ಆ ವಿಚಾರದಲ್ಲಿ ಫೋನ್ ಮಾಡಿದ್ದು ಉಂಟು.

ಈಗ ಒಂದು ಪತ್ರವನ್ನು ಓದುತ್ತೇನೆ, ತಾವುಗಳೇ ಯೋಚನೆ ಮಾಡಿ ಇದೆಲ್ಲಾ ಎಷ್ಟರಮಟ್ಟಿಗೆ ನಡೆಯುತ್ತಿದೆ ಎಂಬುದನ್ನು ನೋಡಿ :

This is the letter of the P.W.D. S cretary written to me and sutmitted to me.

"Sri K. K Murthy had telephoned to me yesterday in connection with the formation of an approach road to the proposed site for the location of a Film Studio belonging to the Fiem Development Corp ration. Incidentally, he mentioned that the suspension of the officers of the P.W.D ordered during the last few weeks has created a consider stir in the political circles and that a number of responsible public leaders including the M L.As. are saying that the P.W.D. Minister has been taking action unnecessarily against the P.W.D. Officers

While describing these deve opments, Mr. Murthy also mentioned that one person had even made an emotional statement to the effect that he would not hesitate to shoot down the Minister in public interest."

ಇದೇ ನನಗೆ ದೊರೆತ ಪ್ರತೀಕಾರ ?

"I asked Mr. Murthy about the person concerned, but he however evaded and mentioned that a kind of signatu e campaign is to call upon the Chief Minister to change your portfolio as P W.D. Minister " ನನಗೆ ಗುಂಡು ಹಾಕತಕ್ಕವರು ಅವರು, ನನ್ನನ್ನು ಕೆಲಸದಿಂದ ಕಿತ್ತುಹಾಕತಕ್ಕವರು ಅವರು, ಅವರು ನನ್ನನ್ನು ಪಿ.ಡಬ್ಲ್ಯು ಡಿ. ಇಂದ ಕಿತ್ತಹಾಕತಕ್ಕವರು ?

"W en I have come to know the above in ormation, I f el it my duty to bring to the notice of the Hon' ble Minister for such acti n as he may deem it." ಹೀಗೆ ಇದು ನನಗೆ ಅವರು ತಾ : ೧—೬—೧೯೭೨ರಲ್ಲಿ ಬರೆದ ಪತ್ರ. ಇದು ನಗತಕ್ಕ ವಿಷಯವಲ್ಲ, ಸಾಧಾರಣವಾದ ವಿಷಯ ಅಲ್ಲ. ಇಂಥ ಗೊಡ್ಡು ಬೆದರಿಕೆಗಳನ್ನು ಹಾಕತಕ್ಕವರ ಬಗ್ಗೆ ಒಬ್ಬ ಮಂತ್ರಿಯಾದವನು ಹೆದರಿದರೆ ದೇಶಕ್ಕೆ ಎಷ್ಟು ಕಷ್ಟಗಳಾಗುತ್ತವೆ, ಎಷ್ಟು ನಷ್ಟಗಳಾಗುತ್ತವೆಂಬುದನ್ನು ತಾವೆಲ್ಲರೂ ಸ್ವಲ್ಪ ಆಲೋಚಿಸಿನೋಡಬೇಕು ಆಯಿತು. ಅಲ್ಲಿಂದಲೇ ಷುರುವಾಯಿತು ಆರಂಭವಾಯಿತು ಆ ಮಂಡಳಿಯ ಕಾರ್ಯಕ್ರಮಗಳು. ಅವರು ಹಾಗೆ ರೊಜ್ಜು ಗೇಳುವುದಕ್ಕೆ ನನ್ನ ಒಂದು ನಿಷ್ಠೂರವಾದ ಉತ್ತರಗಳೇ ಕಾರಣ. ನಾನು ಎಂಥ ವಿಪತ್ತಿಗೊಳಗಾದೆ, ನನ್ನ ಪ್ರಾಣದ ಮೇಲೆ ಎಂಥಾ ಆಘಾತ ನಡೆಯುವುದಿದೆ ಎಂದು ನಾನೇನಾದರೂ ಹೆದರಿದ್ದರೆ ಈ ದೇಶದಲ್ಲಿ ಸತ್ಯಸಂಧರು, ನಿಷ್ಠಾವಂತರೂ ಉಳಿಯುವುದಕ್ಕೆ ಅವಕಾಶವಿತ್ತೇ ಎಂದು ನಾನು ತಮ್ಮನ್ನು ಕೇಳುತ್ತೇನೆ ? ನನ್ನ ಪ್ರಾಣಕ್ಕೆ ಅಪಾಯವನ್ನುಂಟುಮಾಡತಕ್ಕ ಬಗ್ಗೆ ಇನ್ನೂ ಒಂದು ಪತ್ರಬಂದಿದೆ. ಅದನ್ನು ಬೇರೊಂದು ಸಂದರ್ಭದಲ್ಲಿ ಹೇಳುತ್ತೇನೆ. ಅದರಲ್ಲಿ ಚನ್ನಬಸಪ್ಪನವರ ಪ್ರಾಣ ನನ್ನಕೈಲ್ಲೇ ಇದೆ—ಎಂದು ಬೆದರಿಕೆ ಹಾಕಿ ಆ ಪತ್ರವನ್ನು ಬರೆದಿದ್ದಾರೆ. ಅದು ಯಾರಿಗೆ ಬರೆದಿರುವುದು ? ನಮ್ಮ ಪಿ ಡಬ್ಲ್ಯು ಡಿ. ಕಾರ್ಯದರ್ಶಿಯವರಿಗೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಾದರೆ ಆ ಸೆಕ್ರೆಟರಿಯವರು ಇವರಿವರ ಕಿತ್ತಾಟ ನನಗೇತಕ್ಕೆ ಬೇಕು ಎಂದು ಅವರು ತೆಪ್ಪನಿರಬಹುದಾಗಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ, ಆತನು ಸತ್ಯಸಂಧ, ಧೀಮಂತ . ಇಂಥ ವಿಚಾರಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಬೇಕೆಂದು ಅವರು ತಮ್ಮ ಕರ್ತವ್ಯವನ್ನು ಪರಿಪಾಲಿಸಿಮಾಡಿದಾರೆ. ಇಂಥ ಕ್ಷುಲ್ಲಕ ಕಾರಣಗಳ ಮೇಲೆ ಒಬ್ಬ ಮಂತ್ರಿಯ ಪೋರ್ಟ್‌ಪೋಲಿಯೋವನ್ನು ಬದಲಾಯಿಸಿದರೆ ಅದು

(ಶ್ರೀ ಹೆಚ್. ಎಂ. ಚನ್ನಬಸಪ್ಪ)

ದೇಶದ ಅವನತಿಗೆ ಕಾರಣವೆಂಬುದನ್ನು ತಾವೂ ಒಪ್ಪುತ್ತೀರಿ. ಅಂತೂ ಅವರ ಪಿತೂರಿಗಳು ಅಂದಿನಿಂದಲೇ ತೆರೆಯ ಮರೆಯಲ್ಲಿ ಪ್ರಾರಂಭವಾದವು. ನನ್ನ ಮೇಲೆ ಅವರ ಪ್ರಭಾವವನ್ನು ಬೀರು ವುದಕ್ಕೆ ಪ್ರಾರಂಭ ಮಾಡಿದರು. ಹೇಗೆ? ಅವರು ದೊಡ್ಡ ದೊಡ್ಡ ಪ್ರಭಾವಶಾಲಿ ವ್ಯಕ್ತಿಗಳ ಜೊತೆಯಲ್ಲಿ ಇರುವುದರ ಮೂಲಕ ಮತ್ತು ಅವರ ಜೊತೆಯಲ್ಲಿ ತಿರುಗಾಡುವುದರ ಮೂಲಕ ಪ್ರಯತ್ನಗಳನ್ನು ನಡೆಸಿದರು. ಅದು ಸಾಧ್ಯವಾಗಲಿಲ್ಲ. ಅನಂತರ ಅವರು ಅನೇಕ ವಶೀಕರಣಗಳನ್ನು ಪ್ರಯೋಗ ಮಾಡಿದರು. ಅದಕ್ಕೂ ನಾನು ಜಗ್ಗಲಿಲ್ಲ. ಅನಂತರ ಅವರು ಬೆದರಿಕೆಯ ಪತ್ರಗಳನ್ನು ಬರೆಯುವುದಕ್ಕೆ ಪ್ರಾರಂಭ ಮಾಡಿದರು. ಅದಕ್ಕೂ ನಾನು ಜಗ್ಗಲಿಲ್ಲ, ಅವರ ಪ್ರಯತ್ನಗಳೊಂದೂ ಸಾಗದೆ ಇದ್ದುದನ್ನು ನೋಡಿ ಏನಾದರೂ ಮಾಡಿ ಗೇಲಿ ಎಬ್ಬಿಸಲೇಬೇಕೆಂಬ ಆಕಾಂಕ್ಷೆಯಿಂದ ಅವರು ನಾನಾ ರೀತಿಯ ಪಿತೂರಿಗಳನ್ನು ನಡೆಸುವುದಕ್ಕೆ ಪ್ರಾರಂಭ ಮಾಡಿದರು. ಅವರು ಇಷ್ಟೆಲ್ಲಾ ಗೋಪಾಳ ಏಕೆ ನಡೆಸುತ್ತಿದ್ದಾರೆ? ಹಣಕ್ಕಾಗಿ, ಹಣದ ಸಂಪಾದನೆಗಾಗಿ. ಹೀಗೆ ಅವರ ಈ ಕೃತ್ಯಗಳು ಈ ದಿವಸ ಪ್ರಾರಂಭವಾದವುಗಳು ಈ ದಿವಸದ ವರೆಗೂ ನನಗೆ ಒಂದಲ್ಲ ಒಂದು ಕಿರುಕುಳವನ್ನು ತಂದು ನನ್ನ ಮುಂದೆ ನಿಲ್ಲಿಸುತ್ತಲೇ ಇವೆ. ಇದೆಲ್ಲಾ ಆಯಿತು. ಇದಾದ ನಂತರ ನನ್ನ ಮಗಳ ಲಗ್ನ ೮-೨-೧೯೭೩ರಲ್ಲಿ ನಡೆಯಿತು. ಅದಕ್ಕೇನು? ನನ್ನ ಮನೆಯ ಮುಂದೆ ಒಂದು ದೊಡ್ಡ ಪ್ರದರ್ಶನ. ಅದಕ್ಕೆಷ್ಟು ದೊಡ್ಡ ಗಲಭೆ ಗೊಂದಲಗಳೆದ್ದವು? ಅಷ್ಟೇ ಅಲ್ಲ ಅದೇ ವಿಚಾರದಲ್ಲಿ ಬಿಹಾರ್, ಯು. ಪಿ; ಅಸ್ಸಾಂ; ಗುಜರಾತ್; ಮತ್ತು ಹರಿಯಾಣ ಅಲ್ಲೆಲ್ಲ ಪತ್ರಿಕೆಗಳಲ್ಲಿ ಚನ್ನಬಸಪ್ಪನವರನ್ನು ಕೆಲಸದಿಂದ ಕಿತ್ತುಹಾಕಿ ಎಂಬ ದೊಡ್ಡ ದೊಡ್ಡ ಪ್ರಕಟಣೆ. ಅಂದರೆ ಸ್ಯಾಕ್ ಮಾಡಬೇಕೆಂದು ಅವುಗಳಲ್ಲಿ ಜಾಹಿರಾತನ್ನು ಹೊರಡಿಸಲಾಗಿದ್ದಿತು ಇದು ನನ್ನ ಬಗ್ಗೆ ಅವರು ನಡೆಸಿದ ಎರಡನೇ ಪ್ರಕರಣ. ಆ ಪತ್ರಿಕೆಗಳಲ್ಲಿ ಬರೆದಿರುವಂತೆ ನಾನು ಯಾರ ಯಾರ ಕೈಲಿ ಸ್ಯಾಕ್ ಮಾಡಿ ಸಿಕೊಳ್ಳಬೇಕೋ ತಿಳಿಯದು. ಅಷ್ಟೇ ಅಲ್ಲ ನನ್ನ ಗ್ರಹಚಾರ ನಾನು ತಮ್ಮೆಲ್ಲರ ಕೈಲಿ ಕೂಡ ಸ್ಯಾಕ್ ಮಾಡಿಸಿಕೊಳ್ಳಬೇಕಾಗಿದೆ.

ಇನ್ನು ಮೂರನೆಯದಾಗಿ ಚನ್ನಬಸಪ್ಪ ಸಮಾಜವಾದಿಯಲ್ಲ ಎಂದು ಒಂದು ದೊಡ್ಡ ಪ್ರಚಾರ. ಅದೂ ಯಾರಿಂದ? ಅಶೋಕ ಹೋಟೇಲ್; ಒಬೇರಾ ಹೋಟೇಲ್; ಮತ್ತು ರಿಡ್ಜ್ ಹೋಟೇಲ್ ಇಂಥ ಕಡೆ ಉಳಿಯುತಕ್ಕ ಜನರು ನನ್ನನ್ನು ಸಮಾಜವಾದಿಯಲ್ಲ ಎಂದು ಟೀಕೆ ಮಾಡುವುದು ನನ್ನನ್ನು ಸಮಾಜ ವಾದಿಯಲ್ಲ ಎಂದು ಹೇಳತಕ್ಕ ಜನರೋ ಇವರು? ಅವರಿಗೆ ಆ ನೈತಿಕ ಬೆಂಬಲ ಇದೆಯೋ? ಏನೇ ಆಗಲಿ ಹೀಗೆಲ್ಲಾ ಇವರು ಕೊಡುತ್ತಿದ್ದ ಕಿರುಕುಳದಿಂದ ನನ್ನ ಮನಸ್ಸು ಎಷ್ಟು ನೊಂದಿರಬೇಕು? ನನ್ನ ಸಂಸಾರದವರ ಮನಸೆಷ್ಟು ನೊಂದಿರಬೇಕು? ನನ್ನ ಆತ್ಮವೆಷ್ಟು ಬೇಸತ್ತಿರಬೇಕು?

"He is an anti-socialist he has violated the Guest Control Order Demand resignation from this man. If he does not resign, serious consequences will take place." ಎಂದು ಪತ್ರಿಕೆಗಳಲ್ಲಿದೆ. ಇದೆಲ್ಲವನ್ನೂ ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ— ನಿಮ್ಮಲ್ಲಿರತಕ್ಕ ಶಕ್ತಿಯೆಲ್ಲಾ ನಿಷ್ಕ್ರಿಯವಾಗಿದೆ. ಎಂದು ಕೇಳಿದ್ದಕ್ಕೆ ಹೇಳಬೇಕಾ ಯಿತು. ನಾನು ತಾವುಗಳೆಲ್ಲ ಆಲೋಚಿಸಿರುವಂತೆ ನಿಷ್ಕ್ರಿಯನಾಗಿ ಕುಳಿತಿಲ್ಲ. ದೇಶದ ಹಣವನ್ನು ಸಂಪತ್ತನ್ನು ಲೂಟಿ ಮಾಡತಕ್ಕವರಿಗೆ ನಾನು ಅಡ್ಡಿಯಾಗಿ ನಿಂತಿದ್ದೇನೆ; ಅವರ ಎದೆಗೆ ಒಂದು ಶೂಲವಾಗಿ ನಿಂತಿದ್ದೇನೆ; ಅದಕ್ಕಾಗಿ ನನ್ನ ಮೇಲೆ ಜಾತೀಯವಾದವೆತ್ತಿದರು. ಅನೇಕ ಅವಹೇಳನಕರವಾದ ವಿಷಯ ಗಳನ್ನು ಎತ್ತಲು ದಾರಿಮಾಡಿಕೊಟ್ಟರು. ಅವರು ಸದಾ ಆಲೋಚಿಸುತ್ತಿರುವುದು ಏನೆಂದರೆ, ಇವನು ಒಬ್ಬ ನಮಗೆ ಒಂದು ಗಂಡಾಂತರವಾಗಿ ನಿಂತಿದ್ದಾನಲ್ಲಾ ಇವನು ಎಂದು ಪಿ. ಡಬ್ಲ್ಯು. ಡಿ. ಇದ ರಾಜೀ ನಾಮೆಕೊಟ್ಟು ಹೋಗುತ್ತಾನೋ ಇವನೆಂದು ಹಾಳಾಗಿ ಹೋಗುತ್ತಾನೊ, ಇವನೆಂದು ಸತ್ತು ಹೋಗು ತ್ತಾನೊ ಎಂಬುದೇ ಅವರ ದಿನ ನಿತ್ಯದ ಕೆಲಸವಾಗಿದೆ.

ಇದಾಗುವಷ್ಟರಲ್ಲಿ ಹಾಸನದ ಪ್ರಕರಣ ಉಟಾಯಿತು. ಅದೇನು ಕಮ್ಮಿ ಹಗರಣವೇ ಅದರ ಬಗ್ಗೆ ನನಗೆ ಸುಮಾರು ೭೦ ಅರ್ಜಿಗಳು ಬಂದಿವೆ. ಅದರ ಬಗ್ಗೆ ಒಂದು ವಿಚಾರಣಾ ಸಮಿತಿ ನೇಮಕ ಆಯಿತು. ಅದಾದ ಕೂಡಲೆ ಆ ಒಂದು ವಿಲಾಸಮಯ ಜೀವಿಗಳ ಗುಂಪು ಮಾಮೂಲಿನಂತೆ ನನ್ನಲ್ಲಿಗೆ ಬಂದಿತು. ಆ ವಿಚಾರಣೆಯನ್ನು ನಿಲ್ಲಿಸಬೇಕು ಎಂದು ಅವರು ಕೇಳಿದರು. ಇದರ ವಿಚಾರಣೆಗೆ ಆಜ್ಞೆ ಹೊರಡಿಸಿದ್ದು ತಾ: ೭-೬-೧೯೭೩ರಲ್ಲಿ. ಆದರೆ ಅದಕ್ಕೆ ಒಪ್ಪತಕ್ಕವನು ನಾನೇ? ಆ ಅರ್ಜಿಗಳನ್ನು ಕೊಟ್ಟಿರತಕ್ಕ ೭೦ ಜನರಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರೊಬ್ಬರೇ ಅಲ್ಲ; ಆ ಅರ್ಜಿದಾರರಲ್ಲಿ ಒಬ್ಬ ಹೆಣ್ಣು ಮಗಳೂ ಕೂಡ ಒಂದು ಅರ್ಜಿ ಬರೆದಿದ್ದಾಳೆ. ಆ ಅರ್ಜಿಯನ್ನು ಓದಿದರೆ ಕರುಳು ಕಿತ್ತುಹೋಗುತ್ತದೆ. ಅದರಲ್ಲಿ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೂ ಇದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಆ ಹೆಣ್ಣು ಮಗಳ ಪತ್ರ ಸಭೆಯಲ್ಲಿ ಓದಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಯಾವಾಗ ನಿರ್ದಿಷ್ಟವಾಗಿ ಇನ್‌ವೆಸ್ಟಿಗೇಷನ್ ನಡೆಸಬೇಕೆಂದು ಆಜ್ಞೆ ಮಾಡಿದೆನೋ ಆಗಲೇ ಷುರುವಾಯಿತು—ಆ ಮಂಡಳಿಯ ಕಾರ್ಯಾಚರಣೆ. ಆದರೆ ನಾನು ಅದು ಯಾವುದೊಂದಕ್ಕೂ ಜಗ್ಗಲಿಲ್ಲ ತಗ್ಗಲಿಲ್ಲ. ಆದರೆ ಆ ಸಂದರ್ಭದಲ್ಲಿ ಅಲ್ಲಿ ರಾತ್ರೋರಾತ್ರಿ ಕಾಮಗಾರಿ ಕೆಲಸಗಳು ನಡೆಯುವುದಕ್ಕೆ ಷುರುವಾದವು.

11-30 A. M.

ಈ ರೀತಿಯಾಗಿ ವಿಜಿಲೆನ್ಸ್ ಕಮಿಟಿಯಿಂದ ವರದಿ ಬಂದಿದೆ. ಆಫೀಸರುಗಳು ನಾನ್ ಕೋಆಪರೇಟ್ ಮಾಡುತ್ತಿದ್ದಾರೆ ಎಂದು ಸಹ ತಿಳಿಸಿದ್ದಾರೆ. ಒಂದು ಸಲ ಟೆಕ್ನಿಕಲ್ ಆಡಿಟ್‌ನಲ್ಲಿನ ಸೂಪರಿಂಟೆಂಡಿಂಗ್ ಎಂಜಿನಿಯರು ಹೋದಾಗ 5HC ಜನರು ಘೇರಾವೋ ಮಾಡಿದರು. ಆಗ ಅವರು ತಮಗೆ ಸಹಾಯ ನೀಡಬೇಕು, ಇಲ್ಲದಿದ್ದರೆ ಕೆಲಸ ಮಾಡುವುದಕ್ಕಾಗುವುದಿಲ್ಲ ಎಂದು ಬರೆದರು. ಅದನ್ನು ಐಜಿಪಿ ಯವರಿಗೆ ತಿಳಿಸಿ ಪೋಲೀಸರ ಸಹಾಯ ಒದಗಿಸಬೇಕಾಯಿತು. ಮಾರನೆ ದಿವಸ ಪಿ. ಡಬ್ಲ್ಯು. ಡಿ. ಆಫೀಸಿಗೆ ಬೆಂಕಿ ಹಚ್ಚಿ ರಿಕಾರ್ಡುಗಳನ್ನು ಸುಡುತ್ತೇವೆಂದು ಟೆಲಿಗ್ರಾಂ ಬಂತು. ಆಗ ಪೋಲೀಸರ ರಕ್ಷಣೆ ಕೊಡಬೇಕಾಯಿತು. ಅದನ್ನು ಕೊಟ್ಟ ಮೇಲೆ ಎಲ್ಲಾ ಮುಗಿದು ಹೋಯಿತು, ಏನು ಮಾಡುವುದು ಎಂದು ಇದಕ್ಕೆ ಸಂಬಂಧಪಟ್ಟವರು ಯೋಚನೆ ಮಾಡಿರಬೇಕು. ಇನ್ನು ಆಫೀಸರುಗಳನ್ನು ನಿಷ್ಕ್ರಿಯರನ್ನಾಗಿ ಮಾಡುವುದು ಸರಿಯಲ್ಲವೆಂದು ಭಾವಿಸಿರಬೇಕು. ಆ ಕಾಲದಲ್ಲಿ ಒಬ್ಬ ಹೆಣ್ಣು ಮಗಳು ೨೨-೭-೧೯೭೩ರಲ್ಲಿ ಒಂದು ಕರುಣಾಜನಕವಾದ ಪತ್ರ ಬರೆದಿದ್ದಾರೆ. ಅದನ್ನು ನೋಡಿ ನನ್ನ ಕರುಳು ಕಿತ್ತುಬರುವಂತಾಯಿತು. ಅವರು ಬರೆದಿರುವುದನ್ನು ಓದುತ್ತೇನೆ. ಅದು ಈ ರೀತಿ ಇದೆ :

ತಾ|| ೨೨-೭-೭೩
ಹಾಸನ

"ತೀರ್ಥರೂಪ ಸಮಾನರಾದಂತ ಮಾನ್ಯ ಮಂತ್ರಿವರ್ಯ ಶ್ರೀ ಚನ್ನಬಸಪ್ಪನವರ ಚರಣಸನ್ನಿಧಿಯಲ್ಲಿ ಅನೇಕ ಪ್ರಣಾಮಗಳು

ಪೂಜ್ಯರೆ ನಿಮಗೆ ಅಪರಿಚಿತಳಾದ ಹತಭಾಗಿನಿಯೊಬ್ಬಳು ನಿಮ್ಮ ಮಗಳ ಸ್ಥಾನದಲ್ಲಿ ನಿಂತು ಈ ಪತ್ರ ಬರೆಯುತ್ತಿರುವಳು. ಈ ಪತ್ರವು ನಿಮಗೆ ತಲುಪಬಹುದೋ ತಲುಪಿದರೂ ರಾಜಕಾರಣದ ಅತಿಯಾದ ಕಾರ್ಯಬಾಹುಳ್ಯವುಳ್ಳ ತಮಗೆ ಈ ಪತ್ರವನ್ನು ಓದುವಷ್ಟು ಸಮಯ ತಾಳ್ಮೆ ಇರಬಹುದೆಂದು ಓದಿಯೂ ದುರಾದೃಷ್ಟ ಪೀಡಿತಳೊಬ್ಬಳ ಗೋಳು ಕತೆಯನ್ನು ಕೇಳಿ ಆ ಕಷ್ಟವನ್ನು ತಾವು ನಿವಾರಿಸಬಲ್ಲಿರಿ ಎಂದಾಗಲಿ ಯಾವ ನಂಬಿಕೆ ಇಲ್ಲದಾಗ್ಯೂ ಹೀಗೆ ನಿಮಗೆ ಬರೆಯುತ್ತಿರುವ ನನ್ನ ಸಾಹಸವನ್ನು ದಯವಿಟ್ಟು ಕ್ಷಮಿಸಿ.

ನನ್ನ ಪರಿಚಯ ಹೇಳಿ ಮುಂದುವರೆಯುತ್ತೇನೆ, ಹಾಸನದ ಪಿ ಡಬ್ಲ್ಯು ಡಿ ಹಗರಣದಲ್ಲಿ ಸಿಕ್ಕಿಕೊಂಡು ನರಳುತ್ತಿರುವವರಲ್ಲಿ ನನ್ನ ಪೂಜ್ಯ ಪತಿಯಾದ ಒಬ್ಬ ಎ. ಇ. ಅಂದರೆ ಸಾಕಲ್ಲ.

ಮಾನ್ಯರೇ, ತಾವು ಓರ್ವ ನಿಷ್ಠಾವಂತದಕ್ಷ ನಿಷ್ಪಕ್ಷಪಾತಿಯಾದ ಸಮರ್ಥ ಆಡಳಿತಗಾರರೆಂದು ಚಿಕ್ಕಂದಿನಿಂದಲೂ ನಾನು ಬಹಳವಾಗಿ ಕೇಳಿರುವೆನು. ಹಾಗೂ ಈ ಬಗ್ಗೆ ತುಂಬಾ ಗೌರವ ಭಾವನೆಯನ್ನು ಇಟ್ಟುಕೊಂಡಿರುವೆನು. ಆದರೆ ಆದರ ಅಗ್ನಿ ಪರೀಕ್ಷೆಗೆ ಹೀಗೆ ಒಂದು ದಿನ ನಾನೇ ಗುರಿಯಾಗಬಹುದೆಂದು ಮಾತ್ರ ಕನಸಿನಲ್ಲಿಯೂ ಎಣಿಸಿರಲಿಲ್ಲ.

ಹತ್ತಾರು ವರ್ಷಗಳಿಂದ ರಾಜಕೀಯದಲ್ಲಿ ನುರಿತಿರುವ ತಾವು ಈಗ ಹಾಸನದ ಪಿ ಡಬ್ಲ್ಯು ಡಿ ವಿಭಾಗದಲ್ಲಿ ಎದ್ದಿರುವ ಬಿರುಗಾಳಿಗೆ ಮೂಲ ಯಾವ ಯಾವ ಉದ್ದೇಶ ಸಾಧನೆಗಳಿಗೋಸ್ಕರ ಈ ಗಾಳಿ ಬೀಸುತ್ತಿದೆ ಎಂದು ಅರಿತೇ ಇರುವಿರಿ. ನಾನು ಹೆಚ್ಚು ವಿದ್ಯಾಬುದ್ಧಿ ಕಲಿತವಳಲ್ಲ. ಸಂಸಾರವೇ ಸರ್ವಸ್ವವೂ ಎಂದು ಬದುಕುವ ನನಗೆ ರಾಜಕೀಯದ ಗಂಧ-ಗಾಳಿ ತಿರುವುಮುರುವುಗಳೇನೂ ತಿಳಿಯದಿದ್ದರೂ ಕೂಡ ಈ ಹಗರಣದ ಹಿಂದೆ ಹೊತ್ತಿಕೊಂಡು ಉರಿಯುತ್ತಿರುವ ರಾಜಕೀಯ ಕಿಚ್ಚಿನ ಬಿಸಿ ನನ್ನ ಅಲ್ಪಮತಿಗೂ ತಟ್ಟಿದೆ. ತೆರೆಯ ಹಿಂದೆ ನಿಂತು ಧೂರ್ತ ರಾಜಕಾರಣಿಗಳು ಆಡುತ್ತಿರುವ ಈ ಪಗಡೆಯಾಟಕ್ಕೆ ಇಲಾಖೆಯ ಅರಿಯದ ಅಧಿಕಾರಿಗಳು ದಾಳಗಳಾಗಿ ಸಿಕ್ಕಿ ಬಿದ್ದಿರುವರೆಂಬ ಶೋಚನೀಯ ಸಂಗತಿ ನಿಮ್ಮ ಗಮನದಲ್ಲೂ ಇರಬಹುದು. ಜೂಜು ಯಾರದ್ದೋ ಜೂಜಾಡುತ್ತಿರುವವರು ಯಾರೋ ಜೂಜಿನ

(ಶ್ರೀ ಹೆಚ್. ಎಂ. ಚನ್ನಬಸಪ್ಪ)

ಪಂಥ ನಾರಿಗೋ ಆದರೆ ಈ ಜೂಜಾಟದ ತಪ್ಪಿಗೆ ಶಿಕ್ಷೆ ಮಾತ್ರ ಅಮಾಯಕ ದಾಳಗಳಾಗಿ ಒದಗಿದ್ದ ಅಧಿಕಾರಿಗಳಿಗೆ ಎಂಬುದು ಸೂರ್ಯ ಪ್ರಕಾಶದಷ್ಟು ಸತ್ಯವಾಗಿದೆ. ಇಲಾಖೆಯಲ್ಲೀಗ ನಡೆಯುತ್ತಿರುವ ತನಿಖಾಕ್ರಮಗಳಿಂದ ತನಿಖಾಧಿಕಾರಿಗಳಿಂದ ಅಥವ ಕೋರ್ಟು ಕಾನೂನುಗಳಿಂದ ಚಾಣಾಕ್ಷರಾದ ನಿಜವಾದ ಅಪರಾಧಿಗಳನ್ನು ಹಿಡಿಯಲಾರರು ಶಿಕ್ಷಿಸಲಾರರು. ಇದು ಪ್ರಪಂಚದಲ್ಲಿ ಇತಿಹಾಸ ಪುರಾಣ ಗ್ರಂಥಗಳಲ್ಲಿಯೂ ಸಹ ಕಂಡುಬರುವ ಕಠೋರ ಸತ್ಯ. ಯಾವ ಇತಿಹಾಸ ಚರಿತ್ರೆ ತೆರೆದು ನೋಡಿದರೂ ಧೂರ್ತರ ಕುಯುಕ್ತಿಗಳಿಗೆ ಬಲಿಯಾದ ನಿರಪರಾಧಿಗಳ ಸಂಖ್ಯೆ ಬಹಳವಾಗಿಯೇ ಸಿಗುತ್ತದೆ. ಪ್ರಪಂಚದಲ್ಲಿ ಅದು ಈಗಲೂ ಹೊರತಾಗಿಲ್ಲ.

ಒಮ್ಮೆ ಬೀದಿಯಲ್ಲಿ ನಾನೊಂದು ಕರುಣಾಜನಕ ದೃಶ್ಯವನ್ನು ಕಂಡಿದ್ದೆ. ಮೇವು ಹುಡುಕುತ್ತಾ ಒಂದು ಪುಟ್ಟ ಕುರಿಮರಿಯೊಂದು ಯಾವುದೋ ಮನೆಯ ಆವರಣದೊಳಕ್ಕೆ ಅಜಾನಕವಾಗಿ ಹೊಕ್ಕಿತ್ತು. ತಕ್ಷಣವೇ ಭೀಕರಾಕೃತಿಯ ನಾಯಿಗಳೆರಡು ಹಾರಿಬಂದು ಅಸಹಾಯಕವಾಗಿ ಪ್ರಾಣಭಯದಿಂದ ಚೀರುತ್ತಾ ತತ್ತರಿಸುತ್ತಿದ್ದ ಕುರಿಮರಿಯನ್ನು ನಿಮಿಷ ಮಾತ್ರದಲ್ಲಿ ನನ್ನ ಕಣ್ಣೆದುರೇ ಸಿಗಿದು ಹಾಕಿದವು. ಇಂತಹ ಘಟನೆ ದಿನನಿತ್ಯವೂ ಸಾಮಾನ್ಯ ಮನುಷ್ಯರಿಗೆ ಆದರೆ ನಾಯಿಗಳ ಕ್ರೂರ ದವಡೆಗಳಲ್ಲಿ ಸಿಕ್ಕಿ ಅನ್ಯಾಯವಾಗಿ ಪ್ರಾಣ ಬಿಡುವಾಗ ಕೂಗಿದ ಆರ್ತ ಧ್ವನಿ ನೊಂದು, ಉಸಿರು ದೇವರ ಕಿವಿಗೆ ಬಿದ್ದಿರಲಿಲ್ಲವೇ ? ಇದು ನಡೆದ ಕೆಲವೇ ತಿಂಗಳಲ್ಲಿ ಒಂದು ನಾಯಿ ಹುಚ್ಚು ಹಿಡಿದು ಸತ್ತಿತು. ಇನ್ನೊಂದು ಎಕ್ಕಿತೆಂದೂ ಆ ನಾಯಿಯ ಒಡೆಯರು ಹೇಳಿ ಕಣ್ಣೀರಿಟ್ಟಿದ್ದರು.

ಈಗ ಕುರಿಮರಿಯ ಸ್ಥಾನದಲ್ಲಿ ನನ್ನ ಪತಿ ಇದ್ದಾರೆ. ಸರಕಾರವೂ ತನಿಖಾಧಿಕಾರಿಗಳೂ ಆ ಬೇಟೆ ನಾಯಿಗಳಂತಹ ಶಕ್ತಿವಂತ ಸ್ಥಾನದಲ್ಲಿದ್ದಾರೆ. ನಿಸ್ಸಹಾಯಕ ಅಧಿಕಾರಿಗಳನ್ನು ನ್ಯಾಯದ ಹೆಸರಿನಲ್ಲಿ ಕೊಲೆ ಮಾಡುವುದಕ್ಕೆ ಯಾರೂ ಏನೂ ಶ್ರಮ ಪಡಬೇಕಾಗಿಲ್ಲ. ಕೊಲೆ ನಡೆದು ಹೋಗಲಿ. ಇದರಿಂದ ಶಕ್ತಿವಂತರಿಗೇನೂ ಹಾನಿಯಿಲ್ಲವಲ್ಲ. ದೇವರ ಸಹಾಯ ನಿಸ್ಸಹಾಯಕರಿಗೆ ಸಿಗದೇನೂ ಇರಬಹುದು

ಪೂಜ್ಯರೇ, ತಮ್ಮ ದಕ್ಷತೆ ನಿಷ್ಪಕ್ಷಪಾತ ನಿಷ್ಠೆಯನ್ನು ಕೇಳಿ ಗೌರವಿಸಿದ್ದೇನೆ. ಈಗ ಅವರ ಸತ್ವ ಪರೀಕ್ಷೆಗೆ ಗುರಿಯಾಗಿದ್ದೇನೆ. ನಿಮ್ಮ ನಿಷ್ಕಲ್ಮಶವಾದ ರಾಜಕೀಯ ಧುರೀಣತೆಗೆ ನಿಷ್ಪಕ್ಷಪಾತವಾದ ವಿಚಾರ್ರಗ ದಕ್ಷ ಆಡಳಿತಾಧಿಕಾರಕ್ಕೆ ನನ್ನ ಪತಿಯ ಆಹುತಿಯೇ ಅಗತ್ಯವಾಗಿದ್ದಲ್ಲಿ ಸಂತೋಷವಾಗಿ ಬಲಿ ಕೊಟ್ಟು ನಿಮ್ಮ ಅಧಿಕಾರ ಯಾಗವನ್ನು ಸಾಂಗಗೊಳಿಸಿರಿ.

ಈ ಕರ್ಮ ಕಾಂಡದಲ್ಲಿ ನನ್ನ ಪತಿ ನಿರ್ದೋಷಿಯೋ ದೋಷಿಯೋ ಎಂಬುದನ್ನು ನಿಮ್ಮ ಆತ್ಮಸಾಕ್ಷಿಯಾಗಿ ನಿರ್ಧರಿಸಿರಿ. ದೇವರ ದೃಷ್ಟಿಯಲ್ಲಿ ನನ್ನ ಪತಿ ನಿರ್ದೋಷಿಯಾಗಿದ್ದರೆ ಮಾತ್ರ ಈಗ ನಾನೂ ನನ್ನ ಮಕ್ಕಳೂ ಸುರಿಸುವ ಕಣ್ಣೀರು ಬಿಡುತ್ತಿರುವ ನಿಟ್ಟುಸಿರು, ಪಡುತ್ತಿರುವ ಸಂಕಟದ ಉರಿ ಎಂದಿಗೂ ವ್ಯರ್ಥವಾಗಲಾರದು.

ಇದುವರೆವಿಗೂ ನಾನು ಸುಖಕ್ಕಿಂತ ದುಃಖವನ್ನೇ ಹೆಚ್ಚಾಗಿ ಕಾಣುತ್ತಾ ನಗುವಿಗಿಂತ ಜಾಸ್ತಿಯಾಗಿ ಕಣ್ಣೀರು ಮಿಡಿಯುತ್ತಲೇ ಬಾಳಿಕೊಂಡು ಬಂದೆ. ನನ್ನ ಕಷ್ಟ ಪರಂಪರೆಗಳು ಇನ್ನೂ ಕೊನೆಗೊಳ್ಳಲಿಲ್ಲ. ದೇವರ ಚಿತ್ತವಿದ್ದಂತಾಗಲಿ.

ಇಷ್ಟೇ ನಾನು ತಮ್ಮಲ್ಲಿ ಹೇಳಿಕೊಳ್ಳಬಯಸಿದ ಅಹವಾಲು. ಮುಂದೆ ನನ್ನ ಭವಿಷ್ಯದಲ್ಲಿ ಅವಕಾಶವಾದರೆ ತಮ್ಮನ್ನೊಂದಾದರೂ ಕಂಡು ಮಾತಾಡುವೆನು.

ನಿಮಗೂ, ನಿಮ್ಮ ಕುಟುಂಬ ವರ್ಗಕ್ಕೂ ದೇವರು ಸನ್ಮಂಗಳವನ್ನುಂಟುಮಾಡಲಿ.

ವಿಳಾಸ: ಇತಿ ಬೇಡುವ ಆಶೀರ್ವಾದಗಳು

೪೪, ಪಿ ಡಬ್ಲ್ಯು ಡಿ ಕಾಲೋನಿ ಶಾರದ

ರವೀಂದ್ರನಗರ ಹಾಸನ

ನಾನಿನ್ನು ಹೆಚ್ಚು ಹೇಳುವುದಿಲ್ಲ. ನಿನ್ನೆಯ ದಿವಸ ಒಂದು ಮಾತನ್ನು ಹೇಳಿದರು, ನನ್ನನ್ನು ನೀವು ಬುಜ್ಜುಪಶುವಾಗಿದ್ದೀರಾ ಎಂದು ಕೇಳಿದರು. ಬಹುಶ: ಪುಟ್ಟಸ್ವಾಮಯ್ಯನವರಿರಬಹುದು. ಇಲ್ಲವೆಂದು ಹೇಳುವುದಿಲ್ಲ. ನಾನು ಓದಿದ ಕಾಗದ ಬಂದಮೇಲೆ ಪ್ರತಿದಿವಸವೂ ನನ್ನ ಮನಸ್ಸಿಗೆ ಬಹಳ ವೇದನೆಯಾಗುತ್ತಿತ್ತು. ನಿರಪರಾಧಿಗಳಿಗೆ ಶಿಕ್ಷೆ ಮಾಡಿ ನಾನು ಪಾಪಕ್ಕೆ ಒಳಗಾಗಬಹುದು ಎಂಬ ಭಯ ನನ್ನಲ್ಲಿ

ಮಾಡಿತ್ತು. ನಿಜವಾದ ಅಪರಾಧಿಗೆ ಶಿಕ್ಷೆಯಾಗುವುದಿಲ್ಲ ಹಾಗೆ ಮಾಡಲು ನಿಮ್ಮ ಕೈಲಾಗುವುದಿಲ್ಲ ಎಂದು ತಿಳಿಸಿದ್ದರು. ಹಗಲಿರುಳೂ ಈ ಯೋಚನೆ ನನ್ನಲ್ಲಿ ಕಾಡುತ್ತಿತ್ತು. ಇದಕ್ಕೆ ಕಾರಣವೇನು? ನಾನು ಮೇಲೆ ಕಠಿಣವಾಗಿ ಕಂಡರೂ ನನ್ನ ಹೃದಯ ಬಹಳ ಮೃದು ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅನೀತಿ, ಅನ್ಯಾಯ, ಅತ್ಯಾಚಾರ, ದುರಾಚಾರ ನಡೆಯುವುದಕ್ಕೆ ಇವತ್ತು ನಾನಾ ಶಿಕ್ಷೆ ಮಾಡಬೇಕು. ತಪ್ಪಿತಸ್ಥರಲ್ಲದವರಿಗೆ ತೊಂದರೆಯಾಗಬಹುದು. ಹಾಗಾದರೆ ಪಾಪ ಬರುವುದು ಆದರೆ ಅವರು ತಪ್ಪಿಸಿಕೊಳ್ಳುವಂತಿಲ್ಲ ಎಂದು ಬರೆದಿದ್ದಾರೆ ಶಿಕ್ಷೆ ವಿಧಿಸುವಾಗ ನನ್ನ ಜವಾಬ್ದಾರಿಯಿದೆ, ಅದನ್ನು ಮರೆಯುವಂತಿಲ್ಲ. ಈ ರೀತಿ ಏನಾದರೂ ಯಾರಾದರೂ ಬುದ್ಧಿಪೂರ್ವಕವಾಗಿದ್ದರೆ ಸರಕಾರ ನಿಜಾಂಶವನ್ನು ನೋಡಿ ಸತ್ಯವನ್ನರಿತು ಮುಂದುವರೆಯಬೇಕು. ತಿದ್ದಿಕೊಳ್ಳುವ ಮನೋಭಾವದಿಂದ ಯಾರಾದರೂ ನಿಜಾಂಶವನ್ನು ಹೊರಗೆಡವಿದರೆ ಕನಿಕರ ತೋರಿಸುವುದು ಕರ್ತವ್ಯವಾಗಿದೆ. ಶಾರದಮ್ಮನವರು ಬರೆದಿರುವ ಪತ್ರಕ್ಕೆ ನಾನು ಕೊಟ್ಟಿರುವ ಉತ್ತರವನ್ನು ಓದುತ್ತೇನೆ. ಅದು ಈ ರೀತಿ ಇದೆ :

"The contents of the letter appears to be the out come of real and heartfelt feelings. It may be that her husband has become a victim of circumstances. Many others may have also become such victims of circumstances and pulls and pressures. It is the policy of Government to take very lenient view against the officers who come out with truth make confessions and repent for what they have done and also have become helpless victims to circumstances. The petitioner appears to be in knowledge of certain facts and circumstances which have entangled some innocent people.

The letter may be acknowledged. She may be requested to help the Government in indicating the facts and circumstances that have come to her knowledge, assuring Secrecy of source and facts disclosed. To avoid misplacement, it may be sent by Muddam."

ಹಾಸನದ ಪ್ರಕರಣದಲ್ಲಿ ಯಾರು ಯಾರು ಕೊಲೆಯಾಗಿದ್ದಾರೆ, ಯಾರ ಯಾರದು ಜವಾಬ್ದಾರಿ ಇದೆ ಎನ್ನುವುದರ ಬಗ್ಗೆ ವಿಶೇಷ ಬೆಳಕನ್ನು ಚೆಲ್ಲಬೇಕಾಗಿದೆ. ನನಗೆ ಬಂದಿರುವ ಪತ್ರಗಳಲ್ಲಿ, ಅನಾನಿಮಸ್ ಪಿಟಿಷನ್‌ನಲ್ಲಿ ಮನಸ್ಸಿನಲ್ಲಿರುವಂದು ಕರುಳು ಕತ್ತರಿಸಿ ಆ ಪತ್ರವನ್ನು ಬರೆದಿದ್ದಾರೆ, ಅಷ್ಟು ಸಾಹಸ ಮಾಡಿದ್ದಾರೆ, ಅಷ್ಟು ಸಾಹಸ ಮಾಡಿದ್ದಾರೆನ್ನುವುದನ್ನು ತಾವೇ ಆಲೋಚನೆ ಮಾಡಬೇಕು.

ಏಕೆ ನಿಧಾನ ಮಾಡುತ್ತಿದ್ದೀರಿ ಎಂದು ಮಾನ್ಯ ಪುಟ್ಟಸ್ವಾಮಯ್ಯನವರು ಕೇಳಿದರು. ನಿಜ ಬಿಡಿ, ಆತ್ಮವಿರುವ ಮನುಷ್ಯ ಸ್ವಲ್ಪಮಟ್ಟಿಗೆ ಈ ವಿಷಯದಲ್ಲಿ ಯೋಚನೆ ಮಾಡಬೇಕು ಆತ್ಮವಿಲ್ಲದೆ ಇದ್ದರೆ ಎಷ್ಟು ಕೊಲೆಗಳಾದರೂ ಆಗಲಿ ಎನಬಹುದು. ಆದುದರಿಂದ ನಾನು ಏನು ಅರಿಕೆ ಮಾಡಿಕೊಂಡಿರೆ ಅದರಂತೆ ಪತ್ರವನ್ನು ನಾನು ಓದಿದ ಮೇಲೆ ಏನೇನು ಅನಾಹುತಗಳಾಗಿರುತ್ತವೆ ಎನ್ನುವುದನ್ನು ಈ ಮಾನ್ಯ ಸಭೆ ಹಾಗೂ ಈ ಮಾನ್ಯ ಸಭೆಯ ಮೂಲಕ ಈ ದೇಶದಲ್ಲಿರುವ ಜನ ಆಲೋಚನೆ ಮಾಡಬೇಕು. ಇದು ನಿಜವೇ ಆಗಿದ್ದ ಪಕ್ಷದಲ್ಲಿ, ದುರಾಚಾರ, ಅನಾಚಾರ ನಡೆದಿದ್ದೇ ಆದಲ್ಲಿ ಪಕ್ಷದಲ್ಲಿ ಅಂಥ ಜನರ ದುರಾಡಳಿತ ಏನು ನಡೆದಿರಬಹುದು ಎನ್ನುವುದರ ಬಗ್ಗೆ ಈ ಸಭೆ ಹಾಗೂ ಸಾರ್ವಜನಿಕರು ಆಲೋಚನೆ ಮಾಡದೆ ಹೋದರೆ ಈ ದೇಶದಲ್ಲಿ ಸತ್ಯ ಹೇಗೆ ಉಳಿಯುತ್ತದೆ ಎಂದು ಕೇಳುತ್ತೇನೆ. ನಿಮ್ಮ ಪ್ರಜಾಸತ್ತೆ ಎಲ್ಲಿ ಉಳಿಯುತ್ತದೆ, ನೀತಿನಿಯಮಗಳು ಎಲ್ಲಿ ಉಳಿಯುತ್ತವೆ ಒಂದಾನೊಂದು ದಿವಸ ಪ್ರಜಾಸತ್ತೆಯು ಕೊಲೆಯಾಗಿ ಹೋಗುತ್ತದೆ. ಇಲ್ಲಿ ಏನೇನು ನಡೆದಿದೆ ಎನ್ನುವ ವಿಷಯದಲ್ಲಿ ಬಹುಶಃ ಅನೇಕ ವೇಳೆ ಕೇಳಿದ್ದಾರೆ. ನಾನೂ ಅನೇಕ ವಿಷಯಗಳನ್ನು ಹೇಳಿದ್ದೇನೆ. ಪುನಃ ನಾನು ಅವನ್ನೆಲ್ಲ ಹೇಳಬೇಕಾದು ಅನಾವಶ್ಯಕ. ಆದರೂ ಮೂಲಭೂತವಾದ ನಾಲ್ಕಾರು ವಿಷಯಗಳನ್ನು ಹೇಳುತ್ತೇನೆ.

ಜೂನ್ ಜುಲೈ ತಿಂಗಳಲ್ಲಿ ಒಟ್ಟು ೩೮, ೫೦,೦೦೦ ರೂಪಾಯಿ ಪಾವತಿಯಾಗಿದೆ. ಜೂನ್ ೧೯ರಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರ ಟ್ರಾನ್ಸ್‌ಫರ್ ಆರ್ಡರ್ ಆಯಿತು. ಇದರಲ್ಲಿ ಬಹುತೇಕ, ಸುಮಾರು ೯೦ ಪರ್ಸೆಂಟ್ ೧೯ನೇ ತಾರೀಖು ಕಳೆದ ಮೇಲೆ ನಡೆದಿರತಕ್ಕ ವಿಷಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಚಾರ್ಜ್ ಕೊಟ್ಟದ್ದು ಜುಲೈ ನಾಲ್ಕನೇ ತಾರೀಖು ಬೆಳಿಗ್ಗೆ. ಒಂದನೇ ತಾರೀಖು ಭಾನುವಾರ, ಎರಡು, ಮತ್ತು ಮೂರನೇ ತಾರೀಖುಗಳಲ್ಲಿ ೧೯,೮೬,೦೦೦ ರೂಪಾಯಿ ಪಾವತಿಯಾಗಿದೆ. ಇದರಲ್ಲಿ ಇನ್‌ವೆಸ್ಟಿಗೇಟ್ ಮಾಡಿರುವ ಕೇಸುಗಳು ೧೯೭೦-೭೧ ರಲ್ಲಿ ಏನೂ ಆಕ್ಷೇಪಣೆಗಳಿಲ್ಲ ೬ ಇನ್ನೂ ಇನ್‌ವೆಸ್ಟಿಗೇಷನ್

(ಶ್ರೀ ಹೆಚ್. ಎಂ. ಚನ್ನಬಸಪ್ಪ)

ನಲ್ಲಿವೆ. ೧೯೯ ಕೆಲಸಗಳ ಇನ್‌ವೆಸ್ಟಿಗೇಷನ್ ಮಾಡಿದಾಗ ಅಕ್ರಮಗಳು ನಡೆದಿರುವುದು ಪತ್ತೆಯಾಗಿದೆ. ಎಸ್ಟಿಮೇಟುಗಳು ತಯಾರಾದ ಮೇಲೆ ಕೊಟ್ಟಿರುವುದು ೭೫ ಬಿಲ್ಲುಗಳಿಂದ ೩.೮೪ ಲಕ್ಷ ರೂಪಾಯಿ. ಈ ೭೪ ಬಿಲ್ಲುಗಳಲ್ಲಿ ೫೫ ಕೊನೇ ಎರಡು ದಿವಸಗಳ ಕೊಟ್ಟಿರುವುದು. ಎಸ್ಟಿಮೇಟ ತಯಾರಾಗದೆ ಬಿಲ್ಲುಗಳ ಪಾವತಿ, ಅಗ್ರಿಮೆಂಟ ಇಲ್ಲ ವರ್ಕ ಆರ್ಡರ್ ಇಲ್ಲ, ಪ್ರೊಸೀಜರ್ ಇಲ್ಲ. ೩೩೪ ಅಂದಾಜುಗಳು ೧೭ ಲಕ್ಷ ೨೬ ಸಾವಿರ ರೂಪಾಯಿಗಳಿಗೆ ಆಗಿದ್ದು ಎರಡು ಮೂರನೇ ತಾರೀಖುಗಳಲ್ಲಿ ಅನೇಕ ಬಿಲ್ಲುಗಳು ಪಾವತಿಗಾಗಿ ರಷಅಪ್ ಆಗಿವೆ. ಬಿಲ್ಲುಗಳು ಡಿಫೆಕ್ಟಿವ್ ಆಗಿವೆ ಎಂದು ಕಂಡು ಬಂದರೂ ಕೂಡ ೧೨೧ ಬಿಲ್ಲುಗಳಿಗೆ ಸಂಬಂಧಪಟ್ಟಂತೆ ೮ ಲಕ್ಷ ೪೬ ಸಾವಿರ ರೂಪಾಯಿ ಪಾವತಿ ಮಾಡಿದ್ದಾರೆ. ಎಸ್ಟಿಮೇಟ್ಸ್ ಇಲ್ಲದೆ ಪಾವತಿ ಮಾಡಿರತಕ್ಕದ್ದು ೬೨ ಬಿಲ್ಲುಗಳು ಮತ್ತು ಅವರ ಮೊತ್ತ ೩ ಲಕ್ಷ ೮೧ ಸಾವಿರ ರೂಪಾಯಿ. ಇವರಲ್ಲಿ ಎಸ್ಟಿಮೇಟುಗಳಿಲ್ಲದೆ ಫಸ್ಟ್ ಅಂಡ್ ಫೈನಲ್ ಬಿಲ್ ಮಾಡಿದ್ದಾರೆ. ಅಂಥದ್ದು ೪೭ ಬಿಲ್ ಮತ್ತು ಅದರ ಮೊತ್ತ ೨ ಲಕ್ಷ ೨೫ ಸಾವಿರ ರೂಪಾಯಿ. ಕೊನೇ ಘಳಿಗೆಯಲ್ಲಿ ರಷ್ ಮಾಡಿರುವ ಬಿಲ್ಲುಗಳು, ಎಸ್ಟಿಮೇಟ್ ಇರುವುದು, ಎಸ್ಟಿಮೇಟ್ ಇಲ್ಲದೆ ಇರುವುದು ವರ್ಕ್ ಆರ್ಡರ್ ಇಲ್ಲದೆ ಇರುವುದು, ಅಗ್ರಿಮೆಂಟ್ ಇಲ್ಲದೆ ಇರುವುದು ಎಲ್ಲ ಸೇರಿಸಿ ಒಟ್ಟು ೩೩೪ ಬಿಲ್ಲುಗಳ ಪಾವತಿಯಾಗಿದೆ. ಇವೆಲ್ಲವನ್ನೂ ಚೆಕ್ ಮಾಡುವುದಕ್ಕಾಗಿಲ್ಲ. ೧೯೧ ಮಾತ್ರ ಚೆಕ್ ಮಾಡಿದೆ. ಅದರಲ್ಲಿ ಕೂಡ ಕೆಲವು ಐಟಂಗಳನ್ನು ಮಾತ್ರ ತೆಗೆದುಕೊಂಡು ಚೆಕ್ ಮಾಡಿದೆ. ೧೨ ಲಕ್ಷ ೯೨ ಸಾವಿರ ರೂಪಾಯಿನಷ್ಟು ಕೆಲಸ ಇನ್‌ವೆಸ್ಟಿಗೇಟ್ ಮಾಡಿದ್ದು ೭ ಲಕ್ಷ ೮೫ ಸಾವಿರ ರೂಪಾಯಿ ಕೆಲಸಕ್ಕೆ ೧೨ ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಐದು ಲಕ್ಷ ರೂಪಾಯಿ ಹೆಚ್ಚಾಗಿದೆ. This is a lemall bit of a big have. ಏಪ್ರಿಲ್, ಮೇ, ಜೂನ್ ತಿಂಗಳುಗಳಲ್ಲಿ ೭೨ ಲಕ್ಷ ರೂಪಾಯಿ ಖರ್ಚಾಗಿದೆ. ಇದಕ್ಕೆ ಚನ್ನಬಸಪ್ಪ ಜಾತಿಯ ಆಧಾರದ ಮೇಲೆ ಮಾಡುತ್ತಿದ್ದಾನೆ ಎಂದು ದೊಡ್ಡದಾಗಿ ಪ್ರಾಪಗಾಂಡ ಮಾಡುತ್ತಿದ್ದಾರೆ. ನಾನು ಹೇಳುತ್ತೇನೆ, ಹಾಗೆ ಹೇಳಿದರೆ ಅವರ ನಾಲಿಗೆ ತನ್ನಷ್ಟಕ್ಕೆ ತಾನೇ ಕತ್ತರಿಸಿ ಹೋಗುತ್ತದೆ. ಯಾರೂ ಕತ್ತರಿಸಬೇಕಾಗಿಲ್ಲ. ೫೧ ಜನ ಅಧಿಕಾರಿಗಳು ಸಸ್ಪೆಂಡ್ ಆಗಿದ್ದಾರೆ. ಅವರಲ್ಲಿ ಒಬ್ಬರು ಎಕ್ಸಿಕ್ಯೂಟಿವ್ ಇಂಜಿನಿಯರು, ೯ ಜನ ಅಸಿಸ್ಟೆಂಡ್ ಇಂಜಿನಿಯರುಗಳು, ೩೮ ಜನ ಜೂನಿಯರ್ ಇಂಜಿನಿಯರುಗಳು. ೩ ಜನ ಅಕೌಂಟ್ಸ್ ಸಿಬ್ಬಂದಿಯವರು, ಒಟ್ಟು ೫೧ ಜನ. ನಾನು ನನ್ನ ಜನ್ಮದಲ್ಲಿ ಇವನು ಯಾವ ಜಾತಿಯವನು ಎಂದು ಕೇಳಿದವನಲ್ಲ. ಆದರೂ ಇದಕ್ಕೆ ಉತ್ತರ ಕೊಡಬೇಕೆಂದು ಹುಡುಕಿಸಿ ಎಲ್ಲ ವಿವರಗಳನ್ನೂ ಗಂತರ್ಜು ಮಾಡಿಕೊಂಡಿದ್ದೇನೆ ಸಸ್ಪೆಂಡ್ ಆಗಿರುವವರಲ್ಲಿ ೧೪ ಜನ ಬ್ರಾಹ್ಮಣರು, ೧೪ ಜನ ಒಕ್ಕಲಿಗರು. ೧೨ ಜನ ಲಿಂಗಾಯಿತರು ಮತ್ತು ೧೧ ಜನ ಇತರರು ಇದ್ದಾರೆ. ನಾನು ಯಾರನ್ನೇ ಆಗಲೀ ಯಾವ ಜಾತಿಯವನು ಎಂದು ಕೇಳುವುದಕ್ಕೆ ಹೋಗಿಲ್ಲ. ವಿನಾ ಕಾರಣ ನನ್ನ ಮೇಲೆ ಗುಲ್ಲೆಬ್ಬಿಸಿದ್ದಾರೆ. ಏನೋ ಒಂದು ಹಾವು ಬಿಟ್ಟು ಬಿಡುವುದು ಎನ್ನುವ ಹಾಗೆ ನನ್ನ ಮೇಲೆ ಮಿಥ್ಯಾರೋಪವನ್ನು ಮಾಡಿದ್ದಾರೆ. ಆ ಹಾವು ರಬ್ಬರ್ ಹಾವು. ಅದನ್ನು ಈ ಸಭೆಯಲ್ಲಿ ಬಿಟ್ಟರು. ತಾವು ಕೂಡ ಅದು ರಬ್ಬರ್ ಹಾವು ಎಂದು ಅಧಿಕೃತವಾಗಿ ಹೇಳಿಬಿಟ್ಟಿರಿ. ನಿಜವೋ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ನೀವು ನಿಮ್ಮ ನಾಯಕರ ಮೇಲೆ ಬ್ರಹ್ಮಾಸ್ತ್ರವನ್ನು ಬಿಟ್ಟುಬಿಡಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ದಯವಿಟ್ಟು ಮಧ್ಯೆ ಮಾತನಾಡಿ ನನಗೆ ತೊಂದರೆ ಕೊಡಬಾರದಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ಆರೋಗ್ಯ ಸರಿಯಾಗಿಲ್ಲ.

ಹಾಸನದ ಪ್ರಕರಣದಲ್ಲಿ ಮೊದಲ ನೋಟಕ್ಕೆ ಆಪಾದನೆಗಳು ರುಜುವಾತಾಗಿ ಹೋದುವು. ತಪ್ಪು ಮಾಡಿದ ಅಧಿಕಾರಿಗಳಿಗೆ ರಕ್ಷಣೆ ಕೊಡುವುದಲ್ಲಿ ಪ್ರಬಲವಾದ ಪ್ರಯತ್ನಗಳು ಆ ಹೊತ್ತಿನಿಂದಲೂ ಪ್ರಾರಂಭವಾಗಿ ಈ ಹೊತ್ತಿನವರೆಗೂ ನಡೆದಿವೆ ಅಧಿಕಾರಿಗಳು ತಿರುಬಿಗಿದ್ದಾರು ಎನ್ನುವ ಹೆದರಿಕೆಯಿಂದ ಇರಬಹುದು. ನಾನಾಗಲೇ ಹೇಳಿದಂತೆ ಯಾರು ಸತ್ಯವನ್ನು ನುಡಿದು, ಪ್ರಾಮಾಣಿಕತೆಯಿಂದ ನಡೆದಂತೆ ಹೇಳುತ್ತಾರೆ ಅವರ ಬಗ್ಗೆ ಸರ್ಕಾರ ಸಹಾನುಭೂತಿಯಿಂದ ವಿಚಾರಣೆ ಮಾಡುತ್ತದೆ ಎಂದು ಹೇಳುತ್ತೇನೆ. ಅವರು ಮಾಡಿರುವ ತಪ್ಪು ಪೂರ್ತಿಯಾಗಿ ಹೋಗುವುದಿಲ್ಲ ಅವರ ಬಗ್ಗೆ ಸ್ವಲ್ಪ ಸಹಾನುಭೂತಿ ತೋರಿಸುತ್ತೇವೆಂದು ಹೇಳುತ್ತೇನೆ. ಅವರು ಗುಟ್ಟು ರಟ್ಟು ಮಾಡಿದರೆ ನಮ್ಮ ಗತಿ ಏನು ಎನ್ನುವ ಭಯವಿದೆ. ಆಗ ಇಲ್ಲಿ ಪಿತೂರಿಗಳು ನಡೆಸುವ ಪ್ರಯತ್ನಗಳು ಆದವು. ಈ ಪಿತೂರಿಗಳೆಲ್ಲಾ ಎಲ್ಲಿ ನಡೆದವು ಎನ್ನುವುದನ್ನು ಪರಿಶೀಲನೆ ಮಾಡಿದ ನಂತರ ನನಗೆ ಇದರ ವಿವರಗಳು ತಿಳಿದವು. ಹಾಸನದಲ್ಲಿ ಒಟ್ಟು ಅರಣ್ಯ ಪ್ರದೇಶವಿದೆ. ಅದು ಗೊಡೆಕಟ್ಟೇ ಫಾರೆಸ್ಟು ಎಂದು. ಈ ಫಾರೆಸ್ಟಿನಲ್ಲಿ ಒಂದು ಫಾರೆಸ್ಟು ಲಾಡ್ಜ್ ಇದೆ. ತಾರೀಖು ೨ ರಲ್ಲಿ ಇಲ್ಲಿ ಯಾವ ರೀತಿ ದೂರು ತೆಗೆಯಬೇಕು ಮತ್ತು ಹೇಗೆ ಯೋಚನೆ ಮಾಡಬೇಕು ಎಂದು ಇಲ್ಲಿ ಸೇರಿದ್ದರು. ಹಣದಾಸೆಗೋಸ್ಕರ ಇಲ್ಲಿನ ದೊಡ್ಡ ಕಂಟ್ರಾಕ್ಟರುಗಳು ಯಾರ್ಯಾರ

ಪ್ರಚೋದನೆಗೆ ಒಳಗಾಗಿ ಸೇರಿದ್ದರು ಎಂದು ಪೇಪರಿನಲ್ಲಿ ಬಂದಿದ್ದಂತೆ ಇದು ನಿಜ. ನನಗೆ ಬಂದಿರುವ ವರ್ತಮಾನದ ಪ್ರಕಾರ ಕೇರಳದಿಂದ ಒಬ್ಬ ಮಾಂತ್ರಿಕನನ್ನೂ ಕೂಡ ಕರಸಿ ನನ್ನ ಮೇಲೆ ಮಾಟ ಮಾಡಿಸಿ ನನ್ನ ಜೀವವನ್ನೇ ತೆಗೆಯುವ ಪ್ರಯತ್ನ ಮಾಡಿದ್ದರು ಎಂದೂ ಕೇಳುತ್ತೇನೆ. ಇದು ಸತ್ಯವಾದ ಸಂಗತಿ ಎಂದು ನಾನು ಇಲ್ಲಿ ಹೇಳಿದರೆ ಅದನ್ನು ನೋಡಿ ನೀವೆಲ್ಲ ನಗುತ್ತೀರಿ ಮತ್ತು ಕ್ಷನು ಎಂದು ಕರೆಯುತ್ತೀರಿ.

ಒಬ್ಬ ಸದಸ್ಯರು.—ಮಾಯಾ ಮಂತ್ರಕ್ಕೆ ಮಾನ್ಯ ಮಂತ್ರಿಗಳು ಹೆದರುತ್ತಾರೆಯೇ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದರಲ್ಲಿರುವ ವಿಷಯ ಹೀಗಿದೆ. ಮಿತಿಮೀರಿದ ದೂರುಗಳನ್ನು ಮಾಡಿದರೆ ಅದರಿಂದೇನೂ ಮಾಡಲು ಸಾಧ್ಯವಿಲ್ಲ. ಆಮೇಲೆ ಕೂಡ ದೊಡ್ಡದಾಗಿ ತೆರೆಮರೆಯಲ್ಲಿ ನಿಂತು ಬೇಕಾದ ಹಾಗೆ ಒತ್ತಡ ತರಲು ಪ್ರಯತ್ನ ಮಾಡಿದರು. ಇದನ್ನು ಪರಿಶೀಲಿಸಿದ ಮೇಲೆ ಇದು ಬಣ್ಣದ ನಾಗರಹಾವು ಹಾಗೂ ರಬ್ಬರು ನಾಗರ ಹಾವು ಎಂದು ಸ್ಪಷ್ಟವಾಯಿತು. ಇಂತಹ ರಬ್ಬರಿನ ಹಾವನ್ನು ತಂದು ಇಲ್ಲಿ ನನ್ನ ಮೇಲೆ ಬಿಟ್ಟರು. ಆದರೆ ಅದು ನಾಗರಹಾವಲ್ಲ ಕೇವಲ ರಬ್ಬರು ಹಾವು. ಇದರ ಬಗ್ಗೆ ಕಾನೂನು ಬದ್ಧವಾಗಿ ನಾನು ಎಲ್ಲ ವಿವರಗಳನ್ನೂ ತಿಳಿಸುತ್ತೇನೆಂದು ಈ ದೂರು ಬಂದ ದಿವಸವೇ ಹೇಳಿದ್ದೆ. ನಿಮಗೆ ಕಣ್ಣಿಗೆ ಕಾಣುವಷ್ಟು ಇದು ಸುಲಭವಲ್ಲ. ಇವೆಲ್ಲಾ ಕಾರಣಗಳನ್ನು ನಾನು ಬಜೆಟ್ಟು ಭಾಷಣ ಮಾಡುವಾಗ ಪೂರ್ತಿಯಾಗಿ ಹೇಳುತ್ತೇನೆಂದು ಸಭೆಯಲ್ಲಿ ವಾಗ್ದಾನ ಮಾಡಿದ್ದೆ. ಆ ವಾಗ್ದಾನಕ್ಕನುಗುಣವಾಗಿ ಈ ರಬ್ಬರು ನಾಗರಹಾವನ್ನು ಬಿಡಲಿಕ್ಕೆ ಯಾರು ಕಾರಣರು ಎನ್ನುವುದರ ಬಗ್ಗೆ ಇಲ್ಲಿ ಹೇಳಿದ್ದೇನೆ. ಇವಿಷ್ಟು ಹಾಸನದ ವಿಷಯ ಎಂದು ಇಲ್ಲಿ ಹೇಳಿದ್ದೇನೆ. ಇನ್ನೂ ಅನೇಕ ಹಾಗೂ ಮಹತ್ತರವಾದ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಬೇಕೆಂದಿದ್ದೆ. ಇವನ್ನೆಲ್ಲಾ ವಿಚಾರ ಮಾಡಿದ ಮೇಲೆ ಹಾಸನದ ಹಗರಣದ ಬಗ್ಗೆ ಮಾನ್ಯ ಶ್ರೀ ಚನ್ನಬಸಪ್ಪನವರು ಕಾಂಗ್ರೆಸ್ಸಿನಲ್ಲಿರಲೂ ಯೋಗ್ಯತೆ ಇಲ್ಲ ಎಂದು ನನ್ನ ಮೇಲೆ ಹಾಸನದ ಜಿಲ್ಲಾ ಕಾಂಗ್ರೆಸ್ಸು ಪಕ್ಷದವರು ನಿರ್ಣಯ ಮಾಡಿದ್ದಾರೆ. ನಾನು ಕಾಂಗ್ರೆಸ್ಸಿಗೆ ಬಂದು ಸುಮಾರು ೪೨ ವರ್ಷಗಳಾಗಿರಬಹುದು. ಬಹುಶಃ ನನ್ನ ಮೇಲೆ ದೂರು ಮಾಡಿದವರಿಗೆ ಇನ್ನೂ ೪೨ ವರ್ಷ ಕೂಡ ಇಲ್ಲ. ನಾನು ಕಾರಾಗೃಹವಾಸ ಮಾಡಿ ಅನೇಕ ಹೋರಾಟಗಳನ್ನು ಈ ದೇಶದಲ್ಲಿ ಧೈರ್ಯದಿಂದ ಹಾಗೂ ನಿಷ್ಕಪಟದಿಂದ ನಡೆಸಿ ಸತ್ಯದಿಂದ ಹೋರಾಡಿದ ಕಾಂಗ್ರೆಸಿಗೆ ನಾನು. ಹಾಗಿರುವ ನನ್ನನ್ನು ಕಾಂಗ್ರೆಸ್ಸಿನಿಂದ ಇವರು ಯಾರೂ ಕಿತ್ತುಹಾಕಲು ಸಾಧ್ಯವಿಲ್ಲ ಎರಡು ವರ್ಷಗಳಿಂದ ಇವರು ಕಾಂಗ್ರೆಸ್ಸಿಗರಾಗಿ ಬಂದು ನನ್ನನ್ನು ವಿರೋಧ ಮಾಡಿ ಕಾಂಗ್ರೆಸ್ಸಿನಿಂದ ಕಿತ್ತು ಹಾಕಬೇಕೆಂದು ಮಾಡಿದರೆ ಅದರಿಂದೇನೂ ಆಗುವುದಿಲ್ಲ. ಈ ಪ್ರಕಾರ ಇಲ್ಲದ ವರದಿ ಹಬ್ಬಿಸಿದರೆ ಇದರಿಂದೇನೂ ಉಳಿಯುವುದಿಲ್ಲ. ಇನ್ನೂ ಕೆಲವರು ಹೇಳಿದ್ದು ನನ್ನ ಹೆಂಡತಿಗೆ ನಿನ್ನ ಗಂಡ ಯಾವಾಗ ಸಾಯುತ್ತಾನೆ ಎಂದು ಇಲ್ಲದ ಗುಲ್ಲೆಬ್ಬಿಸಿದರು ಹೇಗಾದರೂ ಮಾಡಿ ಚನ್ನಬಸಪ್ಪನವರು ಸಾಯುವಂತೆ ಮಾಡಬೇಕು. ಇಲ್ಲ ಹಾಗೆ ಅವರು ಸಾಯದೇ ಇದ್ದರೆ ಅವರಿಂದ ಪಿ ಡಬ್ಲ್ಯು ಡಿ ಇಲಾಖೆಯನ್ನು ಕಿತ್ತುಕೊಳ್ಳುವಂತೆ ಮಾಡಬೇಕು. ಯಾವ ವಿಧದಿಂದಲಾದರೂ ಇವರಿಗೆ ತೊಂದರೆ ಕೊಡಬೇಕು ಎನ್ನುವುದೇ ಇವರ ಉದ್ದೇಶವಾಗಿತ್ತು. ನನಗೆ ಸಾಧ್ಯವಿದ್ದಷ್ಟು ವಿಚಾರಗಳನ್ನು ಅರಿಕೆ ಮಾಡಿದ್ದೇನೆ. ಇನ್ನು ಹೆಚ್ಚು ಹೇಳಲು ನನಗೆ ಸದ್ಯದಲ್ಲಿ ಶಕ್ತಿ ಇಲ್ಲ. ಇದಕ್ಕೆ ತಮ್ಮ ಕ್ಷಮೆ ಕೇಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಿಯ್ಯ.—ನಾನು ಹರಿಜನರ ಹಾಸ್ಟಲ್ ಬಗ್ಗೆ ಕೇಳಿದೆ. ಇದರ ವಿಚಾರ ತಾವು ಹೇಳಲೇ ಇಲ್ಲ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ತಾವು ಹೇಳಿದಂತೆ ಹರಿಜನರ ಹಾಸ್ಟಲ್ ಕಟ್ಟಡದಲ್ಲಿ ೧೫ ಟನ್ನುಗಳಷ್ಟು ಕಬ್ಬಿಣ ಮಾಯವಾಗಿದೆ ಹಾಗೂ ೩೦೦೦ ಸಿಮೆಂಟು ಮೂಟೆಗಳಿಲ್ಲ. ಇವನ್ನು ಇಲ್ಲಿನ ಕಂಟ್ರಾಕ್ಟರುಗಳಿಗೆ ಇಂಜಿನೀಯರು ಸೂಚನೆ ಕೊಟ್ಟು ಈ ಕಟ್ಟಡಗಳಿಗೇ ಉಪಯೋಗಿಸಬೇಕು, ಮತ್ತು ಸರಕಾರದ ರೂಲ್ಸು ಪ್ರಕಾರ ಕಟ್ಟಡದೊಳಗೇ ಇವನ್ನು ಇಟ್ಟಿರಬೇಕು, ಇದನ್ನು ಬೇರೆ ಕಡೆಗೆ ಅಪಹಾರ ಮಾಡಲು ಸಾಧ್ಯವಿಲ್ಲ. ಇದರಿಂದ ಇದರಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಎಂದು ಗೊತ್ತಾಗುತ್ತದೆ. ಕಾನೂನು ಪ್ರಕಾರ ಇವರ ಮೇಲೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ ಮತ್ತು ಇದರ ಜೊತೆಗೆ ಅಗ್ರಿಮೆಂಟಿನಲ್ಲೂ ಕೂಡ ಇದರ ಬಗ್ಗೆ ಹೇಳಲಾಗಿದೆ: Disclosed lack of adequate supervision of officers over their subordinates, who have not carried out inspection. The Vigilance Commission have listed the omissions and commissions on the part officers and have recommended

(ಶ್ರೀ ಹೆಚ್. ಎಂ. ಚನ್ನಬಸಪ್ಪ)

suitable action ಇದರಲ್ಲಿ ಎಕ್ಸಿಕ್ಯೂಟಿವ್ ಇಂಜನೀಯರುಗಳು, ಅಸಿಸ್ಟೆಂಟ್ ಇಂಜನೀಯರುಗಳು ಹಾಗೂ ಜೂನಿಯರು ಇಂಜನೀಯರುಗಳು ಇವರುಗಳೆಲ್ಲಾ ಜವಾಬುದಾರರಾಗಿರುತ್ತಾರೆ. ಇಷ್ಟು ವಿಷಯಗಳನ್ನು ಹೇಳಿ ಇನ್ನು ಹೆಚ್ಚು ಹೇಳಲು ಆಗಲಿಲ್ಲ ಆದಕ್ಕಾಗಿ ಕ್ಷಮಿಸಿ ಎಂದು ಹೇಳುತ್ತೇನೆ.

† ಶ್ರೀ ಹೆಚ್. ಡಿ. ದೇವೇಗೌಡ — (ಹೊಳೆನರಸೀಪುರ) ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಮಂತ್ರಿಗಳು ಭಾಷಣ ಮಾಡುವಾಗ ಮಧ್ಯದಲ್ಲಿ ಮಾತನಾಡುವುದಿಲ್ಲ ಎಂದು ಹೇಳಿದ್ದೆ. ಅದರಂತೆ ಇಲ್ಲಿಯವರೆಗೆ ಮಾತನಾಡಲಿಲ್ಲ. ನಾನು ಅವರು ಭಾಷಣ ಮುಗಿಸಿದ ನಂತರ ವಿವರಗಳನ್ನು ಕೇಳಬೇಕಾಗುತ್ತದೆ ಎಂದು ಹೇಳಿದಂತೆ ಇಲ್ಲಿ ನನಗೆ ಕೆಲವು ವಿವರಗಳನ್ನು ಅವರು ಕೊಡಬೇಕಾಗುತ್ತದೆ. ಆ ವಿವರಣೆಗಳು ಈಗಲೇ ನಮಗೆ ಬೇಕು. ಮಾನ್ಯ ಶ್ರೀ ಹುಚ್ಚ ಮಾಸ್ತಿಗೌಡರು ಕೆಲಸನ್ನು ಡಿಸ್ಮಿಸ್ ಮಾಡು ಬರಬೇಕೆಂದು ತಾವು ಹೇಳಬಹುದು. ಅದನ್ನು ಬೇಕಾದರೆ ನಾವು ಎರಡು ಗಂಟೆಗೊಳಗೆ ಮುಗಿಸಿಕೊಡುತ್ತೇವೆ. ಅವರ ಇಂದು ಇಲ್ಲಿ ಬಂದಿರುವುದು ಪ್ರಮುಖವಾದ ವಿಷಯಗಳು ನಾನು ಇಲ್ಲಿ ಬಹಳ ಪ್ರಾಮುಖ್ಯವಾದ ಆಪಾದನೆಯನ್ನು ಮಾಡಿದ್ದೇನೆ. ಶ್ರೀ ಮಾನ್ ಚನ್ನಬಸಪ್ಪನವರು ಇಲ್ಲಿ ಅವರ ಅಸಹಾಯಕತೆಯನ್ನು ಹೇಳಿಕೊಂಡಿದ್ದಾರೆ. ಮತ್ತು ಯಾವ ಯಾವ ಸನ್ನಿವೇಶಗಳಿಗೆ ಅವರು ಸಿಕ್ಕಿದ್ದಾರೆ ಎಂದು ಹೇಳಿದ್ದಾರೆ. ಇದರ ಬಗ್ಗೆ ನನಗೆ ಈಗ ಬೇಕಾಗಿರತಕ್ಕದ್ದು ಎಂದರೆ ನಾನು ಬಹಳ ಪ್ರಮುಖವಾದ ಒಂದು ಆಪಾದನೆಯನ್ನು ಬಿಜಾಪುರ ಡಿವಿಜನ್ನು ಬಗ್ಗೆ ಮಾಡಿದ್ದೆ. ಬೆಂಗಳೂರು ಡಿವಿಜನ್ ಬಗ್ಗೆ ಹೇಳಿದ್ದೆ. ಇದರ ಬಗ್ಗೆ ಒಂದು ಪ್ರಿಲಿಮಿನರಿ ರಿಪೋರ್ಟ್ ಬಂದಿದೆ ಎಂದು ಕೇಳಿದ್ದೆ. ಅದು ಇನ್ನೂ ತಮಗೆ ಬಂದಿಲ್ಲವೇ? ವಿಜಿಲೆನ್ಸ್ ಕಮಿಷನ್ ಕಡೆಯಿಂದ ರಿಪೋರ್ಟ್ ಬಂದಿಲ್ಲ ಎಂದರೆ ಇದರ ಪ್ರಿಲಿಮಿನರಿ ರಿಪೋರ್ಟ್ [illegible] ಬರಬೇಕೆಂದು ಹೇಳಬಹುದಿತ್ತು? ವಿಜಿಲೆನ್ಸ್ ಕಮಿಷನ್ ರಿಪೋರ್ಟಿನಿಂದ ನೋಡಿದಾಗ ಇದರಲ್ಲಿ ಪ್ರೈಮಾ ಫೇಸಿ ಕೇಸು ಇದೆಯೋ ಇಲ್ಲವೋ ಎನ್ನುವುದನ್ನು ತಾವು ತಿಳಿಸಬೇಕು ಹಾಗೇನೆ ಅಪ್ಪರ್ ಕೃಷ್ಣಾ ಯೋಜನೆ ಬಗ್ಗೆ ವಿಜಿಲೆನ್ಸ್ ಕಮಿಷನ್ ರಿಪೋರ್ಟ್ ಈಗಾಗಲೇ ಬಂದಿದೆ ಎಂದು ಕೇಳುತ್ತೇನೆ ಇದರಲ್ಲಿ ಯಾವ ಯಾವ ವಿವರಗಳು ಬಂದಿವೆ? ಇನ್ನು ಬಿಜಾಪುರ ಡಿವಿಜನ್‌ನಲ್ಲಿ ಏನು [illegible] ಇಲ್ಲ ಎಂದು ಹೇಳಿದಿರಿ. ಇಲ್ಲಿರುವ ಅಧಿಕಾರಿಗಳನ್ನು ಸಸ್ಪೆಂಡು ಮಾಡಲು ವಿಜಿಲೆನ್ಸ್ ಕಮಿಷನ್ ರಿಪೋರ್ಟ್ ಬಂದಿದೆಯೇ ಇಲ್ಲವೇ ಇದನ್ನು ತಾವು ತಿಳಿಸಬೇಕು. ಏಕೆಂದರೆ ಒಂದು ಕಡೆ [illegible] ಕೆಲವು ಅಧಿಕಾರಿಗಳನ್ನು ಸಸ್ಪೆಂಡು ಮಾಡಿದ್ದೀರಿ. ಇದರಲ್ಲಿ ಅಧಿಕಾರಿಗಳನ್ನು ಸಸ್ಪೆಂಡು ಮಾಡುವುದರ ಬಗ್ಗೆ ಸರ್ಕಾರದ ನೀತಿಯೇನು ಎನ್ನುವುದನ್ನು ಹೇಳಲಿಲ್ಲ. ಇವನ್ನು ಮೇಲೆ ಅಧಿಕಾರಿಗಳನ್ನು ಯಾವ ರೀತಿಯಾಗಿ ಸಸ್ಪೆಂಡು ಮಾಡುತ್ತೀರಿ ಎನ್ನುವ ನೀತಿ ಇಲ್ಲಿ ನಮಗೆ ಬೇಕಾಗಿದೆ. ಇಲ್ಲಿನ [illegible] ಸರಕಾರ ಆದೇಶ ಕೊಡುವುದಿಲ್ಲ ಎಂದಾದರೂ ಹೇಳಿ. ನಿಮ್ಮ ಸರಕಾರದ ಧೋರಣೆ ಕೂಡ ಇದರಲ್ಲಿದೆ. ಇದರಲ್ಲಿ ಸನ್ನಿವೇಶಗಳಿಗೆ ಬಲಿಯಾಗ ಬೇಕಾಯಿತು ಎಂದು ಅವರೇ ಹೇಳಿದ್ದಾರೆ. ಇದು [illegible] ರವರಿಗೂ ಆಗಿದೆ. ಆದುದರಿಂದ ಈಗ ನಿಮ್ಮ ನೀತಿಯನ್ನು ಬದಲಾವಣೆ ಮಾಡಿಕೊಳ್ಳಬೇಕು ಎಂದು ಹೇಳುತ್ತೀರಾ? ನಿಮ್ಮ ಮಾರ್ಗ ಯಾವ ರೀತಿ ಇರಬೇಕು ಅದನ್ನಾದರೂ ತಿಳಿಸಿ. ಸಸ್ಪೆಂಡು ಮಾಡಲು ನಿಮಗೆ ಪ್ರಿಲಿಮಿನರಿ ರಿಪೋರ್ಟ್ ಬಂದಿದೆಯೋ ಇಲ್ಲವೋ? ಇದರಲ್ಲೇನಾದರೂ ಚಾರ್ಜ್ ಶೀಟುಗಳಿವೆಯೋ? ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲು ಏನಾದರೂ ಯೋಚಿಸಿದ್ದೀರಾ? ಇದೇ ವರದಿಯ ಬಗ್ಗೆ ನಿನ್ನೆ ನಿಮ್ಮ ಪಕ್ಷದ ಪಾರ್ಟಿಯೊಳಗೆ ನನ್ನ ಬಗ್ಗೆ ಟೀಕೆ ಸಾಕಷ್ಟು ಬಂದಿರುವುದು ಎಂದು ಪತ್ರಿಕೆಗಳಲ್ಲಿ ಬಂದಿವೆ. ಇದನ್ನು ನಿಜವಾಗಿ ತಿಳಿಯಲು ನಿಮ್ಮ ಧೋರಣೆ ಏನು ಅದನ್ನು ತಿಳಿಸಿ.

ಇದರ ಬಗ್ಗೆ ವಿವರಣೆ ಕೊಡಬೇಕು; ಇಲ್ಲವಾದರೆ ನಮಗೆ ಸಮಾಧಾನವಾಗುವುದಿಲ್ಲ. ಬೆಂಗಳೂರು ಡಿವಿಜನ್‌ನಲ್ಲಿ ಸುಮಾರು ೬೦೦ ಟನ್ ಕಬ್ಬಿಣ ಶಾರ್ಟೇಜ್ ಬಂದಿದೆ ಎಂದು ಕೇಳಿದ್ದೇನೆ. ಅದಕ್ಕಾರಣ ಸಂಬಂಧಪಟ್ಟ ಕಂಟ್ರಾಕ್ಟರುಗಳನ್ನು ಪ್ರಾಸಿಕ್ಯೂಟ್ ಮಾಡಿದ್ದೀರಾ? ಸಂಬಂಧಪಟ್ಟ ಅಧಿಕಾರಿಗಳನ್ನು ಪ್ರಾಸಿಕ್ಯೂಟ್ ಮಾಡಿದ್ದೀರಾ ಎಂಬುದನ್ನು ತಿಳಿಸಬೇಕು. ಇಂಥ ಪ್ರಕರಣ [illegible] ನಡೆದಾಗ ಸಂಬಂಧಪಟ್ಟವರನ್ನು ಪ್ರಾಸಿಕ್ಯೂಟ್ ಮಾಡಿದ್ದಾರೆ. ಆದ್ದರಿಂದ ಇಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಾ ಎಂಬುದನ್ನು ತಿಳಿಸಬೇಕು. ಏಕೆಂದರೆ ೬೦೦ ಟನ್ ಕಬ್ಬಿಣ ಸುಮಾರು ೨೦ ಲಕ್ಷ ರೂಪಾಯಿಗಳಾಗುತ್ತದೆ.

12-00 Noon.

ಶ್ರೀ ಎಚ್. ಎಂ. ಚನ್ನಬಸಪ್ಪ.—[illegible] ೬೦೦ ಟನ್ ಕಬ್ಬಿಣ ಹೋಗಿದೆ ಎಂದು ರಿಪೋರ್ಟ್ ಬಂದಿದೆ. It amounts to misappropriation ಎಂದು ಈಗಾಗಲೇ ಹೇಳಿದ್ದೇನೆ. ಎಂದು

ಕಡೆ ಅಧಿಕಾರಿಗಳು ಸರಿಯಾಗಿ ಮೇಲ್ವಿಚಾರಣೆ ಮಾಡದೆ ಅಪರಾಧ ಮಾಡಿದ್ದರೆ ಅವರು ಶಿಕ್ಷೆಗೆ ಗುರಿಯಾಗುತ್ತಾರೆ. ಕಂಟ್ರಾಕ್ಟರ್ ಮೇಲೆ ಅಪಾದನೆ ಇದ್ದರೆ ಅವರ ಮೇಲೆ ನಮ್ಮ ಪಿ.ಡಬ್ಲ್ಯು.ಡಿ. ಕೋಡ್ ಪ್ರಕಾರ ಏನು ಕಾರ್ಯಾನುಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಮತ್ತು ಪ್ರಾಸಿಕ್ಯೂಟ್ ಮಾಡಬಹುದು ಎಂದು ಕಂಡುಬಂದರೆ ಆ ಬಗ್ಗೆ ರಿ—ರಿಪೋರ್ಟ್ ಬಂದಮೇಲೆ ವಿಚಾರಣೆ ನಡೆಸು ಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಕಬಿನಿ ವಿಚಾರ ಹೇಳಲಿಲ್ಲ ?

ಶ್ರೀ ಎಚ್. ಎಂ. ಚನ್ನಬಸಪ್ಪ.—Report is awaited—ಎಂದು ಹೇಳಿದ್ದೇನೆ.

SRI H. D. DEVEGOWDA.—Whether final report is awaited or preliminary report? They have fixed certain charges. Whether is any prima-facie case or not?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಏನು ವಿವರ ಬೇಕು ಎಂಬುದನ್ನು ಕೇಳಿ ; ಅದನ್ನು ನಮ್ಮ ಸೆಕ್ರೆಟರಿಯವರು ಗುರುತು ಮಾಡಿಕೊಳ್ಳುತ್ತಾರೆ

H. D. DEVEGOWDA.-All there cases are enquired by the Vigilance Commission There are certain *prima facie* cases.

SRI H.M. CHANNABASAPPA.—Whatever clarifications he wants may be asked so that our Secretary will make a note of them, and ants the reply will be given afterwards.

ಶ್ರೀ ಎಚ್. ಡಿ. ದೇವೇಗೌಡ.—ಅವರು ಬರೆದುಕೊಳ್ಳಲಿ ; ನಂತರ ಅಧ್ಯಕ್ಷರು ಟೈಮ್ ಫಿಕ್ಸ್ ಮಾಡಿದ ಮೇಲೆ ಮಂತ್ರಿಗಳು ಉತ್ತರ ಕೊಡಬಹುದು. ಮತ್ತೊಂದು ಮುಖ್ಯವಾದ ಅಂಶವೇನೆಂದರೆ, ರಾಜಕಾರಣಿಯಾದವರು ಕಂಟ್ರಾಕ್ಟರ್ ಕಡೆಯಿಂದ ಚೆಕ್ ಪಡೆದಿದ್ದಾರೆಂಬ ಅಪಾದನೆ ಇದೆ ಆ ಬಗ್ಗೆ ಚೆಕ್ ನಂಬರ್ ಕೊಟ್ಟರೆ, ಅವರು ಯಾವುದೇ ಸ್ಥಾನಮಾನದಲ್ಲಿರಲಿ, ಆ ಬಗ್ಗೆ ಸಿ.ಬಿ.ಐ. ಎನ್ಕ್ವೈರಿ ಮಾಡಿಸುತ್ತೀರಾ ? ಅವರು ಈ ಮನೆಯ ಸದಸ್ಯರಾಗಿದ್ದರೆ ಹೆಸರು ಹೇಳುತ್ತಿದ್ದೆ ಆದರೆ ಆಗಿಲ್ಲ ;

SRI. DAYANANDA SAGAR —It is a serious charge. It has to be enquired into if not by the Minister by the Congress Party. But it must be definite with proof and also with specific evidences.

ಶ್ರೀ ಎಚ್. ಡಿ. ದೇವೇಗೌಡ.—ಈ ವಿಚಾರದಲ್ಲಿ ನನಗೆ ಕಾಗದ ಬಂದಿದೆ. ಮಾನ್ಯ ಮಂತ್ರಿಗಳಿಗೂ ಸಹ ಬರೆದಿರಬಹುದು. ಆದ ಕಾರಣ ಆ ಚೆಕ್ ನಂಬರನ್ನು ಕೊಟ್ಟರೆ ಸಿ. ಬಿ. ಐ. ಎನ್ಕ್ವೈರಿ ಮಾಡಿಸುತ್ತೀರಾ ?

ಅಧ್ಯಕ್ಷರು.—ನಾನು ಹೇಳುವುದನ್ನು ಸ್ವಲ್ಪ ಕೇಳಿ; ಏನೆಂದರೆ ಮಾನ್ಯ ಮಂತ್ರಿಗಳು ಎರಡು ಗಂಟೆಗಳ ಕಾಲ ಉತ್ತರ ಕೊಟ್ಟಿದ್ದಾರೆ. ಮತ್ತು ಈಗ ತಾವು ಹೇಳಿದುದನ್ನು ಅವರ ಸೆಕ್ರೆಟರಿಯವರು ಗುರುತು ಮಾಡಿಕೊಳ್ಳುತ್ತಾರೆ ; ನಂತರ ಉತ್ತರ ತರಿಸಿಕೊಡುತ್ತೇನೆಂದು ಹೇಳಿದ್ದಾರೆ. ಆದಕಾರಣ ತಾವು ಹೊರತೇ ಹೇಳಿದಂತೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನ ಡಿಮ್ಯಾಂಡ್‌ಗಳನ್ನು ಜಾಗ್ರತೆ ಮುಗಿಸಿಕೊಡುವುದಾದರೆ, ಮತ್ತು 3 ಗಂಟೆಯ ನಂತರ ಮಾನ್ಯ ಮಂತ್ರಿಗಳು ತಮ್ಮ ಕ್ಲಾರಿಫಿಕೇಷನ್‌ಗಳಿಗೆ ಉತ್ತರ ಕೊಡುತ್ತೇನೆಂದು ಒಪ್ಪಿಕೊಂಡರೆ ಆಗ ಓಟಿಗೆ ಹಾಕುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ದೇವೇಗೌಡರು ಎರಡು ಗಂಟೆಗಳಲ್ಲಿ ಮುಗಿಸಿಕೊಡುತ್ತೇವೆಂದು ಹೇಳಿದರು. ಆದರೆ ಎಷ್ಟು ಜನರು ಮಾತನಾಡುತ್ತಾರೆ ಎಂಬುದನ್ನು ನೋಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನಮ್ಮ ಪಾರ್ಟಿಯಿಂದ ಒಬ್ಬರು ಮಾತನಾಡುತ್ತಾರೆ, ಮಾನ್ಯ ಬಾಗೋಡು ತಿಮ್ಮಪ್ಪನವರು ಮಾತನಾಡಬಹುದು ; ಒಟ್ಟಿನಲ್ಲಿ ನಮ್ಮ ಕಡೆಯಿಂದ ಇಬ್ಬರು ಮಾತನಾಡುವುದು.

ಶ್ರೀ ಕೆ. ಎನ್. — ವೀರಪ್ಪಗೌಡ. ಈ ಕಡೆಯಿಂದಲೂ ಸಹ ಮಾತನಾಡುವವರಿದ್ದಾರೆ.

ಶ್ರೀ ಎಚ್ ಡಿ. ದೇವೇಗೌಡ.—ಹಾಸನದ ಪ್ರಕರಣದಲ್ಲಿ ನಾನು ಹೇಳಿದೆ ಎಂದು ಸರ್ಕಾರದವರಂ ತರಾತುರಿಯಿಂದ ತನಿಖೆ ನಡೆಸಿದರು ಎಂಬುದಾಗಿ ಮಾನ್ಯ ನಂಜೇಗೌಡರು ಹೇಳಿದರು.

ಅಧ್ಯಕ್ಷರು.—ಸರ್ಕಾರದ ಕಡೆಯಿಂದ ಏನು ಸಜೆಸ್ಟ್ ಮಾಡುತ್ತಾರೆ ಎಂಬುದನ್ನು ಮೊದಲು ಕೇಳೋಣ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಹೇಳುವುದೇನೆಂದರೆ, ಈಗ ಮತ್ತೆ ಒಂದು ಗಂಟೆಗೆ ಸಭೆ ಸೇರುವುದಕ್ಕೆ ಬದಲು ಎರಡು ಗಂಟೆಗೆ ಸೇರುವಂತೆ ವ್ಯವಸ್ಥೆ ಮಾಡುವುದು ಒಳ್ಳೆಯದು. ಏಕೆಂದರೆ ಈಗ ಮಾನ್ಯ ದೇವೇಗೌಡರು ಕ್ಲಾರಿಫಿಕೇಷನ್ ಕೇಳಿದರೆ, ಅದಕ್ಕೆ ಉತ್ತರ ತರಿಸಿಕೊಳ್ಳಲು ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಆದಕಾರಣ ಈಗ ತಾವು ಅವರಿಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡಿ. ಮತ್ತೆ ಎರಡು ಗಂಟೆಗೆ ಸಭೆ ಸೇರಿದಾಗ ಅಷ್ಟರೊಳಗೆ ಉತ್ತರ ತರಿಸಿಕೊಡುವುದಕ್ಕೆ ಮಾನ್ಯ ಮಂತ್ರಿಗಳಿಗೆ ಸಾಧ್ಯವಾದರೆ ಸಂತೋಷ. ಇಲ್ಲದಿದ್ದರೆ ರಿಪೋರ್ಟು ಇಲಾಖೆಯ ಬಗ್ಗೆ ಚರ್ಚೆ ನಡೆಯಲಿ, ನಾಳೆ ಬೇಕಾದರೆ ಉತ್ತರ ಕೊಡುತ್ತೇನೆ. ೫ ಗಂಟೆಯ ನಂತರ ಅವರಿಗೆ ಉತ್ತರ ಕೊಡುವುದಕ್ಕೆ ವ್ಯವಸ್ಥೆ ಮಾಡುವುದು ಸರಿ ಎಂದು ಹೇಳುತ್ತೇನೆ.

ಶ್ರೀ ಎಚ್ ಡಿ. ದೇವೇಗೌಡ.—ಇನ್ನು ನಾನು ಅಧಿಕಾರಿಗಳನ್ನು. ಸಸ್ಪೆಂಡ್ ಮಾಡಿರುವ ಬಗ್ಗೆ ಚಾರ್ಜ್ ಮಾಡಿದ್ದೇನೆ. ಬೆಂಗಳೂರು ನಗರ ಕಾರ್ಪೊರೇಷನ್‌ಗೆ ಸೇರಿದ ಒಬ್ಬರು ಎಕ್ಸಿಕ್ಯುಟಿವ್ ಇಂಜಿನಿಯರ್‌ನ್ನು ಸಸ್ಪೆಂಡ್ ಮಾಡಿದ ಮೇಲೆ ಮತ್ತೆ ವಿತ್‌ಡ್ರಾ ಮಾಡಿರುವ ಬಗ್ಗೆ ವಿವರಣೆ ಕೊಟ್ಟಿಲ್ಲ ; ಹಾಸನ ಪ್ರಕರಣದಲ್ಲಿ ಸಸ್ಪೆಂಡ್ ವಿತ್‌ಹೋಲ್ಡ್ ಮಾಡಲಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿರುವ ವಿಚಾರ ಇಂದಿನ ಪತ್ರಿಕೆಯಲ್ಲಿ ವರದಿಯಾಗಿದೆ. ಆದರೆ ಬೆಂಗಳೂರು ಕಾರ್ಪೊರೇಷನ್ ಅಧಿಕಾರಿಯ ಸಸ್ಪೆಂಡ್ ಬಗ್ಗೆ ವಿತ್‌ಡ್ರಾ ಮಾಡಿದ್ದಾರೆಯೋ ಇಲ್ಲವೋ ಎಂಬುದನ್ನು ತಿಳಿಸಬೇಕು.

ಇನ್ನು ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ನನ್ನ ಜಿಲ್ಲೆಗೆ ಸಂಬಂಧಪಟ್ಟಂತೆ ಹೇಮಾವತಿ ಪ್ರಾಜೆಕ್ಟಿನ ಕೆಲಸದ ಬಗ್ಗೆ ಎನ್‌ಕ್ವೈರಿ ಮಾಡಿದರು ಎಂದು ಹೇಳಲಾಗಿದೆ. ಆ ರೀತಿ ಮಾಡಿದ್ದರೆ ಯಾವ ದಿವಸ ಮಾಡಿದ್ದರು ಎಂಬುದನ್ನು ತಿಳಿಸಬೇಕು. ಮಂತ್ರಿಗಳು ಸ್ಥಳಕ್ಕೆ ಹೋಗಿ ಪರೀಕ್ಷೆ ಮಾಡಿದ್ದರೆ ಅವರನ್ನು ದೇಶದ ಜನತೆಯ ಪರವಾಗಿ ಅಭಿನಂದನೆ ಮಾಡಬೇಕಾಗುತ್ತದೆ. ಮತ್ತು ಅವರ ಅಲ್ಲಿ ನಡೆದಿರುವ ತಪ್ಪನ್ನು ಪತ್ತೆ ಹಚ್ಚಿದರೆ ಅದಕ್ಕೆ ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ಆದರೆ ಈ ಬಗ್ಗೆ ಎನ್‌ಕ್ವೈರಿ ಮಾಡಲು ವಿಜಿಲೆನ್ಸ್ ಕಮಿಷನರ್ ಅವರಿಗೆ ಯಾವಾಗ ಆರ್ಡರ್ ಮಾಡಿದರು, ಅವರು ಯಾವಾಗ ತಮ್ಮ ರಿಪೋರ್ಟ್ ಸಲ್ಲಿಸಿದರು ಎಂಬುದನ್ನು ತಿಳಿಸಬೇಕು. "I want to fix the responsibility either on the Secrerary or the Mini,ster." ಮತ್ತು ಈ ಬಗ್ಗೆ ಪ್ರಿಲಿಮಿನರಿ ರಿಪೋರ್ಟ್ ಬಂದಮೇಲೆ ಒಬ್ಬರು ಎಕ್ಸಿಕ್ಯುಟಿವ್ ಇಂಜಿನಿಯರ್ ಅವರನ್ನು ಮತ್ತು ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಅವರನ್ನು ಸಸ್ಪೆಂಡ್ ಮಾಡಿದ್ದಾರೆ. ಆದರೆ The person who has recorded false measurement – he was not suspended. ಮುಖ್ಯವಾಗಿ ಈ ಪ್ರಕರಣದಲ್ಲಿ ಸೆಕ್ರೆಟರಿಯ ಎಕ್ಸಾಮಿನ್ ಮಾಡಿದರೋ, ಚೀಫ್—ಇಂಜಿನಿಯರ್ ಅವರು ಮಾಡಿದರೋ ಅಥವಾ ಮುಖ್ಯಮಂತ್ರಿಗಳು ಮಾಡಿದರೋ ಎಂಬುದು ಗೊತ್ತಿಲ್ಲ. ಆದಕಾರಣ ಈ ಬಗ್ಗೆ ಸಂಬಂಧಪಟ್ಟ ಎಲ್ಲ ವಿವರಣೆಗಳನ್ನು ಕೊಡಬೇಕು ; ಮತ್ತು ಸರ್ಕಾರದ ಧೋರಣೆ ಈ ಬಗ್ಗೆ ಏನಿದೆ ಎಂಬುದನ್ನು ತಿಳಿಸಬೇಕು, ಅಲ್ಲದೆ ಯಾವ ಯಾವ ಜಾತಿಯವರು ಇದ್ದಾರೆ ಎಂಬತಕ್ಕಂಥ ವಿವರಣೆಗಳನ್ನು ಸಹ ಕೊಡಬೇಕು ;

ಇನ್ನು ಗುಲ್ಬರ್ಗ ಪ್ರಕರಣದಲ್ಲಿ ೨೫ ಪರ್ಸೆಂಟ್ ಹಣದ್ದು ಲೂಟಿ ಮಾಡಿದ್ದಾರೆಂದು ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ ಆದ ಕಾರಣ ಇದರ ಬಗ್ಗೆಯೂ ವಿವರಣೆ ಕೊಡಬೇಕು. 25 persent of the money has been swdlowed by the Agents of Congress (O) Party, ಎಂದು ಹೇಳಿದಾರೆ. ಈ ಬಗ್ಗೆ ಸಂಬಂಧಪಟ್ಟವರ ಮೇಲೆ ಕಾರ್ಯಕ್ರಮ ಕೈಕೊಳ್ಳುವುದಕ್ಕೆ ಸರ್ಕಾರಕ್ಕೆ ದಕ್ಷತೆ ಇಲ್ಲವೇ, ಶಕ್ತಿ ಇಲ್ಲವೇ ಎಂಬುದನ್ನು ತಿಳಿಸಬೇಕು. ಇದನ್ನು ನಾನು ಏತಕ್ಕೆ ಹೇಳುತ್ತೇನೆಂದರೆ, My party's prestige has been involved in this. ಆದ ಕಾರಣ ಇದರ ಬಗ್ಗೆ ವಿವರಣೆ ಕೊಡಬೇಕು ಎಂದು ಕೇಳುತ್ತೇನೆ,

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರೋಜೆಕ್ಟ್ ಇರಿಗೇಷನ್ನಿಗೆ ಸಂಬಂಧಪಟ್ಟ ವಿಷಯಗಳು. ಆದರ ಬಗ್ಗೆ ಮುಖ್ಯಮಂತ್ರಿಗಳು ಬಂದ ಮೇಲೆ ಕೇಳಿದರೆ ಅನುಕೂಲವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಎನ್‌ಕ್ವೈರಿ ರಿಪೋರ್ಟ್ ವಿಜಿಲೆನ್ಸ್ ಕಮಿಷನನಿಂದ ಬಂದಿದೆಯೋ ಇಲ್ಲವೇ ? ಪ್ರೈಮಾಫೇಸಿ ಕೇಸ್ ಇದೆಯೋ ಇಲ್ಲವೇ ? ಪ್ರಿಲಿಮಿನರಿ ರಿಪೋರ್ಟ್ ಆಧಾರದ ಮೇಲೆ ಯಾರು ಜವಾಬ್ದಾರರು ಎನ್ನುವುದನ್ನು ಅವರು ಹೇಳಿದ್ದಾರೆಯೇ ?

ಶ್ರೀ ಎಸ್. ಬಂಗಾರಪ್ಪ.—ಹಾಸನ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ಸರ್ಕಾರದ ನಿಲುವು ಏನು ? ಅಲ್ಲಿರುವ ಅಧಿಕಾರಿಗಳು ಅಕ್ರಮಗಳಿಗೆ ಜವಾಬ್ದಾರರಾದರೆ ಅವರನ್ನು ಏಕೆ ಸಸ್ಪೆಂಡ್ ಮಾಡಲಿಲ್ಲ ಎನ್ನುವ ಪ್ರಶ್ನೆಗೆ ಉತ್ತರ ಬಂದಿಲ್ಲ. ಅದು ಬಹಳ ಪ್ರಾಮುಖ್ಯವಾದುದು. ಜೊತೆಗೆ ಮಾನ್ಯ ಮಂತ್ರಿಗಳು ಉತ್ತರದಲ್ಲಿ ವಿಲಾಸಿ ಜೀವನದ ಗುಂಪು ಇದೆ, ರಾಜಕೀಯ ಪ್ರಭಾವ ವಿಪರೀತವಾಗಿದೆ, ಬೆದರಿಕೆ ಬಂದಿದೆ ಇತ್ಯಾದಿ ಹಲವಾರು ವಿಷಯಗಳನ್ನು ಹೇಳಿದರು. ರಾಜ್ಯ ಸರ್ಕಾರದ ಹಣಕಾಸು ವ್ಯರ್ಥವಾಗಿದೆ, ಅನ್ಯಾಯ ನಡೆದಿದೆ ಎನ್ನುವುದರ ಜೊತೆಗೆ ಅನೇಕ ವಿಷಯಗಳನ್ನು ಅವರ ಉತ್ತರದಲ್ಲಿ ಹೇಳಿರುವುದರಿಂದ ನನಗನ್ನಿಸುತ ದೆ. ವಿಜಿಲೆನ್ಸ್ ಕಮಿಷನ್‌ನವರು ತನಿಖೆ ಮಾಡಿ ವರದಿಯನ್ನು ಕೊಟ್ಟರೂ ಸಹಿತ ಅದು ಪ್ರಕರಣಕ್ಕೆ ಸಂಬಂಧಪಟ್ಟ ವರದಿ ಮಾತ್ರ ಆಗುತ್ತದೆ ಮಾನ್ಯ ಮಂತ್ರಿಗಳು ಹೇಳಿರುವ ಅನೇಕ ವಿಷಯಗಳನ್ನು ಅವರು ತನಿಖೆ ಮಾಡುವುದಕ್ಕೆ ಅಧಿಕಾರ ಬರುವುದಿಲ್ಲ. ಆದ್ದರಿಂದ ನ್ಯಾಯಾಂಗ ತನಿಖೆಯಾಗಬೇಕು ಎಂದು ವಿರೋಧ ಪಕ್ಷದ ಪರವಾಗಿ ಕೇಳುತ್ತೇನೆ ಇದಕ್ಕೆ ಸರ್ಕಾರ ಒಪ್ಪಬೇಕು. ಹೈ ಕೋರ್ಟಿನ ಒಬ್ಬ ನ್ಯಾಯಾಧೀಶರನ್ನು ಈ ನ್ಯಾಯಾಂಗ ತನಿಖೆಯನ್ನು ಮಾಡುವುದಕ್ಕೆ ನೇಮಕ ಮಾಡಬೇಕು.

೧೯೭೨ನೇ ಇಸವಿ ಮಾರ್ಚಿ ತಿಂಗಳಿನಲ್ಲಿ ಅಧಿಕಾರಕ್ಕೆ ಬಂದುದಾಗಿ ತಿಳಿಸಿದರು. ಆಗ ಎಷ್ಟು ಯೋಜನೆಗಳು ರಾಜ್ಯ ಸರ್ಕಾರದ ಬಳಿ ಇದ್ದುವು ? ಆದಾದ ನಂತರ ಎಷ್ಟು ಯೋಜನೆಗಳು ಆದುವು ? ಸಿಡಬ್ಲ್ಯುಪಿಸಿ ಅವರು ಟೆಕ್ನಿಕಲ್ ಕ್ಲಿಯರೆನ್ಸ್ ಎಷ್ಟು ಯೋಜನೆಗಳಿಗೆ ಕೊಟ್ಟಿದ್ದಾರೆ ಎನ್ನುವ ವಿಷಯವನ್ನು ತಿಳಿಸಲಿಲ್ಲ. ಅದನ್ನು ದಯಮಾಡಿ ತಿಳಿಸಬೇಕು.

ಬಜೆಟೆಡ್ ವರ್ಕ್ಸ್ ಏನಿವೆ ಅವುಗಳಲ್ಲಿ ಅನೇಕವನ್ನು ಮಾಡಿಲ್ಲ, ನಾನು ಸೊರಬ ಚಂದ್ರಗುತ್ತಿ ರಸ್ತೆಯನ್ನು ಅಸ್ಫಾಲ್ಟ್ ಮಾಡಿಲ್ಲವೆನ್ನುವ ವಿಚಾರ ಹೇಳಿದೆ. ಅದೇ ರೀತಿ ರಾಜ್ಯದಲ್ಲಿ ಅನೇಕ ಕೆಲಸಕಾರ್ಯಗಳು ಇರಬಹುದು. ಬಜೆಟೆಡ್ ವರ್ಕ್ಸ್ ಬಿಟ್ಟು ಬೇರೆ ಬೇರೆ ಕೆಲಸಗಳನ್ನು ಇತ್ತೀಚೆಗೆ ಸೇರಿಸಿರುವುದನ್ನು ನಾನ್ ಬಜೆಟೆಡ್ ವರ್ಕ್ಸ್ ಅನ್ನೂ ತೆಗೆದುಕೊಳ್ಳುವುದಕ್ಕೆ ಏನು ಕಾರಣ ಎನ್ನುವುದನ್ನು ಹೇಳಬೇಕು.

ವರ್ಕ್ ಚಾರ್ಜ್ಡ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ ಕೆಲಸ ಮಾಡತಕ್ಕ ೧೪ ಸಾವಿರ ಜನರಿಗೆ ಸಂಬಂಧಪಟ್ಟ ಹಾಗೆ ಈಗಾಗಲೇ ಸೀನಿಯಾರಿಟಿ ಲಿಸ್ಟ್ ಮಾಡುತ್ತಿದ್ದಾರೆ. ಬೆಂಗಳೂರು ಡಿವಿಜನ್ ಬಗ್ಗೆ ಹೇಳಬೇಕಾದರೆ ಅನೇಕರನ್ನು ಕೆಲಸದಿಂದ ಈ ಹೊತ್ತು ನಾಳೆ ತೆಗೆಯುವುದರಲ್ಲಿದ್ದಾರೆ. ನಾಲ್ಕಾರು ವರ್ಷದಿಂದ ಕೆಲಸ ಮಾಡಿರುವವರಿದ್ದಾರೆ. ಇವರ ವಿಚಾರವನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆನ್ನುವ ಮಾತನ್ನು ಹೇಳಿದರೂ ಕೂಡ ಅಂತಿಮ ತೀರ್ಮಾನವನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳುವವರೆಗೂ ಯಾರನ್ನೂ ತೆಗೆಯಬಾರದು ಎನ್ನುವ ನಿದೇಶನವನ್ನು ಕೊಡುತ್ತಾರೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಚನ್ನಬಸಪ್ಪನವರು ರಾಜಕಾರಣದಲ್ಲಿ ಭ್ರಷ್ಟಾಚಾರ ತಲೆ ಎತ್ತಿ ನಿಂತಿದೆ ಎನ್ನುವುದನ್ನು ಹೇಳಿದರು. ಶ್ರೀ ಜಯಪ್ರಕಾಶ ನಾರಾಯಣ್ ಅವರು ಹೇಳಿದ ಮೇಲೆ ಎರಡನೆಯವರಾಗಿ ಮಾನ್ಯ ಮಂತ್ರಿಗಳು ಅಧಿಕಾರ ಕ್ಷೇತ್ರದಲ್ಲಿ ನಿಂತುಕೊಂಡು ಹೇಳುತ್ತ ಇರುವುದು ಸಂತೋಷದ ಮಾತು.

ಹಾಸನ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ಆಯೋಗದ ರಿಪೋರ್ಟ್ ಸರ್ಕಾರಕ್ಕೆ ಬಂದಿದೆ. ಅಧಿಕಾರಿಗಳ ಮೇಲೆ ಖಚಿತವಾದ ಆರೋಪ ರುಜುವಾತಾದರೂ ಕೂಡ ಅವರನ್ನು ಸಸ್ಪೆಂಡ್ ಮಾಡದೆ, ಸಸ್ಪೆಂಡ್ ಮಾಡುವ ಆಜ್ಞೆಯನ್ನು ಮುಖ್ಯಮಂತ್ರಿಗಳು ತಡೆ ಹಿಡಿದಿದ್ದಾರೆ ಎಂದರೆ ಇದು ಬಹುಶಃ ಅಧಿಕಾರಿಗಳಿಗೆ ವರ್ಚಸ್ಸು ಇದೆಯೋ ಅಥವಾ ಏನಾದರೂ ರಾಜಕಾರಣದ ಒತ್ತಡವಿದೆಯೋ ಏನು ಕಾರಣ ಎನ್ನುವುದನ್ನು ಹೇಳಬೇಕು. ಹಾಸನ ಪ್ರಕರಣದಲ್ಲಿ ಒಳಗಾಗಿರತಕ್ಕ ಅಧಿಕಾರಿಗಳನ್ನು, ಹಾಸ್ಪಲ್ ಬಿಲ್ಡಿಂಗಿಗೆ ಕೊಟ್ಟಿರತಕ್ಕ ಸಿಮೆಂಟ್ ಮತ್ತು ಕಬ್ಬಿಣದ ಅಪಹರಣವಾಗಿರುವುದಕ್ಕೆ ಜವಾಬ್ದಾರರಾಗಿರತಕ್ಕ ಅಧಿಕಾರಿಗಳನ್ನೂ ಹಾಗೂ ಕಬಿನಿ ಮತ್ತು ಅಪ್ಪರ್ ಕೃಷ್ಣ ಪ್ರಕರಣದಲ್ಲಿ ಒಳಗಾಗಿರತಕ್ಕ ಅಧಿಕಾರಿಗಳನ್ನು ಸಸ್ಪೆಂಡ್ ಮಾಡದೆ ಇರುವುದಕ್ಕೆ ಪ್ರಬಲವಾದ ಕಾರಣಗಳೇನಿವೆ ಎನ್ನುವುದನ್ನೂ ಹೇಳಬೇಕು.

ಶ್ರೀ ಕೆ. ಎಫ್. ಪಾಟೀಲ್.—ಮಾನ್ಯ ಚನ್ನಬಸಪ್ಪನವರು ಬಹಳ ನೊಂದುಕೊಂಡು ಮಾತನಾಡಿದರು ಅವರ ಮನಸ್ಸಿಗೆ ನೋವಾಗಿರುವುದಕ್ಕೆ ನನಗೂ ಖೇದವೆನಿಸುತ್ತದೆ. ಆದರೆ ಈ ಪ್ರಕರಣದಲ್ಲಿ ಸರ್ಕಾರ ಮತ್ತು ಕಂಟ್ರಾಕ್ಟರುಗಳು, ಕೆಲವು ಅಧಿಕಾರಿಗಳು ಇಷ್ಟಕ್ಕೆ ಸಂಬಂಧಪಟ್ಟಂತೆ ಮಾತ್ರ ಈ ಸಭೆಯಲ್ಲಿ

(ಶ್ರೀ ಕೆ. ಹೆಚ್. ಪಾಟೀಲ್)

ವಿಚಾರ ಮಾಡಬೇಕಾಗಿತ್ತು. ನಮ್ಮ ಸ್ನೇಹಿತರು ಹೇಳಿದ ಹಾಗೆ ರಾಜಕೀಯ ಒತ್ತಡಗಳು, ಭ್ರಷ್ಟಾಚಾರಗಳು, ಇಲಾಖೆಯಲ್ಲಿರುವಂಥ ಅಂಥಾ ಅಧಿಕಾರಿಗಳಲ್ಲಿದವರು ಮೇಲಿನ ಎಲ್ಲ ಪ್ರಕರಣಗಳನ್ನೂ ತನಿಖೆ ಮಾಡು ಮಾಡುವುದಕ್ಕೆ ನ್ಯಾಯ ತನಿಖೆ ನಡೆಸಬೇಕು ಎಂದು ಹೇಳತಕ್ಕದ್ದು ಸೂಕ್ತವೋ ಅಲ್ಲವೋ ಎನ್ನುವುದನ್ನು ಯೋಚನೆ ಮಾಡಬೇಕು ಅವರಿಗೆ ಮನಸ್ಸು ನೊಂದಿದೆ ಎಂದು ಎಲ್ಲವನ್ನೂ ಇಲ್ಲಿ ತೋಡಿಕೊಂಡಿರಬಹುದು. ನಮಗೆ ಬೇಕಾಗಿರುವುದು ಅಧಿಕಾರಿಗಳು ತಪ್ಪು ಮಾಡಿದ್ದಾರೆಯೋ ಹೇಗೆ ಎನ್ನುವುದು. [illegible] ಜನಗಳಿಗೆ ನಷ್ಟವಾಗಿದ್ದರೆ ಮುಂದೆ ಏನು ಮಾಡುತ್ತೀರಿ ಎನ್ನುವುದನ್ನು ತಿಳಿಯಲು ನಮಗೆ ಹಕ್ಕು ಇದೆ. [illegible] ಇತರ ವಿಷಯಗಳನ್ನು ಅವರು ಇಲ್ಲಿ ಹೇಳುವ ಕಾರಣ ಇರಲಿಲ್ಲ

ಅಧ್ಯಕ್ಷರು.—ಅದಕ್ಕೆ ಸಂಬಂಧಪಟ್ಟ ಹಾಗೆ ಹೇಳಿದ್ದಾರೆಯೇ ಹೊರತು ಮತ್ತೇನೂ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಹಾಸನದಲ್ಲಿ ಹಣ ಪಾವತಿಯಾಗಿರುವುದರಲ್ಲಿ ಐದು ಜನ ಕಂಟ್ರಾಕ್ಟರುಗಳಿಗೆ ಬಹುತೇಕ ಎಂದರೆ ಸುಮಾರು ೮೦ ಪರ್ಸೆಂಟ್ ಹಣ ಪಡೆಯುವುದರಲ್ಲಿ ಯಶಸ್ವಿಯಾಗಿದ್ದಾರೆ. ಇದರ ಬಗ್ಗೆ ಸಹ ವಿವರಣೆ ಕೊಡಬೇಕು.

ಶ್ರೀ ಪಿ. ಎಂ. ಚಾಂಗಿ.—ಬಿಜಾಪುರದ ಜಿಲ್ಲೆಯ ಮುದ್ದೇಬಿಹಾಳ ಮತ್ತು ಬಾಗೇವಾಡಿಯಲ್ಲಿ ಕೈಕೊಂಡ ಬರಗಾಲ ಕಾಮಗಾರಿ ಬಗ್ಗೆ ವಿಜಿಲೆನ್ಸ್ ಕಮಿಷನ್‌ಗೆ ಕಳಿಹಿಸಿದಿರಿ. ಅಲ್ಲಿಂದ ಫೈನಲ್ ರಿಪೋರ್ಟ್ ಬಂದಿದೆಯೋ ಹೇಗೆ? ಇದರ ಸಂಬಂಧ ಮಾಹಿತಿ ಬೇಕು.

SRI H. M. CHANNABASAPPA.—Now, I request the hon. members of this House to vote the demands.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಮಂತ್ರಿಗಳು ಉತ್ತರ ಹೇಳುವಾಗ ಪ್ರಸ್ತಾಪವಾದಂಥ ವಿಷಯ ಹೇಳಿದರು [illegible] ಕೆ. ಮೂರ್ತಿಯವರು ಕಾರ್ಯದರ್ಶಿಯವರಿಗೆ ಟೆಲಿಫೋನ್ ಮಾಡಿ ಬೆದರಿಕೆ ವಿಷಯ ಹೇಳಿದರು. ಅದನ್ನು ಹೋಂ ಮಿನಿಸ್ಟರಿಗೆ ತಿಳಿಸಿದ್ದೀರಾ? ತಿಳಿಸಿದ್ದರೆ ಅವರ ಬಗ್ಗೆ ಏನೇನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದಕ್ಕೆ ತಾವು ಉತ್ತರ ಕೊಡಬೇಕು. "ಧನಬೇಕು, ಛಲಬೇಕು, ಪರ ಸತಿಯೇ ಬೇಕು, ಪರ ಧನವೇ ಬೇಕು, ಪರ ದೇಶೀಯ ಮದ್ಯವೇ ಬೇಕು." ಎನ್ನುವವರಿದ್ದಾರೆ ಎಂದು ಹೇಳಿದರು. ಅವರ ಹೆಸರೇನಾದರೂ ಇದ್ದರೆ ದಯಮಾಡಿ ಅದನ್ನು ಪ್ರಕಟಿಸಬೇಕು.

MADAM SPEAKER.—I will now put the motion to the vote of the House.

The question is :—

"That the respective sums not exceeding the amounts mentioned in the list of Demands be granted to Government to defray the charges which will come in course of payment during the financial year ending with 31st day of March 1975, in respect of Demand Nos. 10, 19, 20, 35, 55, 57, 58 and 41."

The motion was adopted and the sums were granted

As Ordered by the Chair the motion for Demands for Grants adopted by the House are redropuced below :

Demand No. 10—Other Taxes and Duties on Commodities and Services

"That a sum not exceeding Rs. 22,00,000 inclusive of the sum granted 'on account' be granted to the Government to defray the charges which will come in course of payment during the financial year

ending 31st day of March 1975 in respect of "Other Taxes and Duties on Commodities and Services."

Demand No. 19—Public Works

"That a sum not exceeding Rs. 7,09,75,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of "Public Works."

Demand No. 20—Buildings

"That a sum not exceeding Rs 4,51, 1,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of "Buildings."

Demand No. 35—Relief on account of Natural Calamities

"That a sum not exceeding Rs. 2,36,0 ,000 inclusive of the sum granted 'on account' be granted to the Government to defray the charges which will come in course of payment during the financia year ending 31st day of March 1975 in respect of "Relief on accoun of Natural Calamities."

Demand No. 57—Roads and Bridges

"That a sum not exceeding Rs. 12,13,65,000 inclusive of the sum granted 'on account' be granted to the Government to defray the charges which will come in course of payment during the financiat year ending 31st day of March 1975 in respect of "Roads and Bridges"

Demand No. 58—Road and Water Transport Services

"That a sum not exceeding Rs. 31,51,000 inclusive of the sum granted 'on account' be granted to the Government to defray the charges which will come in course of payment during the financell year ending 31st day of March 1975 in respect of 'Road and Watia Transport Services."

Minister of State for Minor Irrigation

Demand No. 41—Minor Irrigation

"That a sum not exceeding Rs. 12,27,50,000 inclusive of the sum granted 'on account' be granted to the Government to defary the charges which will come in course of payment during the financia year ending 31st day of March 1975 in respect of "Minor Irrigation.'

MADAM SPEAKER.—The House now stands adjourned **to** meet again at 1-30 P. M.

The House rose at Twenty five Minutes past Twelve of the Clock and reassembled at Forty two minutes past One of the clock.

(Madam Speaker in the Chair)

STARRED QUESTIONS TO WHICH ORAL ANSWERS WERE GIVEN

PLAY CENTRES AND RECREATIONAL CLUBS FOR CHILDREN IN DAVANAGERE CITY

196. SMT. C. NAGAMMA KESHAVA MURTHY (Davanagere).—

Will the Minister for Community Development and Social Welfare be pleased to state.

(a) whether there is any proposal before the Government to start Play Centres and recreational clubs for children residing in slum and under-previleged areas in Davanagere City under the programme of non-institutional services of the Juvenile Service Bureau ;

(b) the names of other places where the programme has been introduced ; the number of beneficiaries and the amount spent on this scheme ?

SRI N. RACHAIAH (Minister for Community Development and Social Welfare).—

(a) Yes.

(b) Five Plan Centres and Recreational Clubs have been started at Bangalore. The daily average number of beneficiaries in these centres is 3[illegible]. The expenditure on these centres during 1972-73 was Rs. 20,000.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.— ಸ್ವಾಮಿ, (ಎ)ಗೆ ಉತ್ತರವಾಗಿ ಹೌದು ಎಂದು ತಿಳಿಸಿದ್ದೀರಿ. ಈ ಪ್ರಪೋಸಲ್ಸ್ ಯಾವಾಗ ಬಂತು? ಇಷ್ಟು ವಿಳಂಬ ಏತಕ್ಕೆ ಆಯಿತು ಎನ್ನುವುದನ್ನು ತಿಳಿಸಬೇಕು ಮತ್ತು ಈ ಸ್ಕೀಮು ಬಹಳ ಅವಶ್ಯಕತೆ ಇರುವುದರಿಂದ ಇದನ್ನು ಕೂಡಲೇ ಸ್ಯಾಂಕ್ಷನ್ ಮಾಡುತ್ತೀರಾ?

†ಶ್ರೀ ಎನ್. ರಾಚಯ್ಯ.—ಈಗಿನ ಪರಿಸ್ಥಿತಿಯಲ್ಲಿ ಸಮಾಜ ಕಲ್ಯಾಣ ಖಾತೆಯಲ್ಲಿ ಯಾವುದೇ ಸಲಹೆಗಳು ಬಂದರೂ ಕೂಡ ಸಾಮಾನ್ಯವಾಗಿ ನಿಧಾನವಾಗುತ್ತದೆ. ಇದನ್ನು ಸರಿಪಡಿಸುತ್ತಿದ್ದೇನೆ. ಮತ್ತು ಈ ಶಾಲೆಯ ವಿಚಾರದಲ್ಲಿ ಸೂಕ್ತವಾದಂಥ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ಸಾಧ್ಯವಾದರೆ ಈ ವರ್ಷವೇ ಅದನ್ನು ಜರೂರಾಗಿ ಮಂಜೂರು ಮಾಡುತ್ತೇನೆ.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.— ನಾನ್ ಇನ್ಸ್ಟಿಟ್ಯೂಷನಲ್ ಸರ್ವಿಸಸ್ ಪ್ರೋಗ್ರಾಂನಲ್ಲಿ ಹೆಚ್ಚು ಖರ್ಚು ಇಲ್ಲದೆ ನೂರಾರು ಮಕ್ಕಳಿಗೆ ಸಹಾಯ ಮಾಡತಕ್ಕಂಥ ಜುವೆನೈಲ್ ಸರ್ವೀಸಸ್‌ನ್ನು ಇನ್ನೂ ಅನೇಕ ಕಡೆಗಳಲ್ಲಿ ತೆರೆಯುವ ಯೋಜನೆ ಸರ್ಕಾರಕ್ಕೆ ಇದೆಯೇ?

ಶ್ರೀ ಎನ್. ರಾಚಯ್ಯ.— ಸರ್ಕಾರದ ಆ ಒಂದು ಯೋಜನೆಯೂ ಕೂಡ ಇದೆ. ಮತ್ತು ಈ ಯೋಜನೆಯನ್ನು ರಾಜ್ಯದ ಅನೇಕ ಭಾಗಗಳಲ್ಲಿ, ಮುಖ್ಯ ಸ್ಥಳಗಳಲ್ಲಿ ಅಲ್ಲಿಯ ಮಕ್ಕಳಿಗೆ ಅನುಕೂಲ